# ಅಪರಂಜಿ



ತಿಳಿನಗೆಯ ಕಾರಂಜಿ

ಆಗಸ್ಟ್ 2022

ಸ್ವಾತಂತ್ರ್ಯ ಅಮೃತೋತ್ಸವ 75 ವಿಶೇಷಾಂಕ



ಸ್ವಾತಂತ್ರ್ಯ
ಅಮೃತೋತ್ಸವದ
ಶುಭಾಶಯಗಳು

ಬಿಡಿ ಪ್ರತಿ: ರೂ. 10/-



# ಅಪರಂಜಿ

ತಿಳಿನಗೆಯ ಕಾರಂಜಿ

ಸಂಪುಟ 39
ಸಂಚಿಕೆ - 11
ಆಗಸ್ಟ್ - 2022

**ಸಂಪಾದಕ ಮಂಡಳಿ**

ಸಂಪಾದಕರು
ಶ್ರೀ ಎಂ. ಶಿವಕುಮಾರ್

ಉಪ ಸಂಪಾದಕರು
ಶ್ರೀ ಬೇಲೂರು ರಾಮಮೂರ್ತಿ

ಸದಸ್ಯರು
ಶ್ರೀ ಎಚ್.ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

**ಆಡಳಿತ ಮಂಡಳಿ**

ಮ್ಯಾನೇಜಿಂಗ್ ಟ್ರಸ್ಟಿ
ಶ್ರೀ ಉಲ್ಲಾಸ ರಾಯಸಂ

ಟ್ರಸ್ಟಿಗಳು
ಶ್ರೀ ಎಂ ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಎಚ್.ಎನ್. ಆನಂದ
ಶ್ರೀ ಸಿ.ಆರ್. ಸತ್ಯ
ಶ್ರೀ ಕೆ. ರವೀಂದ್ರ ರಾವ್
ಶ್ರೀ ವಿ. ಆರ್. ಭರತ್

**ಚಂದಾ ವಿವರ:**
**ಬಿಡಿ ಪ್ರತಿ: ರೂ. 10/-**
**ವಾರ್ಷಿಕ ಚಂದಾ: ರೂ. 100/-**
**ಹತ್ತು ವರ್ಷದ ಚಂದಾ: ರೂ. 750-**

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:
ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ.

## ಈ ಸಂಚಿಕೆಯಲ್ಲಿ.....

| | | |
|---|---|---|
| ಅಪರಂಜಿ ಕಿಡಿ | ಪ್ರಕಾಶ್ | 2 |
| ಲಕ್ಷನಾಮಾರ್ಚನೆ ಪ್ರಸಂಗ | ವತ್ಸನ | 3 |
| ಉಪ್ಪಿಟ್ಟು ಸಂದೇಶ ! | ಚಿತ್ರಾ ರಾಮಚಂದ್ರನ್ | 6 |
| ಸ್ವಾತಂತ್ರ್ಯದ ಋಣ | ಚಿಂತಾಮಣಿ ಕೊಡ್ಲೆಕೆರೆ | 9 |
| ಸರ್ವಂ ತ್ರಿವರ್ಣಮಯಂ | ನಳಿನಿ ಸೂರ್ಯಪ್ರಕಾಶ್ | 12 |
| ಸ್ವಾತಂತ್ರ್ಯದ ಕಳ್ಳಗಾಳು! | ತುರುವೇಕೆರೆ ಪ್ರಸಾದ್ | 14 |
| ಅಜ್ಜನ ಹಿರಾಯಿಕ್ಸ್ | ಇ.ಆರ್. ರಾಮಚಂದ್ರನ್ | 28 |
| ಹರಕೆ | ವಿ.ವಿಜಯೇಂದ್ರ ರಾವ್ | 30 |
| ಜೈ ಜವಾನ್ ... ಜೈ ಕಸಾನ್ ! | ಗಣೇಶ ಹೆಗ್ಗಡೆ | 31 |
| ಸ್ವಾತಂತ್ರ ಸ್ವಾರಸ್ಯಗಳು | ಸಂಗ್ರಹ : ಸುಕೇಶವ | 34 |
| ತುಂತುರು | ದನಂಆ | 36 |
| ಕ್ಯಾಪ್ಟನ್ ನರ್ಗೀಸ ಮತ್ತು ..... | ಸಂಜಯ ಹಾವನೂರ | 37 |

***

**ಆಗಸ್ಟ್ 1947 ರ ಕೊರವಂಜಿಯಿಂದ**

| | | |
|---|---|---|
| ಜಾಹೀರಾತು ಸ್ವಾರಸ್ಯ | | 17 |
| ಕುಹಕಿಡಿಗಳು | | 19 |
| ಆಗಸ್ಟ್ ಹದಿನೈದರಂದು | ದಾಶರಥಿ ದೀಕ್ಷಿತ್ | 21 |
| ಎಲ್ಲಿಗೆ? | ಗೋರೂರು ರಾಮಸ್ವಾಮಯ್ಯಂಗಾರ್ | 23 |

ವ್ಯಂಗ್ಯ ಚಿತ್ರಗಳು: ರಘುಪತಿ ಶೃಂಗೇರಿ
ಆದರ್ಶ ಪೈ

ಪ್ರಕಾಶಕರು: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003. email: koravanjiaparanji@gmail.com ಮೊಬೈಲ್:9845264304

ಸಂಪರ್ಕ ವಿಳಾಸ: **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು - 560 068. ದೂರವಾಣಿ: 080-26688488. email: belururamamurthy@gmail.com

**For Online payment of subscription:** Name : KORAVANJI APARANJI TRUST
Current Account No.: 109804180000056, IFS Code : SVCB0000098
SVC Co-operative Bank Ltd., Branch: Malleshwaram
Please mail us your name and address if you are a new subscriber. Mail your subscriber ID if it is renewal. Our email ID: koravanjiaparanji@gmail.com

ಮುದ್ರಣ: ರವಿ ಗ್ರಾಫಿಕ್ಸ್ - ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್



# ಅಪರಂಜಿ ಕಿಡಿ

●ಪ್ರಕಾಶ್

**ಭಾರತದ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸಂತೋಷವನ್ನು ಅಪರಂಜಿ ಎಲ್ಲರೊಂದಿಗೆ ಹಂಚಿಕೊಳ್ಳುತ್ತಾ ಸಕಲರಿಗೂ ಶುಭ ಕೋರುತ್ತಾಳೆ.**

oooo

ದತ್ತಪೀಠ ಸೌಹಾರ್ದ ಇತ್ಯರ್ಥ – ಸುದ್ದಿ.

**ಈ ತೆರನಾದ ಸೌಹಾರ್ದದ ಮಹಾಪೂರವೇ ಹರಿಯಲಿ.**

oooooo

ಜಿ.ಎಸ್.ಟಿ. ಪರಿಹಾರ ಸ್ಥಗಿತವಾದರೆ ಕಷ್ಟ – ಪತ್ರಿಕೆ

**ಯಾರಿಗೆ ? !!**

oooooo

ಚಿನ್ನದ ಮೇಲಿನ ಆಮದು ಸುಂಕ ಶೇ. 15ಕ್ಕೆ ಏರಿಕೆ – ಸುದ್ದಿ

**ಸಧ್ಯ ಇದು ನಮಗೆ ಯಾವ ಕಷ್ಟವನ್ನು ಕೊಡುಲ್ಲ !!**

ooooo

ಮಂತ್ರಗಳ ಮೇಲೆ ನಿಗಾ – ಬಿ.ಜೆ. ಪಿ. – ಪತ್ರಿಕೆ

**ಕಲಿಗಾಲ ಎಂದರೆ ಇದೇ. !!!**

ooooo

ಸುಳ್ಳುವದಂತಿಗೆ ಕಿವಿಗೊಡಬೇಡಿ. – ಹೇಳಿಕೆ

**ಅದು ಸುಳ್ಳು ಅಂತ ಗೊತ್ತಾಗೋದು ಹೇಗೆ ಸ್ವಾಮಿ ??**

oooooooo

ಆಯುಷ್ಮಾನ್ ಅಯೋಮಯ !! – ದಿನಪತ್ರಿಕೆ

**ಈ ಯೋಜನೆಯ ಆಯಸ್ಸು ಎಷ್ಟಿದೆಯೋ ನೋಡಬೇಕು !!!**

oooooo

ಬಿ.ಡಿ.ಎ ಹಗರಣ ; 100 ಕೋಟಿ – ಸುದ್ದಿ.

**'ಹಗರಣಗಳು' ಎಂಬ ಹುದ್ದೆಗೆ ಹಿರಿಯ ಮಂತ್ರಿಯೋರ್ವರನ್ನು ಏಕೆ ನೇಮಿಸಬಾರದು??**

ooooo

# "ನಮ್ಮ ನಿಮ್ಮಲ್ಲಿ"

● ಶಿವಕುಮಾರ್

**ಈ ತಿಂಗಳ ಅಪರಂಜಿಯನ್ನು 75ನೇ ಸ್ವಾತಂತ್ರ್ಯೋತ್ಸವ ವಿಶೇಷಾಂಕವನ್ನಾಗಿ ನಿಮಗೆ ನೀಡುತ್ತಿದ್ದೇವೆ. ಇದರಲ್ಲಿ ಸ್ವಾತಂತ್ರ್ಯೋತ್ಸವದ ವಿಶೇಷ ಲೇಖನಗಳೇ ಅಲ್ಲದೇ 1947 ರ ಆಗಸ್ಟ್ ಕೊರವಂಜಿಯಿಂದ ಆಯ್ದ ಕೆಲವು ಬರಹಗಳನ್ನು ನೀಡುತ್ತಿದ್ದೇವೆ. ಈ ಲೇಖನಗಳೆಲ್ಲಾ ನಿಮಗೆ ಮುದ ನೀಡುವುದೆಂದು ಅಪರಂಜಿ ನಂಬಿದ್ದಾಳೆ.**

1947ರಲ್ಲಿ ನಾವು ಬ್ರಿಟಿಷರ ಆಳ್ವಿಕೆಯಿಂದ ಸ್ವತಂತ್ರರಾಗಿ ಆಗಸ್ಟ್ ಹದಿನೈದರ ದಿನವನ್ನು ಸ್ವಾತಂತ್ರ್ಯ ದಿನವೆಂದು ಘೋಷಿಸಿಕೊಂಡಾಗ ನಾನಿನ್ನೂ ಆರುವರ್ಷದ ಬಾಲಕ. ಈಗ ಆ ನೆನಪುಗಳು ನನ್ನನ್ನು ಬೇರೆಯದೇ ಆದ ಒಂದು ಲೋಕಕ್ಕೆ ಕರೆದೊಯ್ಯುವಂತೆ ಭಾಸವಾಗುತ್ತದೆ. ಈ ಗುರಿಯನ್ನು ಸಾಧಿಸಲು ನಮ್ಮ ನಾಡಿನ ಧುರೀಣರು ಕೈಗೊಂಡ ಅಮೋಘ ಹೋರಾಟದ ಬಿಸಿ, ಅಂದಿನ ಸಾಮಾನ್ಯ ಜನತೆ ಈ ಪವಿತ್ರ ಕಾರ್ಯಕ್ಕೆ ಕೈಜೋಡಿಸಿದ ರೀತಿ, ಅಂದಿನ ಪರಿಸರ ಇವುಗಳ ನೇರ ಪರಿಚಯ ನನಗೆ ಚಿಕ್ಕಂದಿನಲ್ಲಿ ಆದದ್ದು ನನ್ನ ಸೌಭಾಗ್ಯ.

ನಲವತ್ತರ ದಶಕದಲ್ಲಿ ನಮ್ಮ ಮನೆಯ ಜನಸಂಖ್ಯೆ ಗಣನೀಯವಾಗಿತ್ತೆಂದೇ ಹೇಳಬಹುದು. ನಮ್ಮ ಅಪ್ಪ ಅಮ್ಮಂದಿರ ಜೊತೆಗೆ ನಾವು ಆರು ಮಕ್ಕಳು, ನಮ್ಮ ಇಬ್ಬರು ಚಿಕ್ಕಪ್ಪಂದಿರು, ಒಬ್ಬ ಚಿಕ್ಕಮ್ಮ, ಮನೆಯಲ್ಲೇ ವಾಸವಾಗಿದ್ದ ಅಡುಗೆಯವನು, ಮನೆಯ ಹಿಂದೆ ವಾಸವಾಗಿದ್ದ ತೋಟಗಾರ ಮತ್ತು ಅವನ ಸಂಸಾರ ಹೀಗಿತ್ತು ನೋಡಿ ಆ ತುಂಬಿದ ಮನೆ. ನಮ್ಮ ಚಿಕ್ಕಪ್ಪಂದಿರಾದ ಚಂದು ಮತ್ತು ಕಿಟ್ಟು ಇಪ್ಪತ್ತರ ಆಸುಪಾಸಿನ ತರುಣರು. ಕಾಂಗ್ರೆಸ್ ಭಕ್ತರು. ಪ್ರತಿಸಂಜೆ ಮನೆಯ ಹಿಂದಿನ ಕಟ್ಟಿಗೆ ಕೋಣೆಯಲ್ಲಿ ಕೂತು ದಿನಪತ್ರಿಕೆಗಳ ಮೇಲೆ ನೀಲಿ ಶಾಯಿಯಲ್ಲಿ,"ನಮಗೆ ಬೇಕು ಜವಾಬ್ದಾರಿ ಸರ್ಕಾರ" ಅಂತ ದೊಡ್ಡ ಅಕ್ಷರಗಳಲ್ಲಿ ಬರೆದು, ರಾತ್ರೋ ರಾತ್ರಿ ಆ ಪೋಸ್ಟರುಗಳನ್ನು ನಗರದ ಗೋಡೆಗಳ ಮೇಲೆ ಅಂಟಿಸುವುದು ಅವರ ದಿನಚರಿಯ (ನಿಶಾಚರಿಯೂಕೂಡ) ಒಂದು ಭಾಗವಾಗಿತ್ತು.

ಒಮ್ಮೊಮ್ಮೆ ನಮ್ಮ ದೊಡ್ಡಕ್ಕ ಹನ್ನೆರಡು ವರ್ಷದ ವಿಮಲಾ, ಇವರ ಈ ದೇಶಪ್ರೇಮದ ಕಾಯಕಕ್ಕೆ ನೆರವಾಗುತ್ತಿದ್ದಳು. ಒಮ್ಮೆ ಕಿಟ್ಟು ಅವಳಿಗೆ ಭಿತ್ತಿಪತ್ರ ಬರೆಯುವ ಕೆಲಸ ಕೊಟ್ಟಿದ್ದಾಗ, ಅವಳು "ಬಹಿರಂಗ ಸಭೆ" ಗೆ ಬದಲಾಗಿ "ಬಹಿಂಗ ಸಭೆ" ಅಂತ ಬರೆದು ಚೆನ್ನಾಗಿ ಬಯ್ಸಿಕೊಂಡಿದ್ದು ನನಗೆ ಇನ್ನೂ ಸ್ಪಷ್ಟವಾಗಿ ನೆನಪಿದೆ. ಚಿಕ್ಕಪ್ಪ ಚಂದುವಿಗೆ ಕೆ.ಎಸ್ ನರಸಿಂಹ ಸ್ವಾಮಿಯವರ "ಮೈಸೂರು ಮಲ್ಲಿಗೆ"ಯ ಪ್ರೇಮ ಕವನಗಳು ಹಾಗೂ ದೇಶಭಕ್ತಿಯನ್ನು ಪ್ರಚೋದಿಸುವ ಕ್ರಾಂತಿ ಗೀತೆಗಳು ಅತ್ಯಂತ ಪ್ರಿಯವಾಗಿದ್ದವು. ಮಹಾತ್ಮಾ ಗಾಂಧಿಯವರು ವಿದೇಶದಲ್ಲಿ ತಯಾರಾದ ಬಟ್ಟೆಗಳನ್ನು ಬಹಿಷ್ಕರಿಸಿ ದೇಶೀಯ ಖಾದಿಯನ್ನೇ ಧರಿಸಬೇಕೆಂದು ಆಂದೋಳನ

ನಡೆಸಿದಾಗ, ಚಂದು ನಮ್ಮನ್ನೆಲ್ಲಾ ಕರೆದು ಈ ಆಂದೋಳನದ ಬಗ್ಗೆ ಒಂದು ಕ್ರಾಂತಿ ಗೀತೆಯನ್ನು ಬಾಯಿಪಾಠಮಾಡಿಸಿದ್ದ. ಆ ಗೀತೆ ಹೀಗಿತ್ತು. ( ಅದರ ಮೊದಲ ಚರಣ ಮರೆತುಹೋಗಿದೆ, ಆದರೆ ವಿಷಯ ತಿಳಿದಿರುವುದರಿಂದ ಅದನ್ನು ನೀವೇ ಸೇರಿಸಿಕೊಳ್ಳಬಹುದು)

**ಹಾಕು ಬೆಂಕಿಲಿ, ಉರಿಲಿ ಧಗಧಗ,**
**ಧರಿಸು ಖಾದಿ ಪವಿತ್ರವು.**

ಇದಾದ ಹಲವು ದಿನಗಳ ನಂತರ ಒಮ್ಮೆ ನಮ್ಮಪ್ಪ ನನ್ನ ತಮ್ಮ ಪ್ರಕಾಶನನ್ನು ಕರೆದು, "ಇವತ್ತು ಸ್ಕೂಲಿನಲ್ಲಿ ಏನು ಕಲಿತೆಯೋ?" ಅಂತ ಕೇಳಿದಾಗ ಅವ "ಹಾಕು ಬೆಂಕಿಲಿ, ಉರಿಲಿ ಧಗಧಗ, ಧರಿಸು ಖಾದಿ ಪವಿತ್ರವು" ಅಂತ ಉತ್ತರಿಸಿದ್ದ. ನಮ್ಮಪ್ಪ "ಥೂ, ಇದನ್ನೆಲ್ಲಿ ಕಲಿತೆಯೋ, ಜೋರಾಗಿ ಹೇಳಬೇಡ ಪೋಲೀಸರು ಜೈಲಿಗೆ ಹಾಕ್ತಾರೆ. ಬೇರೆ ಏನು ಕಲಿತಿದ್ದೀಯಾ?" ಅಂತ ಕೇಳಿದರು. ಪಾಪ ಪ್ರಕಾಶ ಕಲಿತದ್ದೆಲ್ಲಾ ಚಂದು ಹೇಳಿಕೊಟ್ಟಿದ್ದು. "ಶಾನುಭೋಗರ ಮಗಳು, ತಾಯಿಯಿಲ್ಲದ ಹುಡುಗಿ, ವರುಷ ಹನ್ನೆರಡು, ಮದುವೆಯಿಲ್ಲ" ಅಂದ. ನಮ್ಮಪ್ಪ ಯಾಕೆ ತಲೆ ಚಚ್ಚಿಕೊಂಡರು ಅಂತ ನಮ್ಮಿಬ್ಬರಿಗೂ ಅರ್ಥವಾಗಲೇ ಇಲ್ಲ.

ನಮ್ಮಪ್ಪನಿಗೆ ಬಹು ದೊಡ್ಡ ಸ್ನೇಹಿತರ ಬಳಗ. ಅದರಲ್ಲಿ ಒಬ್ಬ ಆಪ್ತರಂದರೆ ಪಿ.ಎಮ್ ಲಾಹಿರಿ. ಪೂರ್ಣೇಂದು ಮೋಹನ್ ಲಾಹಿರಿ ಆ ದಿನಗಳಲ್ಲಿ ಕೋಲಾರದ ಚಿನ್ನದ ಗಣಿಯ ಛೀಫ್ ಎಂಜಿನಿಯರ್ ಆಗಿದ್ದರು. ವಾರಾಂತ್ಯದಲ್ಲಿ ಲಾಹಿರಿ ತಮ್ಮ ಇಡೀ ಕುಟುಂಬದೊಂದಿಗೆ ನಮ್ಮ ಮನೆಗೆ ಬಂದುಬಿಡುತ್ತಿದ್ದರು. ಅವರ ಹೆಂಡತಿ ಯಾವಾಗಲೂ ನಿಟ್ಟಿಂಗ್ ಹಾಕುತ್ತಿದುದರಿಂದ ಅವರು ನಮಗೆಲ್ಲಾ ನಿಟ್ಟಿಂಗ್ ಅತ್ತೆ. ದೀಪ್ತಿ (ಅವಳನ್ನ ಡಿಪ್ಪಿ ಅಂತ ಕರೆಯುತ್ತಿದ್ದರು) ರೇಬಾ ಮತ್ತು ಮೋನಾ ಅವರ ಮೂವರು ಹೆಣ್ಣು ಮಕ್ಕಳು. ಇವರೆಲ್ಲಾ ಕಾನ್ವೆಂಟ್ ಹುಡುಗಿಯರಾದುದರಿಂದ ಮಾತೆಲ್ಲಾ ಬರೀ ಇಂಗ್ಲೀಷ್. ನಮ್ಮ ಅಕ್ಕಂದಿರೂ ಕಮಲಾಬಾಯಿಯವರ ಸ್ಕೂಲಿಗೆ ಹೋಗುತ್ತಿದುದರಿಂದ ಅವರೆಲ್ಲಾ ಯಾವಾಗಲೂ ಸರಸ ಸಂಭಾಷಣೆಯಲ್ಲಿ ನಿರತರಾಗಿರುತ್ತಿದ್ದರು. ಕೇವಲ ಕನ್ನಡ ಕಲಿಯುತ್ತಿದ್ದ ನನಗೆ ಮತ್ತು ಪ್ರಕಾಶನಿಗೆ ಇವರೆಲ್ಲಾ ಮನೆಗೆ ಬಂದರೆ ಏನೋ ಒಂದು ರೀತಿಯ ಕೀಳರಿಮೆ. ಇರಲಿ.

ನಿಟ್ಟಿಂಗ್ ಅತ್ತೆ ಯಾಕೆ ಯಾವಾಗಲೂ ನಿಟ್ಟಿಂಗ್ ಹಾಕ್ತಾ ಇರ್ತಾರೆ ಅಂತ ಒಮ್ಮೆ ನಮ್ಮ ತಾಯಿಯನ್ನು ಕೇಳಿದೆ. "ಅವರು ಪರಮ ದೇಶಭಕ್ತೆ. ನಿಟ್ಟಿಂಗ್ ಹಾಕಿದ ಮಫ್ಲರ್‌ಗಳನ್ನು ಸೇವಾದಳದ ಮೂಲಕ ಬಡವರಿಗೆ ಹಂಚುತ್ತಾರೆ." ಅಂತ ಉತ್ತರಿಸಿದ್ದರು. ಒಮ್ಮೆ ವಾರಾಂತ್ಯವಿಲ್ಲದಿದ್ದರೂ ಲಾಹಿರಿ ದಂಪತಿಗಳು ನಮ್ಮ ಮನೆಗೆ ಬಂದರು. ನಿಟ್ಟಿಂಗ್ ಅತ್ತೆ ತುಂಬಾ ಬಳಲಿದಂತೆ ಕಾಣುತ್ತಿತ್ತು. ನಮ್ಮ ತಾಯಿಯವರ ರೂಮಿನಲ್ಲಿ ಅವರ ಮಲಗಿಕೊಂಡರು. ಅವತ್ತು ಸಂಜೆ ರೇಡಿಯೋದಲ್ಲಿ ನಿರಂತರವಾಗಿ ಬರುತ್ತಿದ್ದ ಸುದ್ದಿ ವಾಹಿನಿಯನ್ನು ನಮ್ಮ ಅಪ್ಪ ಮತ್ತು ಲಾಹಿರಿ ಅಂಕಲ್ ಬಹು ಆಸಕ್ತಿಯಿಂದ ಕೇಳುತ್ತಿದ್ದರು. "ಏನು ವಿಷಯ?" ಅಂತ ಕಮಲಕ್ಕಳನ್ನು ಕೇಳಿದೆ. ಅವಳು, "ನೌಖಾಲಿ ಅನ್ನೋಕಡೆ ಮಹಾತ್ಮ ಗಾಂಧಿ ಉಪವಾಸ ಮಾಡ್ತಾ ಇದಾರಂತೆ. ಅದಕ್ಕೆ ಆಂಟಿ ಕೂಡ ತಾವೂ ಉಪವಾಸ ಶುರುಮಾಡಿಬಿಟ್ಟಿದ್ದಾರೆ. ಯಾರು ಏನು ಹೇಳಿದರೂ ಕೇಳ್ತಾ ಇಲ್ಲ. ಅದಕ್ಕೆ ಡಾಕ್ಟರ್ ಹತ್ತಿರ ಇದ್ರೆ ವಾಸಿ ಅಂತ ಇಲ್ಲಿಗೆ ಬಂದಿದ್ದಾರೆ" ಅಂತ ವಿವರಿಸಿದಳು.

ಅಂದು ಸಂಜೆ ಏಳೂವರೆಗೆ "ಮಹಾತ್ಮಾ ಗಾಂಧಿಯುವರು, ತಮ್ಮ ಉಪವಾಸವನ್ನು ನಿಲ್ಲಿಸಿದ್ದಾರೆ. ಕಿತ್ತಳೆ ರಸವನ್ನು ಸೇವಿಸಿದರು" ಎಂಬ ಸುದ್ದಿ ಬಂದ ತಕ್ಷಣ ನಮ್ಮಮ್ಮ ಹೋಗಿ ಸ್ವಲ್ಪ ಹಾಲು ಬಿಸಿಮಾಡಿ ನಿಟ್ಟಿಂಗ್ ಅತ್ತೆಗೆ ಕೊಟ್ಟರು. ಗಾಂಧಿ ತಮ್ಮ ಉಪವಾಸವನ್ನು ನಿಲ್ಲಿಸಿದ ಸುದ್ದಿ ಕೇಳಿ ಅತ್ತೆಗೆ ಆದ ಸಂತಸವನ್ನು ಅವರ ಮುಗ್ಧ ಮಂದಹಾಸದಲ್ಲೇ ಕಾಣಬಹುದಾಗಿತ್ತು.

ಅಂದಿನ ಸ್ವಾತಂತ್ರ್ಯ ಹೋರಾಟದ ಮುಂಚೂಣಿಯಲ್ಲಿದ್ದ ಅನೇಕ ಧುರೀಣರು ನಮ್ಮ ತಂದೆಯವರ ಪರಿಚಿತರು. ಇವರ ಬಗ್ಗೆ ಮಾತನಾಡುತ್ತಾ ಒಮ್ಮೆ ನಮ್ಮ ತಂದೆಯವರು ಹೀಗೆಂದಿದ್ದರು.

"ಇವರೆಲ್ಲಾ ತಮ್ಮ ಆರೋಗ್ಯದ ಅಗತ್ಯಗಳಿಗೆ ನನ್ನಲ್ಲಿಗೆ ಬರುತ್ತಿದ್ದರು. ಅವರಿಂದ ನಾನು ಹಣವನ್ನು ಎಂದೂ ತೆಗೆದುಕೊಳ್ಳಲಿಲ್ಲ. ನೀವೆಲ್ಲಾ ದೇಶಕ್ಕಾಗಿ ಹೋರಾಡುವ ಪವಿತ್ರ ಕಾರ್ಯವನ್ನು ಕೈಗೊಂಡಿದ್ದೀರಿ. ಭಗವಂತ ಆ ಅವಕಾಶವನ್ನು ನನಗೆ ಒದಗಿಸಿಲ್ಲ. ನಿಮಗೆ ಸಹಾಯಹಸ್ತ ನೀಡುವ ಮೂಲಕ ನನ್ನ ಅಳಿಲು ಸೇವೆಯನ್ನ ದೇಶಕ್ಕೆ ಸಲ್ಲಿಸುವೆ"

ಜಿ.ಪಿ.ರಾಜರತ್ನಂ ನಮ್ಮ ತಂದೆಯವರ ಆಪ್ತರು. ಸ್ವಾತಂತ್ರ್ಯ ಹೋರಾಟದ ದಿನಗಳಲ್ಲಿ ಅವರು ದೇಶಪ್ರೇಮ, ಅಶೋಕ ಚಕ್ರದ ಹಿನ್ನೆಲೆ, ಗಾಂಧೀಜಿಯವರ ಆದರ್ಶ ಇವೆಲ್ಲದರ ಬಗ್ಗೆ ಅನೇಕ ಕಿರುಹೊತ್ತಗೆಗಳನ್ನು ಬರೆದರು. ಸ್ವಾತಂತ್ರ್ಯ ದಿನದ ಮೊದಲ ಹುಟ್ಟುಹಬ್ಬದಂದು (1948ನೆಯ ಆಗಸ್ಟ್ 15) ಅವರು ನಮ್ಮ ಮನೆಗೆ ಬಂದು "ಸ್ವತಂತ್ರ ಭಾರತದ ಅಶೋಕ ಚಕ್ರಧ್ವಜ" ಎಂಬ ಒಂದು ಪುಟ್ಟ ಪುಸ್ತಕವನ್ನು ನನ್ನ ಕೈಗಿಡುತ್ತಾ, "ನೀವುಗಳೇ ಈ ದೇಶವನ್ನು ಕಟ್ಟಬೇಕು. ಪುಸ್ತಕ ಓದು. ನಮ್ಮ ಧ್ವಜದ ಹಿರಿಮೆ ತಿಳಿಯುತ್ತದೆ "ಎಂದು ಹೇಳಿದ್ದರು. ಈ ಪುಸ್ತಕದ ಮುನ್ನುಡಿಯಲ್ಲಿ ರಾಜರತ್ನಂ ಹೀಗೆ ಬರೆಯುತ್ತಾರೆ.

"ಆಡಿದುದು ಕಾರ್ಯದಲ್ಲಿ ಸ್ಫುಟವಾದರೆ, ಬುದ್ಧಿಯೆಂಬ ಯಂತ್ರ ಚುರುಕಾಗಿ ಕೆಲಸಮಾಡಿದರೆ, ನಯ ಯಾವುದೆಂದು ತಿಳಿಯುವ ಕಣ್ಣಿನ ಕುರುಡು ತೊಲಗಿದರೆ, ಆಗ ನಾಡಿಗೆ ಶಿವ, ಸರ್ವೋತ್ಸವ, ಮಂಗಳ ಎಂಬುದನ್ನು ಸದಾ ನಮ್ಮ ಮುಂದೆ ಎತ್ತಿ ಕಟ್ಟುವುದಕ್ಕಾಗಿ ಈ 'ಅಶೋಕ ಚಕ್ರ' ನಮ್ಮ ಬಾವುಟನ ನಡುವೆ ಇದೆ."




ಇದೆಲ್ಲಾ ನಡೆದು ಮುಕ್ಕಾಲು ಶತಮಾನ ಕಳೆದಿದೆ. ಈ ಅವಧಿಯಲ್ಲಿ ಅಧಿಕಾರಕ್ಕೆ ಯಾವುದೇ ಪಕ್ಷ ಬಂದಿದ್ದರೂ, ದೇಶದ ಜನತೆ, ಕಾಲ ಸಹಜವಾದ ಏಳು ಬೀಳುಗಳನ್ನು ಅನುಭವಿಸಿದ್ದರೂ, ಒಟ್ಟಿನಲ್ಲಿ ದೇಶದ ಇಂದಿನ ಪರಿಸ್ಥಿತಿಯನ್ನ ಕಳಪೆ ಅಂತ ಹೇಳುವಂತಿಲ್ಲ. ಆ ಹಿಂದಿನ ತಲೆಮಾರು ತೋರಿದ ನಿಷ್ಕಳಂಕ ದೇಶಭಕ್ತಿಯನ್ನು ನಮ್ಮ ಇಂದಿನ ಯುವ ಪೀಳಿಗೆ ಅನುಕರಿಸುವಂತಾಗಲಿ ಎಂಬುದೇ ನನ್ನ ಹಾರೈಕೆ.

■

# ಉಪ್ಪಿಟ್ಟು ಸಂದೇಶ !

●ಚಿತ್ರಾ ರಾಮಚಂದ್ರನ್

"ಅಮ್ಮಾ! ನಮ್ಮ ಸ್ಕೂಲಲ್ಲಿ ಸ್ವಾತಂತ್ರ್ಯ ಅಮೃತ ಮಹೋತ್ಸವ ಆಚರಿಸ್ತಿದ್ದೀವಿ! ಆ ವಿಚಾರವಾಗಿ ಒಂದು ಪ್ರಬಂಧ ಬರೆದು ನಾಳೇನೇ ಕೊಡ್ಬೇಕು! ಹೆಲ್ಪ್ ಮಾಡಮ್ಮ!"

ಅಡುಗೆ ಮನೆಯಲ್ಲಿ ಕೂಟಿಗೆ 'ಚೊಯ್' ಎಂದು ಒಗ್ಗರಣೆ ಹಾಕುತ್ತಿದ್ದ ನಳಿನಿಯ ಸೆರಗು ಹಿಡಿದೆಳೆದು ಗೋಗರೆದಳು ಆರನೇ ತರಗತಿಯಲ್ಲಿದ್ದ ಪ್ರೀತಾ.

"ಸಾಹಿತ್ಯ ರಚನೆಯಲ್ಲಿ ತಾನೇ ಹುಲಿ ಅಂತ ಕೊಚ್ಕೊಳ್ತಾರಲ್ಲಾ ನಿಮ್ಮಪ್ಪ! ಅವರನ್ನೇ ಕೇಳು! ನನ್ನನ್ಯಾಕೆ ಎಳೀತಿಯ?" ಕೊಂಕಿನಿಂದ ನುಡಿದಳು ನಳಿನಿ.

ಶ್ರೀಕರ ವೃತ್ತಿಯಲ್ಲಿ ಇಂಜಿನಿಯರ್ ಆಗಿದ್ದರೂ ಪ್ರವೃತ್ತಿಯಲ್ಲಿ ಲೇಖಕ. ಅವನ ಕಥಾ ವಸ್ತು ಯಾವಾಗಲೂ ಘನ ಮತ್ತು ಗಂಭೀರ! ಅನೇಕ ಪತ್ರಿಕೆಗಳಲ್ಲಿ ಆಗಿಂದಾಗ್ಯೆ ಅವನ ಕಥೆಗಳು ಪ್ರಕಟವಾಗುತ್ತಿದ್ದವು. ಆನ್ ಲೈನ್ ಸ್ವಪ್ರಕಾಶನ ವೇದಿಕೆಗಳಲ್ಲಿಯೂ ಅವನು ಪ್ರಕಟಿಸುವ ಬರಹಗಳು ಓದುಗರ ಪ್ರಶಂಸೆಯನ್ನು ಪಡೆದುಕೊಂಡಿದ್ದವು.

ನಳಿನಿಗೆ ಮೊದಲಿನಿಂದ ಓದುವ ಹುಚ್ಚು ಇದ್ದದ್ದೇ. ಗಂಡನ ಬರಹಗಳನ್ನು ಓದುತ್ತ ಓದುತ್ತ ಓದುವ ಹುಚ್ಚು ಬರೆಯುವ ಹುಚ್ಚಾಗಿ ಪರಿವರ್ತಿಸಿತು. ಹಾಗಾಗಿ ತನ್ನ ಬರಹಗಳನ್ನೂ ಸ್ವಪ್ರಕಾಶನ ವೇದಿಕೆಯೊಂದರಲ್ಲಿ ಸತತವಾಗಿ ಪ್ರಕಟಿಸ ತೊಡಗಿದ್ದಳು. ಓದುಗರ ಪ್ರತಿಕ್ರಿಯೆಗಳೂ, ದಿನೇ ದಿನೇ ಅಧಿಕವಾಗುತ್ತಿದ್ದ ಹಿಂಬಾಲಕರ ಸಂಖ್ಯೆಯೂ ಅವಳಿಗೆ ಭರವಸೆ ನೀಡಿದವು. ತನ್ನಿಂದಲೂ ಬರೆಯುವುದು ಸಾಧ್ಯ ಎಂದರಿತಾಗ ಬಹಳ ಖುಷಿಯಾಯಿತು ಅವಳಿಗೆ !

"ಬರೆಯೋದು ಬರಿ 'ಉಪ್ಪಿಟ್ಟು ಸಾಹಿತ್ಯ'! ಅಷ್ಟಕ್ಕೇ ಹೀಗೆ ಮೆರೀಬೇಕೆ ?" ಎಂದು ಮಡದಿಯ ಬರಹಗಳನ್ನು ಗೇಲಿ ಮಾಡದಿದ್ದರೆ ಶ್ರೀಕರನಿಗೆ ತಿಂದದ್ದು ಅರಗುವುದಿಲ್ಲ! ಆದ್ದರಿಂದ ಮಗಳು ಸಹಾಯ ಕೇಳಿದಾಗ ಅವನ ಕಡೆ ಕೈ ತೋರಿಸಿದಳು ನಳಿನಿ !

"ಹೋಗಮ್ಮ! ಅಪ್ಪಾ ಬರ್ಕೊಡೋದು ನನ್ಗೆ ಅರ್ಥಾನೇ ಆಗಲ್ಲ! ಓದಿ ಹೇಳೋದಕ್ಕೂ ಬರಲ್ಲ !" ಮುಖ ಊದಿಸಿಕೊಂಡ ಪ್ರೀತಾಳನ್ನು ಕಂಡು ನಳಿನಿಯ ಮನಸ್ಸು ಮೃದುವಾಯಿತು.

"ಸರಿ! ಊಟ ಮುಗಿಸಿ ನಿನಗೆ ತೋಚಿದ್ದನ್ನ ನೀನೇ ಬರಕೊಂಡು ಬಾ! ಆಮೇಲೆ ತಿದ್ದಿ ಕೊಡ್ತೀನಿ!" ಎಂದ ನಳಿನಿ ಚಪಾತಿ ಮತ್ತು ಬಿಸಿ ಕೂಟನ್ನು ತಟ್ಟೆಗೆ ಬಡಿಸಿ ಮಗಳ ಮುಂದೆ ಇಟ್ಟಳು.

"ಅಯ್ಯೋ! ಕೂಟು ನನಗೆ ಸೇರಲ್ಲಾಂತ ನಿನ್ಗೆ ಗೊತ್ತಿಲ್ವ?" ಮುಖ ಸಿಂಡರಿಸಿಕೊಂಡಳು ಪ್ರೀತಾ.

"ಎಲ್ಲ ತರಕಾರಿ ಹಾಕಿ ಮಾಡೋ ಕೂಟು ಆರೋಗ್ಯಕ್ಕೆ ತುಂಬಾ ಒಳ್ಳೇದು! ಎಷ್ಟು ಬಾರಿ ಹೇಳಿದ್ರೂ ನಿನ್ಗೆ ಅರ್ಥವಾಗಲ್ವಾ ? ಬೇಗ ತಿಂದು ಪ್ರಬಂಧ ಬರೆಯೋ ಕೆಲಸ ನೋಡು ಹೋಗು. ನಾನು ಅಡುಗೆಮನೆ ಕೆಲಸ ಮುಗಿಸ್ಕೊಂಡು ಬರ್ತೀನಿ"

"ದೇಶಕ್ಕೆ ಸ್ವಾತಂತ್ರ್ಯ ಬಂದಾಗ ನಿಮ್ಮಮ್ಮನ ಮುತ್ತಜ್ಜಿ ಪಾಯಸ ಮಾಡಿ, ಓಲಗ ಊದಿಸ್ಕೊಂಡು ಮನೆಮನೆಗೂ ಹೋಗಿ ಹಂಚಿದ್ರಂತೆ! ಪಾಯಸಕ್ಕೆ ಎಷ್ಟು ಹಾಲು ಹಾಕಿದ್ರು, ಗೋಡಂಬಿ ದ್ರಾಕ್ಷಿ ಹಾಕಿದ್ರೆ, ಇಲ್ಲ ಕೇಸರಿ ಮಾತ್ರವೇ ಅನ್ನೋದನ್ನೆಲ್ಲ ಉಪ್ಪಿಟ್ಟು ಸಾಹಿತ್ಯದಲ್ಲಿ ಪ್ರವೀಣೆಯಾದ ನಿಮ್ಮಮ್ಮ ಹೇಳ್ತಾಳೆ! ಅದನ್ನ ಕೇಳ್ಕೊಂಡು ನೀನೂ ಕೆಲಸಕ್ಕೆ ಬಾರದ ಉಪ್ಪಿಟ್ಟು ಪ್ರಬಂಧ ಬರಿ ಹೋಗು!" ಎಂದು ವ್ಯಂಗ್ಯ ನಗೆ ಬೀರಿದನು ಶ್ರೀಕರ.

"ಒಮ್ಮೆ ಮಹಾತ್ಮಾ ಗಾಂಧಿಯವರು ಭಾಷಣ ಮಾಡಕ್ಕೆ ನಮ್ಮೂರಿಗೆ ಬಂದಿದ್ದಾಗ ತಾನು ಹಾಕ್ಕೊಂಡಿದ್ದ ಒಡವೆಗಳನ್ನೆಲ್ಲ ಕಳಚಿ ತಿಲಕರ ಸ್ವರಾಜ್ಯ ನಿಧಿಗಾಗಿ ಅದೇ ವೇದಿಕೇಲಿ ಕೊಟ್ರಂತೆ ಮುತ್ತಜ್ಜಿ! ಅಂತಾ ತೀವ್ರ ದೇಶ ಭಕ್ತರು ಅವರು! ಅದನ್ನೆಲ್ಲ ಬಿಟ್ಟು ಅವರು ಪಾಯಸ ಹಂಚಿದ್ದು ಮಾತ್ರ ನಿಮ್ಮ ನೆನಪಲ್ಲಿದೆ! ಅಲ್ಲಿಗೆ ನಿಜವಾದ ಭೋಜನ ಪ್ರಿಯರು ಯಾರು ಅನ್ನೋದು ಈಗ ಖಚಿತವಾಯ್ತಲ್ಲ! ಮತ್ಯಾಕೆ ಉಪ್ಪಿಟ್ಟನ್ನ ಹೀಯಾಳಿಸೋದು ? "

ಗಂಡನ ಮಾತಿಗೆ ಪ್ರತಿಯಾಗಿ ತಾನೂ ಕಚ್ಚೆ ಕಟ್ಟಿಕೊಂಡು ಅಖಾಡಕ್ಕೆ ಇಳಿದಳು ನಳಿನಿ! ಅಲ್ಲಿಗೆ ಶುರುವಾಯಿತು ಅವರುಗಳ ಮಾತಿನ ಚಕಮಕಿ! ಅರ್ಧ ಗಂಟೆ ಕಾಲ ವಾಗ್ಯುದ್ಧ ಮುಂದುವರಿದಾಗ ಸಹಿಸಲಾರದೆ "ಅಪ್ಪ! ಅಮ್ಮ! ನಾನು ಈಗ ಬರೀಬೇಕೋ ಇಲ್ವೋ ? "ಎಂದು ಕೂಗಿ ಯುದ್ಧವಿರಾಮ ಘೋಷಿಸಿದಳು ಪ್ರೀತಾ!

ಅಂದು ರಾತ್ರಿ ಹತ್ತು ಗಂಟೆಯವರೆಗೆ ಕುಳಿತು ಅಮ್ಮ ಮಗಳು ಸೇರಿ ಪ್ರಬಂಧವನ್ನು ಬರೆದು ಮುಗಿಸಿದ್ದರು.

ಸ್ವಾತಂತ್ರ್ಯ ಅಮೃತ ಮಹೋತ್ಸವದಂದು ಪ್ರೀತಾಳ ಶಾಲೆಯಲ್ಲಿ ಧ್ವಜಾರೋಹಣಕ್ಕೆ ಓರ್ವ ಪ್ರಮುಖ ವ್ಯಕ್ತಿಯನ್ನು ಆಹ್ವಾನಿಸಲಾಗಿತ್ತು. ಶ್ರೇಷ್ಠ ಪ್ರಬಂಧಗಳನ್ನು ಬರೆದ ನಾಲ್ಕು ಮಕ್ಕಳು ಸ್ವತಃ ತಾವೇ ತಮ್ಮ ಬರಹಗಳನ್ನು ಸಭೆಯಲ್ಲಿ ವಾಚಿಸುವ ಕಾರ್ಯಕ್ರಮವನ್ನೂ ಏರ್ಪಡಿಸಲಾಗಿತ್ತು. ಸಮಾರಂಭಕ್ಕೆ ವಿಶೇಷವಾಗಿ ಆ ಮಕ್ಕಳ ಪೋಷಕರಿಗೂ ಆಮಂತ್ರಣ ನೀಡಲಾಗಿತ್ತು.

ಪ್ರೀತಾಳ ಪ್ರಬಂಧವೂ ಆಯ್ಕೆಯಾಗಿದ್ದ ಕಾರಣ ನಳಿನಿ ಮತ್ತು ಶ್ರೀಕರ ಅಲ್ಲಿ ಉಪಸ್ಥಿತರಿದ್ದರು! ನಳಿನಿಯ ನೆರವು ಪಡೆದು ಪ್ರೀತಾ ಬರೆದಿರುವ ಪ್ರಬಂಧವನ್ನು ಆಯ್ಕೆಮಾಡಿರುವಳೆಂದರೆ ಆ ಮ್ಯಾಡಮ್ಮು ಓರ್ವ ತಿಂಡಿ ಪೋತಿಯೇ ಆಗಿರಬೇಕು ಎಂದು ಮನಸ್ಸಿನಲ್ಲೇ ಕರುಬಿಕೊಂಡ ಶ್ರೀಕರ! ಮಗಳ ಪ್ರಬಂಧ ವಾಚನಕ್ಕಾಗಿ ಕಿವಿ ನಿಮಿರಿಸಿಕೊಂಡು ಕಾಯುತ್ತ ಕುಳಿತಿದ್ದ !

ಕೊನೆಗೂ ಪ್ರೀತಾಳ ಸರದಿ ಬಂದೇಬಿಟ್ಟಿತು! ವೇದಿಕೆಯಮೇಲೆ ಪುಟ್ಟ ಬೊಂಬೆಯಂತೆ ನಿಂತ ಪ್ರೀತಾ ಮನನ ಮಾಡಿದ್ದ ತನ್ನ ಪ್ರಬಂಧವನ್ನು ಭಾವಪೂರ್ವಕವಾಗಿ ಹೇಳ ತೊಡಗಿದಳು!

"ಎಲ್ಲರಿಗೂ ನಮಸ್ಕಾರ ಮತ್ತು ಸ್ವಾತಂತ್ರ್ಯ ದಿನದ ಶುಭಾಶಯಗಳು!

ನಮ್ಮಮ್ಮ ತುಂಬಾ ಚೆನ್ನಾಗಿ ಕೂಟು ಮಾಡುತ್ತಾರೆ ! ವಿವಿಧ ತರಕಾರಿಗಳನ್ನೂ ಕಾಳುಗಳನ್ನೂ ಸೇರಿಸಿ ಮಾಡುವ ಅಮ್ಮನ ಕೂಟು ಬಹಳ ರುಚಿಕರ! ಮತ್ತು ಆರೋಗ್ಯಕರ ಕೂಡ! "ಎಂದು ಮಗಳು ಪ್ರಾರಂಭಿಸಿದಾಗ ಶ್ರೀಕರನ ಎದೆ ಧಸಕ್ಕೆಂದಿತು!

'ಅಯ್ಯೋ!  ಇದೇನು ? ಸ್ವಾತಂತ್ರ್ಯಕ್ಕೂ ಕೂಟಿಗೂ ಎಂತಾ ಸಂಬಂಧ ? '

ಧೈರ್ಯವಾಗಿ  ಮಾತು ಮುಂದುವರಿಸುತ್ತಿದ್ದ ಪ್ರೀತಾಳನ್ನು ಕಣ್ ಕಣ್ ಬಿಟ್ಟುಕೊಂಡು ನೋಡುತ್ತಿದ್ದ ಶ್ರೀಕರ!

"....... 'ಕೂಟು' ಅನ್ನೋ ಪದಕ್ಕೆ ಕೆಲವು ಭಾಷೆಗಳಲ್ಲಿ ಕೂಡು, ಕೂಡಿಸೋದು, ಒಟ್ಟು ಸೇರೋದು  ಅನ್ನೋ ಅರ್ಥಗಳು ಬರುತ್ತವೇ. ಬೇರೆ ಬೇರೆ ಜಾತಿಯ, ಬೇರೆ ಬೇರೆ ಬಣ್ಣದ ತರಕಾರಿಗಳನ್ನ ಕೂಡಿಸಿ ಮಾಡೋ ಈ ಕೂಟಲ್ಲಿ ಪೌಷ್ಟಿಕಾಂಶ ಹೆಚ್ಚು. ಅದರಿಂದ ನಮ್ಮ ದೇಹಕ್ಕೆ ಹೆಚ್ಚು ಶಕ್ತಿ ಮತ್ತು ಉತ್ತಮ ಅರೋಗ್ಯ ಲಭಿಸುತ್ತದೆ ಎಂದು ಅಮ್ಮ ಹೇಳುತ್ತಾರೆ!  ಹಲವು ಕೂಡಿ ಏಕವಾದ ಪದಾರ್ಥಕ್ಕೆ ಶಕ್ತಿ ಹೆಚ್ಚು ಅನ್ನೋದು ಇಲ್ಲಿ ನಿರೂಪಣೆ ಆಯಿತು!

ಅನೇಕ ತರಕಾರಿಗಳು ಸೇರಿ ದೇಹಕ್ಕೆ ಪುಷ್ಟಿ ಕೊಡುವಂತೆ, ಎಪ್ಪತ್ತೈದು ವರುಷಗಳ ಹಿಂದೆ ನಮ್ಮ ದೇಶದ ವೈವಿಧ್ಯಮಯವಾದ ಜನ ಸಮುದಾಯ ಒಗ್ಗಟ್ಟಿನಿಂದ ಒಂದಾಗಿ ಕೆರಳಿ ಎದ್ದು ನಮ್ಮ ಭಾರತ ಮಾತೆಗೆ ಅಗಾಧ ಶಕ್ತಿಯನ್ನು ನೀಡಿತು.  ಆ ಜನ ಶಕ್ತಿಯ ನೆರವಿನಿಂದಾಗಿ  ಅವಳು ಬಲಿಷ್ಠೆಯಾಗಿ  ದಾಸ್ಯದ ಬೇಡಿಯನ್ನು ಕಿತ್ತೊಗೆದು ಸ್ವತಂತ್ರಳಾದಳು. ಏಕತೆಯೇ ಶಕ್ತಿ!  ಒಗ್ಗಟ್ಟಿನಲ್ಲೇ  ಬಲ ಅನ್ನೋದು ಎಷ್ಟು ಸತ್ಯವಾದ ಮಾತು ನೋಡಿ!

'ಕೂಡಿ ಬಾಳಿದರೆ ಸ್ವರ್ಗ ಸುಖ' ಅನ್ನೋದು ಗಾದೆ ಮಾತು.  ಭಾರತ ಮಾತೆಯ ಮಕ್ಕಳೆಲ್ಲ ಕೂಡಿ ಬಾಳಿದ್ರೆ , ಈ ನಮ್ಮ ಭಾರತ ದೇಶಕ್ಕಿಂತ ಮಿಗಿಲಾದ ಸ್ವರ್ಗ ಭೂಮಿ ಎಲ್ಲುಂಟು? ವರ್ಷಕ್ಕೆ ಒಂದು ಬಾರಿ 'ವಂದೇ ಮಾತರಂ' ಹೇಳಿದರೆ ಮಾತ್ರ ಸಾಲದು. ನಾವೆಲ್ಲಾ ಒಂದೇ ಮಾತೆಯ ಮಕ್ಕಳು ಅನ್ನೋದನ್ನ ಯಾವಾಗಲೂ ನೆನಪಿನಲ್ಲಿಟ್ಟುಕೊಳ್ಳಬೇಕು!  ಜಾತಿ, ಮತ, ಭಾಷೆ, ರಾಜ್ಯ, ಮುಂತಾದ ಬೇಧಗಳನ್ನು ಬದಿಗೆ ಒತ್ತಿ , ಭಾರತ ದೇಶದ ಮಕ್ಕಳಾದ ನಾವೆಲ್ಲ ಎಂದೆಂದಿಗೂ ಸ್ನೇಹದಿಂದ ಕೂಡಿ, ಬೆರೆತು, ಒಗ್ಗಟ್ಟಾಗಿದ್ದು ನಮ್ಮ ಭಾರತ ಮಾತೆಯನ್ನು ಬಲಿಷ್ಠಳಾಗಿ ಮಾಡೋಣ! ದೇಶವನ್ನು ಛಿದ್ರಗೊಳಿಸಲು ಹೊಂಚು ಹಾಕುವ ದುಷ್ಟ ಶಕ್ತಿಗಳನ್ನು ಬಡಿದೋಡಿಸುವ ಶಕ್ತಿಯನ್ನು ಅವಳಿಗೆ ನೀಡೋಣ !  ಅನೇಕ ಸೇರಿ ಏಕವಾಗಲಿ!  ಭಾರತ ಮಾತೆಗೆ ಶಕ್ತಿ ತುಂಬಲಿ!  ವಂದೇ ಮಾತರಂ!  ಜೈ ಹಿಂದ್!  "

ಪ್ರೀತಾಳ ಭಾಷಣ ಮುಗಿದಾಗ ಇಡೀ ಸಭಾಂಗಣ ಕರ ತಾಡನದಿಂದ ಅದುರಿತು. ಸಮಾರಂಭದ ಅತಿಥಿಯಾದ ಪ್ರಮುಖರು ಪ್ರೀತಾಳನ್ನು ಬಳಿಗೆ ಕರೆದು ಅಭಿನಂದಿಸಿದರು .

"ಭೇಷ್ ಮಗಳೇ!  ಉಪ್ಪಿಟ್ಟಲ್ಲೂ ಒಂದು ಸಂದೇಶ!  ಚೆನ್ನಾಗಿತ್ತು!  "ಮನೆಗೆ ಹಿಂದಿರುಗಿದ ಕೂಡಲೇ ಮಗಳ ತಲೆ ನೇವರಿಸಿ ನುಡಿದ  ಶ್ರೀಕರ.

"ಉಪ್ಪಿಟ್ಟು ಸಂದೇಶ ಅಲ್ಲ ಅಪ್ಪಾ !  ಅದು ಕೂಟು ಸಂದೇಶ!ಎಂದು ನಕ್ಕಳು ಪ್ರೀತಾ.

"ಸಾಹಿತ್ಯ ಹುಲಿಗಳ ದೇಹ, ಮನ, ಮೆದುಳಿನ ಆರೋಗ್ಯ ರಕ್ಷಿಸೋದು ನಮ್ಮ ಉಪ್ಪಿಟ್ಟು, ಕೂಟು, ಇತ್ಯಾದಿ ಅನ್ನೋದನ್ನ ಮರೀಬೇಡೀ ಸಾರ್!" ಎಂದು ಸರಸವಾಗಿ ನುಡಿದು ಅಡುಗೆಮನೆಯನ್ನು ಕುರಿತು ಹೆಮ್ಮೆಯಿಂದ ಹೆಜ್ಜೆ ಹಾಕಿದಳು ನಳಿನಿ. ■

# ಸ್ವಾತಂತ್ರ್ಯದ ಋಣ

●ಚಿಂತಾಮಣಿ ಕೊಡ್ಲೆಕೆರೆ

ಬೆಂಗಳೂರಿಗೆ ಬಂದ ಹೊಸದರಲ್ಲಿ ವಿಜಯನಗರದಲ್ಲಿ ವಾಸವಾಗಿದ್ದೆ. ಆ ಎಂಬತ್ತರ ದಶಕದಲ್ಲಿ ಅದು ಆಗತಾನೇ ಬೆಳೆಯತೊಡಗಿದ್ದ ಒಂದು ಹೊಸ ಬಡಾವಣೆ. ಕಷ್ಟಪಟ್ಟು ಓದಿ ಉದ್ಯೋಗ ಸಂಪಾದಿಸಿದ್ದೆ. ಆದಷ್ಟು ಬೇಗ ಒಂದು ರೂಮು ಹಿಡಿದು ಅಡುಗೆ ಮಾಡಿಕೊಳ್ಳದೇ ಹೋದರೆ ಆರ್ಥಿಕವಾಗಿ ನನಗೆ ತುಂಬ ಕಷ್ಟವಾಗುತ್ತಿತ್ತು. ಬ್ರೋಕರುಗಳನ್ನು ಹಿಡಿಯದೆ ನಾನೇ ಅವರಿವರನ್ನು ಕೇಳಿ ರೂಮು ಹುಡುಕುತ್ತಿದ್ದೆ. ಅನೇಕ ದಿನಗಳ ಪ್ರಯತ್ನದ ಬಳಿಕ ವಿಜಯನಗರದ ಈ ರೂಮು ನನಗೆ ಸಿಕ್ಕಿತು.

ಈ ನನ್ನ ರೂಮು ಮಾಲಕರ ಮನೆಯ ಹಿಂಬದಿಯಲ್ಲಿತ್ತು. ನನ್ನ ಈ ಮನೆಯ ವಿಶೇಷವೆಂದರೆ ಕಾಂಪೌಡಿನ ಒಂದು ದಿಕ್ಕಿನಲ್ಲಿ ಧ್ವಜಗಂಬವಿತ್ತು. ರೂಮು ಬಾಡಿಗೆಗೆ ಕೊಡುವ ಮೊದಲು ನನ್ನದೊಂದು ಪುಟ್ಟ ಸಂದರ್ಶನ ನಡೆಯಿತು. ಮಾಲಕರು ನನ್ನ ಊರು ಕೇಳಿದರು. ಓದಿದ್ದು, ತಂದೆ, ತಾಯಿ, ಈ ಊರಲ್ಲಿ ಯಾರದಾದರೂ ಪರಿಚಯ.. ಇನ್ನೂ ಒಂದಷ್ಟು ಪ್ರಶ್ನೆಗಳನ್ನು ಕೇಳಿ ಅಂತೂ ಇಂತೂ ನಾನೊಬ್ಬ ಸಾಧು ಪ್ರಾಣಿ ಎಂಬ ತೀರ್ಮಾನಕ್ಕೆ ಯಜಮಾನರು ಬಂದರು. ನನಗೆ ರೂಮು ಕೊಡುವ ಬಗೆಗೆ ಅವರು ಮುಖಕ್ಕೆ ಕೈ ಕೊಟ್ಟು ಯೋಚಿಸತೊಡಗಿದರು.

ಈಗ ನಾನು ಸಂಕೋಚದಿಂದ " ಸರ್, ಒಂದು ವಿಷಯ.." ಎಂದೆ.

ಮುಖ ಗಂಟಿಕ್ಕಿ ಅವರು "ಏನು..?" ಅಂದರು.

"ಈಗ ತಾನೇ ನೌಕರಿಗೆ ಸೇರಿದ್ದೇನೆ. ಮುಂಗಡ ಹಣ ಕೊಡಲು ನನ್ನ ಬಳಿ ಹಣ ಇಲ್ಲ. ತಿಂಗಳ ಬಾಡಿಗೆ ತಪ್ಪದೇ ಕೊಡುತ್ತೇನೆ " ಎಂದೆ.

ನನ್ನ ಮಾತು ಕೇಳಿ ಮಾಲಕರು ಸಿಕ್ಕಾಪಟ್ಟೆ ಸಿಟ್ಟಿಗೆದ್ದರು. "ಏನು ತಮಾಷೆ ಮಾಡುತ್ತೀಯಾ? ಈ ಮನೆ ಎಷ್ಟು ಒಳ್ಳೆಯ ಜಾಗದಲ್ಲಿದೆ! ಕೇಳಿದ ಬಾಡಿಗೆ, ಮುಂಗಡ ಕೊಟ್ಟು ಜನ ಓಡೋಡಿ ಬರುತ್ತಾರೆ. ಈಗಿಂದೀಗ ಜಾಗ ಖಾಲಿ ಮಾಡು" ಎಂದು ಕೂಗಾಡಿದರು. ನಾನು ಇನ್ನೂ, ಇನ್ನೂ ದೈನ್ಯದಿಂದ ಅವರಿಗೆ ಅಹವಾಲು ಸಲ್ಲಿಸುತ್ತಲೇ ಇದ್ದೆ. ಅಂತೂ ಕಡೆಯಲ್ಲಿ ಮುಂದಿನ ಮೂರು ನಾಲ್ಕು ತಿಂಗಳುಗಳಲ್ಲಿ ನಾನು ಎರಡು ಸಾವಿರ ರೂಪಾಯಿ ಮುಂಗಡ ಧನವನ್ನು ಹೊಂದಿಸಿಕೊಡತಕ್ಕದ್ದೆಂದು ತೀರ್ಮಾನವಾಯಿತು. ಮರುದಿನವೇ ಅವರ ಆ ಬಾಡಿಗೆ ಮನೆಯ ಸದಸ್ಯನಾದೆ.

ಅವರ ಮನೆ ಸೇರಿದ ಎರಡು ವಾರಗಳಲ್ಲಿ ಆಗಸ್ಟ್ ಹದಿನೈದು ಬಂತು. ಧ್ವಜದ ಕಂಬದ ಸುತ್ತಲೂ ಚಟುವಟಿಕೆಗಳು ಆರಂಭವಾದವು. ಕುತೂಹಲದಿಂದ ಏನು ಮಾಡುತ್ತಾರೆಂದು ನೋಡುತ್ತಿದ್ದೆ. ಮನೆಯ ಮಾಲಕರಾದ ರಾಮಕೃಷ್ಣರಾವ್ ಅವರೇ ಆಗಸ್ಟ್ ಹದಿನೈದರಂದು ಧ್ವಜಾರೋಹಣ ಮಾಡುವರೆಂದು ಆಳುಗಳಿಂದ ತಿಳಿಯಿತು. ಸ್ವಾತಂತ್ರ್ಯೋತ್ಸವ ಮತ್ತು ಗಣರಾಜ್ಯೋತ್ಸವಗಳಂದು ಪ್ರತಿವರ್ಷವೂ ಬೆಳಿಗ್ಗೆ ಹಬ್ಬದ ವಾತಾವರಣದಲ್ಲಿ ಇಲ್ಲಿ ಕಾರ್ಯಕ್ರಮ ಜರುಗುವುದೆಂದು ಮಾಲಕರ ಕಿರಿಯ ಮಗ ಪ್ರಕಾಶ ಹೇಳಿದರು.

ಆ ಶುಭ ದಿನ ಬೇಗ ಮಿಂದು ಧ್ವಜಾರೋಹಣ ಕಾರ್ಯಕ್ರಮಕ್ಕೆ ಸಿದ್ಧನಾದೆ. ಜನರು ಸೇರತೊಡಗಿದ್ದರು. ಅಂದು ಅಲ್ಲಿ ನೆರೆದವರಿಂದ ರಾಯರು ಮತ್ತು ಅವರ ಈ ಕಾರ್ಯಕ್ರಮದ ಬಗೆಗೆ ಇನ್ನಷ್ಟು ವಿಚಾರಗಳು ತಿಳಿದವು. ಮಕ್ಕಳು ಮೊಮ್ಮಕ್ಕಳಿಂದ ತುಂಬಿದ ನಮ್ಮ ಮಾಲಕರ ಮನೆಯಲ್ಲೇ ಈ ಕಾರ್ಯಕ್ರಮಕ್ಕೆ ಸಾಕಷ್ಟು ಸಭಿಕರಿದ್ದರು! ಆದರೆ ರಾಮಕೃಷ್ಣರಾವ್ ಅವರು ನಮ್ಮ ರಸ್ತೆಯ ಮತ್ತು ಹತ್ತಿರದ ರಸ್ತೆಗಳ ಎಲ್ಲರನ್ನೂ ಪ್ರತಿ ವರ್ಷ ಧ್ವಜಾರೋಹಣಕ್ಕೆ ಆಹ್ವಾನಿಸುವರಂತೆ. ಬಂದವರೆಲ್ಲರಿಗೂ ಬೊಗಸೆಗಟ್ಟಲೆ ಪೆಪ್ಪರಮೆಂಟು, ಕಲ್ಲುಸಕ್ಕರೆ ಹಂಚುವರು. ರಾಯರ ಹೆಂಡತಿ ಈ ಕಾರ್ಯಕ್ರಮಕ್ಕೆ ಬಂದ ಹೆಂಗಸರಿಗೆ ತಪ್ಪದೆ ಕುಂಕುಮ ತೆಗೆದುಕೊಂಡು ಹೋಗಬೇಕೆಂದು ಆಗ್ರಹಿಸುತ್ತಿದ್ದರು. ರಾಷ್ಟ್ರೀಯ ಹಬ್ಬ ಇಲ್ಲಿ ಮನೆಯ ಹಬ್ಬವಾಗಿಬಿಟ್ಟಿತ್ತು. ಇವೆಲ್ಲ ನಡೆಯುತ್ತಿರುವ ವೇಳೆಯಲ್ಲೇ ರಾಮಕೃಷ್ಣರಾವ್ ಅವರು ಒಂದು ಹಿತಮಿತವಾದ ಭಾಷಣ ಮಾಡುತ್ತಿದ್ದರು. ಪ್ರತಿ ವರ್ಷವೂ ವ್ಯತ್ಯಾಸ ಇಲ್ಲದೆ ಅದೇ ಭಾಷಣ ಮಾಡುತ್ತಾರೆ ಎಂದು ಕೆಲವರು ಚಿಕ್ಕದಾಗಿ ಗೊಣಗುತ್ತಿದ್ದುದು ಕೇಳಿಸಿತು. ನನಗಂತೂ ಅವರ ಭಾಷಣ ಹೊಸದಾಗಿತ್ತು. ಆ ಕಾಲದಲ್ಲಿ ಸ್ವಾತಂತ್ರ್ಯಕ್ಕಾಗಿ ಅವರು ಜೈಲಿಗೆ ಹೋಗಿದ್ದರೆಂದೂ ಅವರ ಮಾತುಗಳಿಂದ ತಿಳಿಯಿತು. ನೆನಪಿರುವಷ್ಟು ಒಂದು ಪ್ರಭಾತ ಫೇರಿಯ ಹಾಡನ್ನು ಹಾಡಿಯೂಬಿಟ್ಟರು. ಸಾಲುಗಳು ನೆನಪಾಗದೇ ಹೋದಾಗ ಅವರಿಗೆ ಕಸಿವಿಸಿಯಾಯಿತು. ಮುಂದಿನ ಕಾರ್ಯಕ್ರಮದ ಹೊತ್ತಿಗೆ ಇಡೀ ಹಾಡನ್ನು ನೆನಪಿಸಿಕೊಂಡು ಹಾಡುವುದಾಗಿ ಸಭೆಗೆ ಭರವಸೆ ಕೊಟ್ಟರು. ತುಸು ಮೋಜಿನಿಂದ ಇವೆಲ್ಲವನ್ನೂ ಗಮನಿಸುತ್ತ ಒಂದೆಡೆಗೆ ನಾನು ಕೂತಿದ್ದೆ. ಹೀಗೆ ಖಾಸಗಿಯಾಗಿ ಸ್ವಾತಂತ್ರ್ಯ ದಿನಾಚರಣೆ ಮಾಡುವುದು ನನಗೆ ಸಂಪೂರ್ಣ ಹೊಸದಾಗಿತ್ತು.

ರಾಮಕೃಷ್ಣರಾವ್ ಅವರು ಸಭೆಯಲ್ಲಿ ಸೇರಿದ ಯಾರಾದರೂ ಈ ದಿನದ ಬಗೆಗೆ ಮಾತಾಡಬಹುದೆಂದು ಆಹ್ವಾನಿಸಿದರು. ಯಾರೂ ಮುಂದೆ ಬರಲಿಲ್ಲ. ಒಂದೆರಡು ನಿಮಿಷ ದೃಷ್ಟಿಗಳು ಒಬ್ಬರಿಂದೊಬ್ಬರಿಗೆ "ನೀನು ಮಾತಾಡು" ಎಂಬ ಸೂಚನೆ ಬೀರುತ್ತಾ ಸಂಚರಿಸಿದವು. ಯಾರೂ ಮುಂದೆ ಬರಲಿಲ್ಲ. "ಯಾರೂ ಮಾತಾಡುವವರಿಲ್ಲವೆ!" ಎಂದು ರಾಯರು ಚಕಿತರಾದರು. ಅವರ ಎಂದಿನ ಆಚರಣೆಯಲ್ಲಿ ಈ ಆಹ್ವಾನ ಇರುತ್ತಿರಲಿಲ್ಲ ಎಂದು ಕಾಣುತ್ತದೆ. ರಾಯರ ಮುಖದಲ್ಲಿ ಸಿಟ್ಟು, ಅಸಮಾಧಾನಕ್ಕಿಂತ ದುಃಖ ಹೆಚ್ಚಾಗಿ ಕಾಣುತ್ತಿತ್ತು.

ನಾನು ಎದ್ದು ನಿಂತೆ. ಪ್ರಾಥಮಿಕ ಶಾಲೆಯಿಂದ ಪ್ರತಿ ವರ್ಷವೂ ಸ್ವಾತಂತ್ರ್ಯದಿನದಂದು ಭಾಷಣ ಮಾಡಿದವನು ನಾನು. ನಮ್ಮೆಲ್ಲ ಮಾಸ್ತರುಗಳಿಗೆ ಜಯವಾಗಲಿ – ಕಡ್ಡಾಯವಾಗಿ ಪ್ರತಿ ಕಾರ್ಯಕ್ರಮದಲ್ಲೂ ಭಾಷಣ ಮಾಡಿಸುತ್ತಿದ್ದರು. ಅವರೆಲ್ಲ ಸೇರಿ ಇದೀಗ ಬೆಂಗಳೂರಿನ ಈ ಕಾರ್ಯಕ್ರಮದಲ್ಲಿ ಮಾತಾಡಲು ನನ್ನನ್ನು ಮುಂದೂಡಿದಂತೆ ಇತ್ತು.

"ಕರ್ನಾಟಕದ ಬಾರ್ಡೋಲಿ" ಎಂದು ಹೆಸರಾದ ಅಂಕೋಲೆಯ ಸಮೀಪದ ಊರಿನಿಂದ ಬಂದವನು ನಾನು ಎಂದು ಹೇಳಿಕೊಂಡೆ. ಅರೆರೇ, ಅದೆಂಥ ವೀರಾವೇಶ ಬಂದುಬಿಟ್ಟಿತು ನನಗೆ! ಸ್ವಾತಂತ್ರ್ಯ ಚಳುವಳಿ ನನಗೆ ಪುಸ್ತಕದಲ್ಲಿದ್ದ ಇತಿಹಾಸವಾಗಿರಲಿಲ್ಲ. ಉಪ್ಪಿನ ಚಳುವಳಿಯಲ್ಲಿ ಪಾಲುಗೊಂಡವರನ್ನು ನೋಡಿದ್ದೆ, ಮುಟ್ಟಿ ಅಭಿಮಾನದಿಂದ ಮಾತಾಡಿಸಿದ್ದೆ. ಅವರ ಮಾತುಗಳನ್ನು ಕೇಳಿದ್ದೆ. ನನಗೇ ಅರಿವಿಲ್ಲ, ಇದೀಗ ಇಲ್ಲಿ

ಈ ಸಭೆಯಲ್ಲಿ ಅರ್ಧ ಗಂಟೆ ಮಾತಾಡಿಬಿಟ್ಟಿದ್ದೆ. ಭಾರೀ ಕರತಾಡನಗಳಾದವು. ಒಮ್ಮೆಲೇ ಹೀರೋ ಆಗಿಬಿಟ್ಟೆ! ಮುಜುಗರವೆನ್ನಿಸಿ ಸಭೆಯಿಂದ, ಮನೆಯಿಂದ ತಪ್ಪಿಸಿಕೊಂಡು ಮೆಜೆಸ್ಟಿಕ್ ಕಡೆ ಹೋಗಿ ತಿರುಗಾಡಿ ಸಂಜೆ ಮನೆಗೆ ಹಿಂತಿರುಗಿದೆ.

*********

ರೂಮು ಸೇರಿದ ಸ್ವಲ್ಪ ಹೊತ್ತಿಗೆ ರಾಯರ ಮನೆಯಿಂದ ಕರೆ ಬಂತು. ಮನೆಗೆ ಹೋದೆ. "ಕೂತುಕೋ" ಎಂದರು. ನಿಂತೇ ಇದ್ದೆ.

"ಮುಂಗಡ ಹಣ ಕೊಡಬೇಕು, ನೆನಪಿದೆ ತಾನೇ?" ಎಂದರು.

ನನ್ನ ಮುಖ ಸಣ್ಣದಾಯಿತು. ಎರಡು ಹೊಗಳಿಕೆ ಮಾತು ಆಡುತ್ತಾರೆ ಎಂದುಕೊಂಡರೆ...

"ನೆನಪಿದೆ, ಆದಷ್ಟೂ ಬೇಗ ಮುಟ್ಟಿಸುತ್ತೇನೆ" ಎಂದು ತಗ್ಗಿದ ದನಿಯಲ್ಲಿ ಹೇಳಿದೆ.

"ಬೇಗ ಅಂದರೆ ಅಷ್ಟು ಬೇಗ ಕೊಡುವುದೆ!" ಎಂದರು.

ಆಶ್ಚರ್ಯದಿಂದ ಅವರತ್ತ ನೋಡಿದೆ.

"ನನಗೆ ಕೊಡಬೇಕಾದ್ದು ಕೊಟ್ಟುಬಿಟ್ಟೆಯಲ್ಲಪ್ಪ, ಬೆಳಿಗ್ಗೆಯೇ ಸಂದಾಯವಾಗಿಹೋಯಿತು" ಎನ್ನುತ್ತಾ ರಾಯರು ಎದ್ದರು. ಚಕಿತಗೊಂಡು, ಅರೆಕ್ಷಣ ಬಿಟ್ಟು ಅವರ ಮಾತಿನ ಅರ್ಥ ಮಾಡಿಕೊಂಡು ಕಾಲಿಗೆ ಬೀಳಲುಹೋದೆ. ಆದರೆ ಅವರು ನನ್ನನ್ನು ಬಿಗಿದಪ್ಪಿಕೊಂಡರು.

"ದಡ್ಡ, ದುಡ್ಡು ದೊಡ್ಡಪ್ಪನಲ್ಲ, ಚಿಕ್ಕಪ್ಪನೂ ಅಲ್ಲ. ಬೆಂಗಳೂರಿಗೆ ಬದುಕು ಹುಡುಕಿ ಬಂದಿದ್ದೀ. ದುಡಿ, ಸಂಸಾರ ಮಾಡು, ಮನೆ ಕಟ್ಟು, ಇವೆಲ್ಲ ವರ್ಷ ಎರಡು ವರ್ಷಗಳಲ್ಲಿ ಮುಗಿಯೋದಿಲ್ಲ, ನಡೆಯಲಿ.. ನನ್ನನ್ನು ನಿನ್ನ ಹೊಸ ಮನೆಗೆ ಕರೆದು ಊಟ ಹಾಕು. ನೀನು ಸ್ವತಂತ್ರ ಆಗಿದ್ದು ನೋಡಬೇಕು ನಾನು. ಈಗ ನೀನು ಹೋರಾಟ ಮಾಡಬೇಕು ನಿನ್ನ ಸ್ವಾತಂತ್ರ್ಯಕ್ಕೆ, ನಿನ್ನ ಉಪ್ಪಿಗೆ, ಗೊತ್ತಾಯ್ತ? ಇವತ್ತು ನಮ್ಮ ಜೊತೆ ಊಟ ಮಾಡು".

ರಾಮಕೃಷ್ಣರಾಯರು ಈಗಿಲ್ಲ. ಆದರೆ ಅವರು ನಾನು 'ಸ್ವತಂತ್ರ' ಆಗಿದ್ದನ್ನು ನೋಡಿ, ನನ್ನ ಮನೆಯಲ್ಲಿ ಊಟ ಮಾಡಿ, ಆಶೀರ್ವಾದ ಮಾಡಿ ಹೋದರು. ಫೋಟೋ ಇದೆ. ■

---

## ತರಕಾರಿ

**ಎಸ್. ಎನ್. ಗಣನಾಥ ಮೈಸೂರು**

**ಎಲ್ಲ ತರಕಾರಿಗಳೂ ಈ ನಡುವೆ ತುಟ್ಟಿ**
**ಹೀಗೆ ಆದರೆ ಮುಂದೆ ತಿಳಿಸಾರೇ ಗಟ್ಟಿ**
**ಆಗೀಗ ಒಂದೆರಡು ಹೋಳುಗಳು ಸಿಕ್ಕು**
**ಬಾಯಲಿಟ್ಟರೆ ನೋಡು ಅದೇ ನಿನ್ನ ಲಕ್ಕು**

# ಸರ್ವಂ ತ್ರಿವರ್ಣಮಯಂ

●ನಳಿನಿ ಸೂರ್ಯಪ್ರಕಾಶ್

ನಮ್ಮ ಶಾಲೆಯ ದಿನಗಳಲ್ಲಿ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ನಡೆಸ್ತಿದ್ದ ಕಾರ್ಯಕ್ರಮಗಳನ್ನು ನೋಡೋಕ್ಕೆ ಸಾಕಷ್ಟು ಸಂಖ್ಯೆಯಲ್ಲಿ ಮಕ್ಕಳ ಪಾಲಕರೂ ಮೈದಾನದಲ್ಲಿ ನೆರೆದಿರುತ್ತಿದ್ದರು. ಜೊತೆಗೆ ಬೀದಿಯಲ್ಲಿ ಹೋಗಿ ಬರುವ ಜನರೂ ನಿಂತು ನೋಡ್ತಿದ್ದರಿಂದ  ವೀಕ್ಷಕವೃಂದದ ಸಂಖ್ಯೆ ಮತ್ತಷ್ಟು ಹೆಚ್ಚಿರ್ತಿತ್ತು.

ಆ ದಿನ ನಾವು ಪ್ರದರ್ಶಿಸುತ್ತಿದ್ದ  ಡ್ರಿಲ್ಲು, ನೃತ್ಯ ಮುಂತಾದ ಕಾರ್ಯಕ್ರಮಗಳೆಲ್ಲವೂ ತ್ರಿವರ್ಣಮಯವಾಗಿರ್ತಿದ್ದವು. ಡಂಬೆಲ್ಸ್ ಡ್ರಿಲ್ಲಾದರೆ ಡಂಬೆಲ್ಸಿನ ಗುಂಡುಗಳಿಗೆ ಬಿಳಿ, ಹಸಿರು, ಕೇಸರಿ ಬಣ್ಣದ ಕಾಗದಗಳನ್ನು ಮೆತ್ತಿ, ಬಿಳಿ ಬಣ್ಣದ ಡಂಬೆಲ್ಸ್ ಹಿಡಿಯುವ ಮಕ್ಕಳನ್ನು ಮಧ್ಯದ ಸಾಲಿನಲ್ಲಿ, ಹಸಿರು, ಕೇಸರಿ ಬಣ್ಣದ  ಡಂಬೆಲ್ಸ್ ಹಿಡಿಯುವ ಮಕ್ಕಳನ್ನು ಆಚೆ ಈಚೆ ಸಾಲುಗಳಲ್ಲಿ ನಿಲ್ಲಿಸಿ ಡ್ರಿಲ್ ಮಾಡಿಸುತ್ತಿದ್ದರು. ಎಲ್ಲರೂ ಡಂಬೆಲ್ಸ್ ಎತ್ತಿ ಹಿಡಿದು ಮಾಡುವ ಡ್ರಿಲ್ಲುಗಳಲ್ಲಿ ತ್ರಿವರ್ಣ ಮೂಡಿಬಂದು ಸುಂದರವಾಗಿ ಕಾಣಿಸೋದು. ಹಾಗೇ ರಿಂಗ್ ಡ್ರಿಲ್ಲು ಇರ್ತಿತ್ತು. ರಿಂಗ್ಸಿಗೆ ಮೂರೂ ಬಣ್ಣದ ಕಾಗದ ಅಂಟಿಸಿ ಮಾಡುವ ಡ್ರಿಲ್ ಅದಾಗಿರ್ತಿತ್ತು. ಅದೇ ರೀತಿ ಧ್ವಜದ ಮೂರೂ ಬಣ್ಣದ ರಿಬ್ಬನ್ಸ್ ನ ಕುಚ್ಚುಗಳನ್ನು ಹಿಡಿದು ಮಾಡುವ ಡ್ರಿಲ್ಲು ಮತ್ತೊಂದು ಬಗೆಯದು. ಒಟ್ಟಿನಲ್ಲಿ ಸರ್ವಂ ತ್ರಿವರ್ಣಮಯಂ ಆಗಿರ್ತಿತ್ತು.

ಹೀಗೇ ಯಾವುದೋ ಒಂದು ವರ್ಷದ ಆಗಸ್ಟು 15ರಂದು ಬಿಳಿ ಡಂಬೆಲ್ಸ್ ಹಿಡಿದು ಡ್ರಿಲ್ಲು ಮಾಡುವ ಸೌಭಾಗ್ಯ ನಂದಾಯ್ತು. ನೆರೆದ ಅಷ್ಟೊಂದು ಜನರ ಮುಂದೆ ನಮ್ಮ ಡ್ರಿಲ್ಲು ಶುರುವಾಯ್ತು. ಢಂ ಢಂ ಎನ್ನುವ ಡ್ರಮ್ಸ್‌ನ ಹಿಮ್ಮೇಳಕ್ಕೆ ನಮ್ಮ ಡ್ರಿಲ್ಲಿನ ಎರಡು ಮೂರು ಹಂತ ಸಾಂಗವಾಗಿ ಮುಗಿದಿತ್ತು. ಆದರಷ್ಟರಲ್ಲಿ ಎಡವಟ್ಟಾಗೇ ಹೋಯ್ತು! ಮಧ್ಯದ ಸಾಲಿನಲ್ಲಿ ಬಿಳಿ ಡಂಬೆಲ್ಸ್ ಹಿಡಿದು ಡ್ರಿಲ್ ಮಾಡ್ತಿದ್ದ ನನ್ನ ಸಿಂಕ್ ಅಥವಾ ಗುಂಪಿನೊಂದಿಗಿನ ಹೊಂದಾಣಿಕೆ ತಪ್ಪಿತ್ತು ! ಎಲ್ಲರೂ ಕೈ ಕೆಳಗೆ ಮಾಡಿ ಡಂಬೆಲ್ಸ್ ಹೊಡೆದರೆ ನಾನೊಬ್ಬಳು ಮಾತ್ರ ಕೈ ಮೇಲೆತ್ತಿ ಹೊಡೆಯೋದು, ಎಲ್ಲರೂ ಕೈ ಮೇಲೆತ್ತಿ ಹೊಡೆದರೆ ನಾ ಮಾತ್ರ ಕೈ ಕೆಳಗೆ ಮಾಡಿ ಹೊಡೆಯುವುದೂ ಆಗಿಹೋಯ್ತು, ಅದೂ ಅಷ್ಟೊಂದು ಜನರ ಮುಂದೆ ! ಹೀಗೇ ನಾಲ್ಕೈದು ಬಾರಿ ಆದನಂತರ ಹಿಂದಿದ್ದ ನನ್ನ ಸಹಪಾಠಿ ಬೇರೆ ಕಿಸಕ್ಕನೆ ನಕ್ಕುಬಿಟ್ಟಳು. ಮೊದಲೇ  ತಬ್ಬಿಬ್ಬಾಗಿದ್ದ ನನ್ನ  ಮುಖ ನಾಚಿಕೆಯಿಂದ ಬಿಸಿಯಾಗಿಹೋಯ್ತು. ಒಟ್ಟಿನಲ್ಲಿ ನನ್ನ ಎಡವಟ್ಟಿನಿಂದ ನನ್ನ ಕೈಯ ಬಿಳಿ ಡಂಬೆಲ್ಸು ನಮ್ಮ ಡ್ರಿಲ್ಲಿಗೆ ಕಪ್ಪು ದೃಷ್ಟಿಚುಕ್ಕೆ ಇಟ್ಟಹಂಗಿತ್ತು ! ನನಗಾದ ನಾಚಿಕೆಯಿಂದ ಆ ದಿನ ಕೊಟ್ಟ ಚಾಕಲೇಟೂ ರುಚಿಸಲಿಲ್ಲವೆನ್ನಿ.

ನಮ್ಮ ಕವಾಯತುಗಳಾದ ಮೇಲೆ ಭಾಷಣಪ್ರವೀಣರ ಸರದಿ. ಕನ್ನಡ ಮಾಧ್ಯಮದ ಮೂರ್ನಾಲ್ಕು ಮಕ್ಕಳೂ, ಇಂಗ್ಲೀಷ್ ಮಾಧ್ಯಮದ ಮೂರ್ನಾಲ್ಕು ಮಕ್ಕಳು ಒಬ್ಬರಾದ ಮೇಲೊಬ್ಬರು ಅವರಪಾಡಿಗವರು ಪುಂಖಾನುಪುಂಖವಾಗಿ ಭಾಷಣ ಹರಿಬಿಡುತ್ತಿದ್ದರು. ಉಳಿದ ಮಕ್ಕಳನ್ನು ಕೆಳಗೆ ಹಲವಾರು ಸಾಲುಗಳಲ್ಲಿ ಕೂರಿಸಿರುತ್ತಿದ್ದರು. 1857ರ ಮಹಾಸಂಗ್ರಾಮ, ಕ್ವಿಟ್ ಇಂಡಿಯ, ಅಸಹಕಾರ ಚಳುವಳಿ, ಉಪ್ಪಿನ ಸತ್ಯಾಗ್ರಹ

ಮುಂತಾದವುಗಳ ಜೊತೆಗೆ ಗಾಂಧಿ, ನೆಹರು, ಸರದಾರ ಪಟೇಲರು, ಲಾಲ್ ಬಹದೂರ ಶಾಸ್ತ್ರಿ ಮುಂತಾದ ದಿಗ್ಗಜರೆಲ್ಲರೂ ಭಾಷಣಗಳಲ್ಲಿ ಬಂದು ಹೋಗಿ ಮಾಡುತ್ತಿದ್ದರೂ, ಕುಳಿತ ನಮ್ಮ ಗಮನವೆಲ್ಲ ಎಲ್ಲೆಲ್ಲೋ ಇರೋದು. ಕಡ್ಡಿ ತಗೊಂಡು ನೆಲ ಕೆರೆಯೋದು, ಹರಿದಾಡೋ ಇರುವೆ, ಗೊದ್ದಗಳನ್ನ ಕೆಣಕೋದು, ಎಣಿಸೋದು ಇತ್ಯಾದಿ. ಅಕ್ಕ, ಪಕ್ಕ, ಹಿಂದೆ, ಮುಂದೆ ಕೂತವರ ಜೊತೆ ಪಿಸುಗುಡೋದು ಕಂಡರಂತೂ ನಮ್ಮ ಸುತ್ತ ಗಸ್ತು ಇರುತ್ತಿದ್ದ ನಮ್ಮ ಮೇಡಮ್ಮುಗಳು ನಮ್ಮತ್ತ ಗುರಾಯಿಸೋರು. ಆದರೂ ನಮ್ಮ ಕಪಿಚೇಷ್ಟೆ ಮಾತ್ರ ಹೇಗೋ ನಡೀತಿರೋದು. ಏನೇ ಆದ್ರೂ ಸ್ವಾತಂತ್ರ್ಯ ದಿನದಂದೇ ನಮ್ಮ ವಾಕ್ ಸ್ವಾತಂತ್ರ್ಯಕ್ಕೆ ತೀವ್ರ ಧಕ್ಕೆ ಬೀಳೋದು ಅನ್ನಿ!

ಹೀಗೇ ಪ್ರೈಮರಿ, ಹೈಸ್ಕೂಲುಗಳಲ್ಲಿ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಿಕೋತ ಕಾಲೇಜು ಮೆಟ್ಟಿಲೇರಿಯಾಯ್ತು. ಮೊದಲ ವರ್ಷದ ಪಿಯುಸಿಯಲ್ಲಿ ಆಗಸ್ಟ್ ಹದಿನೈದರಂದು ಎಂದಿನಂತೆ ಕಾಲೇಜಿಗೆ ಜೊತೆಯಾಗಿ ಹೋಗ್ತಿದ್ದ ನನ್ನ ಸ್ನೇಹಿತೆ, ಸಹಪಾಠಿಯ ಮನೆಗೆ ಹೋದೆ. ಡಿಗ್ರಿ ಓದ್ತಿದ್ದ ಅವಳಕ್ಕನಿಗೆ ಆಶ್ಚರ್ಯದ ಜೊತೆಗೆ ನಗುವೂ ಬಂತು! ""ಸ್ಕೂಲು ಹುಡುಗಿ ಥರ ಇಂಡಿಪೆಂಡೆನ್ಸ್ ಡೇ ಗೆ ಹೋಗ್ತಿದೀಯ?"" ಅಂತ ಮತ್ತಷ್ಟು ನಕ್ಕಳು. ಕಾಲೇಜು ಮೆಟ್ಟಿಲೇರಿದ ಮೇಲೆ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಭಾಗವಹಿಸದೇ ಇರುವ ಸ್ವಾತಂತ್ರ್ಯವೂ ನಮಗಿರತ್ತೆ ಅಂತ ತಿಳಿಯದ ಗುಗ್ಗುವಂತೆ ನಾನು ಅವಳಿಗೆ ಕಂಡಿರಬೇಕು! ಮಾರನೇ ವರ್ಷ ಆ. ಹದಿನೈದಕ್ಕೆ ನಾನು ಕಾಲೇಜಿಗೆ ಹೋದೆನೋ ಇಲ್ಲವೋ ನೆನಪಿಲ್ಲ. ಆದರೂ, ಆ ದಿನ, "ಇದು ಭಾರತೀಯರ ಹಬ್ಬ. ಅದಕ್ಕೆ ಕಾಲೇಜಿಗೆ ಹೋಗ್ತಿದೀನಿ." ಅಂತ ಆತ್ಮವಿಶ್ವಾಸದಿಂದ ಆಕೆಗೆ ಉತ್ತರ ಕೊಡಬೇಕಿತ್ತು ಅಂತ ಆಗಾಗ ಅನ್ನಿಸಿದ್ದುಂಟು.

ಮುಂದೆ ನಾನು ಆಟವಾಡಿ, ಡ್ರಿಲ್ಲು ಮಾಡಿದ ಶಾಲೆಯ ಮೈದಾನದಲ್ಲೇ ನನ್ನ ಮಗನ ಡ್ರಿಲ್ಲುಗಳನ್ನು ಹಲವಾರು ಆಗಸ್ಟು ಹದಿನೈದರಂದು ಒಬ್ಬ ತಾಯಿಯಾಗಿ ಕೂತು ವೀಕ್ಷಿಸಿದ ಖುಷಿಯಂತೂ ನನ್ನ ಪಾಲಿಗಿದೆ.

ಜೈ ಭಾರತ ಮಾತೆ

■

---




ಕಳೆದ ವರ್ಷದ
ಹಾಗೆ ಬರೀ
ಕೋವಿಡ್ ಬಗ್ಗೇನೇ
ಭಾಷಣ
ಮಾಡಬೇಡಿ.
ಸ್ವಾತಂತ್ರ ಯೋಧರ
ಬಗ್ಗೆ ಭಾಷಣ
ಮಾಡಿ ತಿಳೀತಾ..!!

# ಸ್ವಾತಂತ್ರ್ಯದ ಕಳ್ಳಗಾಳು!

●ತುರುವೇಕೆರೆ ಪ್ರಸಾದ್

'ರೀ! ಈ ವರ್ಷ ನಾನು ಸ್ವಾತಂತ್ರ್ಯದ ಅಮೃತ ಮಹೋತ್ಸವ ಆಚರಿಸ್ತಿದೀವಿ, ಈ ಸಂತೋಷಕ್ಕೆ ಏನೂ ಇಲ್ಲವಾ?' ಅಂದ್ರು ಪದ್ದಮ್ಮನೋರು'

'ಅದು ದೇಶಕ್ಕೆ ಬಂದ ಸ್ವಾತಂತ್ರ್ಯನ ಸಾಂಕೇತಿಕವಾಗಿ ಆಚರಿಸ್ತಿರೋದು. ನಮ್ಮಂತ ದೇಶವಾಸಿಗಳಲ್ಲ' ಅಂದ ಪರ್ಮೇಶಿ

'ಏನ್ರೀ ನೀವು? ನಿಮಗೆ ಸ್ವಲ್ಪನಾದ್ರೂದೇಶಾಭಿಮಾನಅನ್ನೋದೇಇಲ್ವಲ್ರೀ?75 ವರ್ಷದ ಸ್ವಾತಂತ್ರ್ಯನ ಸಂಭ್ರಮ, ಸಡಗರದಿಂದ ಆಚರಿಸ್ಬೇಕು ತಾನೆ?'

'ನಮ್ ಸಿದ್ಧಲಿಂಗಯ್ಯನವರು ಬರೆದಿದ್ರಲ್ಲ, ಎಲ್ಲಿಗೆ ಬಂತು ? ಯಾರಿಗೆ ಬಂತು ? 47ರ ಸ್ವಾತಂತ್ರ್ಯಅಂತ, ಅದು ಅಕ್ಷರಶಃ ನಿಜಕಣೆ'

'ಅಲ್ರೀ, ನಮ್ಮದೇ ಸರ್ಕಾರ, ನಮ್ಮದೇ ಮಂತ್ರಿಗಳು, ನಮ್ಮದೇ ರಾಜ್ಯಭಾರ ಇದೆಲ್ಲಾ ಸ್ವಾಂತಂತ್ರ್ಯಅಲ್ವಾ?

'ಹಾಗೆ ಅಂದ್ಕೊಂಡ್ ಬಿಟ್ಟಿದೀವಿ ಕಣೆ. ಎರಡು ಶತಮಾನ ಬ್ರಿಟಿಷರ ಕೈಲಿ ಆಳಿಸ್ಕೊಂಡಿದ್ದು ನೋಡು. ಪರೋಲ್ ಮೇಲೆ ಬಿಟ್ಟೋರತರ ಖುಷಿಯಾಗಿ ಅಡ್ಡಾಡಿಕೊಂಡ್ ಇದೀವಿ. ನಿಜವಾದ ಸ್ವಾತಂತ್ರ್ಯದ ಸವಿಯಾಗ್ಲಿ, ಸುಖವಾಗ್ಲಿ ನಮಗೆ ದಕ್ಕೇಇಲ್ಲ'

'ಅದ್‌ಹೇಗ್ ಆ ರೀತಿ ಹೇಳ್ತೀರಿ?'

'ಈಗ ನೋಡು, ನಿಜವಾದ ಸ್ವಾತಂತ್ರ್ಯ ಸಿಕ್ಕಿರೋದು ನಮ್ಮರಾಜಕೀಯದೋರಿಗೆ, ಒಂದಷ್ಟುಜನ ಸ್ವಾಮಿಗಳಿಗೆ? ಮಿಕ್ಕ ನನ್ನಂತೋರಿಗೆ ಯಾವ ಸ್ವಾತಂತ್ರ್ಯ ಸಿಕ್ಕಿದೆ?'

'ಏನ್ರೀ ಹೀಗ್ ಹೇಳ್ತಿದೀರಿ? ಅಖಂಡ ಭಾರತಕ್ಕೆ ಸಿಕ್ಕ ಸ್ವಾತಂತ್ರ್ಯ ನಿಮಗೆ ಸಿಕ್ಕಿಲ್ಲ ಅಂದ್ರೆಏನರ್ಥ?

'ನೋಡೇ, ಈ ಸ್ವಾತಂತ್ರ್ಯ ಅನ್ನೋದೂ ಒಂದ್ ತರ ದೇವರಿದ್ದಂಗೆ! ಸಾಕ್ಷಾತ್ಕಾರ ಮಾಡ್ಕೊಂಡೋರಿಗೆ ದಕ್ಕಿದೆ. ಉಳಿದೋರಿಗೆ ಇಲ್ಲ'

'ತತ್ವಜ್ಞಾನಿಗಳ ತರ ಮಾತಾಡ್ಬೇಡಿ..ಅರ್ಥ ಆಗೋ ಹಾಗೆ ಮಾತಾಡಿ'

'ನೋಡಮ್ಮ, ಈಗ ಸ್ವಾತಂತ್ರ್ಯಅಂದ್ರೇನು? ನಮಗೆ ಇಷ್ಟ ಬಂದ ಹಾಗೆ, ನಮ್ ಮನಸ್ಸಿಗೆ ಖುಷಿ ಆಗೋ ಹಾಗೆ, ಯಾರ ನಿರ್ಬಂಧಕ್ಕೂ ಒಳಪಡದೆ ನಡ್ಕೊಳೋದು ತಾನೆ? ಅದು ಈಗ ನನ್ನಂತೋರಿಗೆ ಸಾಧ್ಯಆಗಿದ್ಯಾ?'

'ಯಾಕ್ ಸಾಧ್ಯಆಗಿಲ್ಲ? ನಿಮ್ ಸ್ವಾತಂತ್ರ್ಯಕ್ಕೆಇಲ್‌ಯಾರ್‌ಗೋಡೆಕಟ್ಟಿದಾರೆ?'

'ಚಿಕ್ಕೋರಾಗಿದ್ದಾಗ ಅಪ್ಪ, ಅಮ್ಮನ ನಿರ್ಬಂಧ, ಅದು ಮಾಡ್ಬೇಡ, ಇದು ಮಾಡ್ಬೇಡ ಅಂತ. ಆಮೇಲೆ ಮೇಷ್ಟ್ರುಗಳ ನಿರ್ಬಂಧ. ನಮ್ ಸ್ವಾತಂತ್ರ್ಯ ಚಟುವಟಿಕೆ ಮೇಲೆ ಕಣ್ಣಿಟ್ಟುಎಲ್ಲಾತಗೊಂಡು ಹೋಗಿ ಪಿನ್ ಟು ಪಿನ್ ಅಪ್ಪ, ಅಮ್ಮಂಗೆ ಹಾಕ್ಕೊಡೋರು. ಅಲ್ಲಿ ಮತ್ತೆಇನ್ನಷ್ಟು ಹಿಂಸೆ, ಗೃಹಬಂಧನದ ಶಿಕ್ಷೆ.ಆಮೇಲೆ ನಿನ್

ಜೊತೆ ಮದ್ವೆ ಅಂತ ಆಯ್ತು. ಇದು ಪೂರಾ ಅಂಡಮಾನ್ ಕಾಲಾಪಾನಿ ಜೀವಾವಧಿಕಣ್ಣೀರು ಶಿಕ್ಷೆ ಆಗೋಯ್ತು. ಈಗ ನಿನ್ ಮಕ್ಕಳು ಸಮುದ್ರಕ್ಕೆ ಹಾರಿಈಜ್ಕೊಂಡು ಬರೋಕೂ ಬಿಡ್ದೆಕಟ್ ಹಾಕಿದಾರೆ'

'ಅಯ್ಯೋ ಅಯ್ಯೋ ದೇವರೇ, ನೀವು ಹೇಳೋದನ್ನ ಕೇಳುದ್ರೆ ನಾನು ನನ್ ಮಕ್ಕಳು ದೊಡ್ ಟೆರರಿಸ್ಟ್‌ಗಳು, ಮಾನವ ಬಾಂಬುಗಳು. ನಿಮಗೆ ಚಿತ್ರಹಿಂಸೆ ಮಾಡಿದೀವಿ ಅನ್ನೋ ಹಾಗೆ ಮಾತಾಡ್ತಿದೀರಲ್ರೀ'

'ಮಾನವ ಬಾಂಬ್‌ಅಲ್ಲ, ನಮ್ ಮಾವನ ಬಾಂಬು ನೀನು'

'ನೋಡಿ, ಈ ತರ ಎಲ್ಲಾ ಆರೋಪ ಮಾಡಿದ್ರೆ ನಾನು ಇವತ್ತೇ ತವರು ಮನೆಗೆ ಹೊರಟೋಗ್ತೀನಿ'

'ಎಷ್ಟು ಸಾರಿ ಹೋಗಿಲ್ಲ ನೀನು? ಒಂದ್ಸಾರಿನಾದ್ರೂ ಪರ್ಮನೆಂಟಾಗಿ ಅಲ್ಲೇ ಉಳ್ಕೊಂಡಿದೀಯಾ? ಇಲ್ ಇದ್ದಾಗಲೂ ಹೆದರಿಕೆ, ಹೋದಾಗ ಸ್ವಾತಂತ್ರ್ಯದ ಮಧುರ ಕ್ಷಣಗಳನ್ನು ಅನುಭವಿಸೋ ಯಾವ ಗಳಿಗೆಲಿ ಧುತ್ತಂತ ಪ್ರತ್ಯಕ್ಷ ಆಗ್ತೀಯೋ ಅನ್ನೋ ಭಯ'

'ಏನ್ರೀ ನೀವು? ಸ್ವಾತಂತ್ರ್ಯಕ್ಕೋಸ್ಕರ ಎಷ್ಟೊಂದು ಮಹನೀಯರು ಮನೆ ಮಠ ತೊರೆದು ಹೋರಾಡಿ ನಮಗೆ ಸ್ವಾತಂತ್ರ್ಯ ಕೊಡ್ಸಿದಾರೆ. ನೀವು ಈ ರೀತಿ ಗೋಳಾಡ್ತಿದೀರಲ್ಲ? ನಮ್ ಸೋದರ ಮಾವನೇ ಒಂದು ಪ್ರತ್ಯಕ್ಷ ಉದಾಹರಣೆ!'

' ಎಷ್ಟೋ ಜನ ಪುಣ್ಯಾತ್ಮರು ಹೋರಾಡಿ ಸ್ವಾತಂತ್ರ್ಯ ಕೊಡ್ಸಿದಾರೆ ಕಣೇ..ಅವರ ಬಗ್ಗೆ ನಂಗ್ ಗೌರವ ಇದೆ. ಆದರೆ ನಿಮ್ ಮಾವನ ಹಾಗೆ ಮನೆ ಮಠ ಬಿಟ್ ಹೋದೋರೆಲ್ಲಾ ಭಾರತದ ಸ್ವಾತಂತ್ರ್ಯ ಹೋರಾಟ ಮಾಡಿದ್ರಾ? ಅಥವಾ ತಮ್ಮ ಸ್ವಾತಂತ್ರ್ಯಕ್ಕೆ ಹೋರಾಟ ಮಾಡಿದ್ರಾ ಅನ್ನೋ ಡೌಟಿದೆ?

'ಏನ್ರೀ ನಿಮ್ ಮಾತಿನ ಅರ್ಥ? ನಮ್ ಮಾವನ್ ದೇಶಭಕ್ತಿನೇ ನೀವು ಅನುಮಾನುಸ್ತಿದೀರಲ್ಲ'

'ದೇಶಭಕ್ತಿನ ಅನುಮಾನಿಸ್ತಿಲ್ಲ, ಅವರ ಹೋರಾಟದ ಬಗ್ಗೆ ಅನುಮಾನ ಬರ್ತಿದೆ. ಉದಾಹರಣೆಗೆ ನಿಮ್ ಕೈಲಾಸ ಮಾವ! ನೀನೇ ಹೇಳ್ತಿದ್ದೆ, ಗಂಡ ಹೆಂಡತಿಗೆಎಣ್ಣೆ ಸೀಗೇಕಾಯಿ ಅಂತ..ಅವರು ಮನೆ ಬಿಟ್ ಹೋದ್ರು.. ಹೋಗಬೇಕಾದ್ರೆ ಮನೇಲಿ ವಂಶಪಾರಂಪರ್ಯವಾಗಿ ಬಂದಿದ್ದ ಮುಡಿ ಒಡವೆ ಹಿಡ್ಕೊಂಡೇ ಹೋಗಿದ್ರು.. ಹುಡುಕ್ತಾರೆ, ಮತ್ತೆ ಕರ್‍ಕೊಂಡ್ ಬಂದು ಕೊರಳಿಗೆ ನಿಮ್ಮತ್ತೆನ ಕಟ್ತಾರೆ ಅಂತ ಸ್ವಾತಂತ್ರ್ಯ ಹೋರಾಟ ಅಂದ್ರು.. ಒಡವೇನ ಸ್ವಾತಂತ್ರ್ಯ ಹೋರಾಟಕ್ಕೆ ಗಾಂಧೀಜಿಗೆ ಕೊಟ್ಟೆ ಅಂತ ನಿಮಗೆ ಪತ್ರ ಬರುದ್ರು. ನಿಮ್ಮ ದೃಷ್ಟೀಲಿ, ಜನಗಳ ದೃಷ್ಟೀಲಿ ದೊಡ್ ಹೀರೋ ಆಗೋದ್ರು. ಸ್ವಾಂತಂತ್ರ್ಯದ ಕಲಿ ಅನಿಸ್ಕೊಂಡ್ರು. ಮನೆ ಬಿಟ್ ಹೋದ್ಮೇಲೆ ಎಷ್ಟೋ ವರ್ಷ ಈ ಕಡೆ ತಲೆ ಹಾಕ್ಲೇಇಲ್ಲ.. ಉತ್ತರದ ಕಡೆಗೆ ಹೋಗಿ ಜಲಿಯನ್‌ವಾಲಾಬಾಗ್‌ನಲ್ಲೋ, ವಿದುರಾಶ್ವತ್ಥದಲ್ಲೋ ಆಹುತಿ ಆಗಿ ಹುತಾತ್ಮನೇ ಆಗಿರ್ಬೇಕು ಅಂತ ನೀವು ಅಂದ್ಕೊಂಡ್ರಿ. ಆದ್ರೆ ಅವರು ಎಲ್ಲೂ ಹೋಗಲೇ ಇಲ್ಲ. ಇಲ್ಲೇ ತರ್ಲೆಕ್ಯಾತನಹಳ್ಳಿ ಸುತ್ತಮುತ್ತನೇ ಓಡಾಡಿಕೊಂಡಿದ್ರು. ಅದು ಹೋಗಲಿ ಅಲ್ಲೆಲ್ಲೋ ದಂಡಿಯಾತ್ರೆ, ಇಲ್ಲಿ ಪಾನ ನಿಷೇಧ, ಮೈಸೂರು ಚಲೋ ಅಂತ ಯಾವ ಕತ್ತಿ,

ಗುರಾಣಿನೂ ಇಲ್ದೆ ಇರೋ ಅಹಿಂಸಾ ಹೋರಾಟಗಾರರ ಹಿಂದೂ ಹೋಗ್ಲಿಲ್ಲ. ಯಾವ ರೈಲು ತಡೆನೂ ಮಾಡ್ಲಿಲ್ಲ, ಯಾವ ಬಿಲ್ಡಿಂಗ್‌ಗೂ ಬೆಂಕಿ, ಬಾಂಬು ಏನೂ ಹಾಕ್ಲಿಲ್ಲ. ಯಾವುದೋ ಸೊಸೈಟಿಗೆ ಚೀಟ್ ಮಾಡುದ್ರು ಅಂತ ಕೇಸಾಗಿ ಜೈಲ್‌ಗೆ ಹಾಕಿದ್ರು. ಅದು ಅಂಡಮಾನ್ ಜೈಲಿಗೂ ಅಲ್ಲ, ತ್ರಿಹಾರ್ ಜೈಲಿಗೂ ಅಲ್ಲ, ಇಲ್ಲೇ ಬೆಂಗಳೂರು ಜೈಲ್ಗೆ ಹಾಕಿದ್ರು. ಹಾಯಾಗಿ ಜೈಲಲ್ಲಿ ಯಾರ ಕಾಟವೂ ಇಲ್ದೆ ಸುಖವಾಗಿ ತಿಂದ್ಕೊಂಡು ಇದ್ರು. ಆಮೇಲೆ ಶಿಕ್ಷೆ ಅನುಭವಿಸಿ ಈಚೆ ಬಂದ್ಮೇಲೆ ಸ್ವಾತಂತ್ರ್ಯ ಹೋರಾಟಕ್ಕೋಸ್ಕರ ಜೈಲಿಗೆ ಹೋಗಿದ್ದೆ ಅಂದ್ರು. ಅದೇ ತರ ಒಂದು ಸರ್ಟಿಫಿಕೇಟ್ ಗಿಟ್ಟಿಸ್ಕೊಂಡ್ರು. ಸ್ವಾತಂತ್ರ್ಯ ಹೋರಾಟಗಾರರ ಪೆನ್ಶನ್ನು ಮಂಜೂರು ಮಾಡಿಸ್ಕೊಂಡ್ರು. ವಾಪಸ್ ಮನೆಗೆ ಬರೋ ಹೊತ್ತಿಗೆ ನಿಮ್ಮಅತ್ತೆ ಶಕ್ತಿ ಉಡುಗಿತ್ತು,ಅವರು ಹಾಸಿಗೆ ಹಿಡಿದಿದ್ರು. ಇವರಿಗೆಕೀರ್ತಿ ಅಮಲು ತಲೆಗೇರಿತ್ತು. ಸನ್ಮಾನ, ರಾಜಕೀಯ,ಸಮಾಜ ಸೇವೆ ಅಂತ ಹೊರಟ್ರು. ಇನ್ನೆಲ್ಲಿಂದ ಬರ್ಬೇಕು ಮಕ್ಕಳು? ಅಲ್ಲಿಗೆ ಮೂರು ಟೈರ್ ಸ್ವಾತಂತ್ರ್ಯನೂ ಸಿಕ್ ಹೋಗಿ ಜನ್ಮ ಸಾರ್ಥಕ ಮಾಡ್ಕೊಂಡ್ ಬಿಟ್ಟ ಪುಣ್ಯಾತ್ಮ'

'ಅಯ್ಯೋ ಭಗವಂತ, ನಮ್ಮಾವನ ಬಗ್ಗೆ ಇಲ್ಲಸಲ್ಲದ ಕತೆ ಕಟ್ಟಿ ಇಷ್ಟೊಂದು ಹಗುರವಾಗಿ ಮಾತಾಡ್ತಿದೀರಲ್ಲ, ಅವರೇನ್ರೀ ನಿಮಗೆ ಅನ್ಯಾಯ ಮಾಡಿದಾರೆ? ಅವರತೇಜೋವಧೆ ಮಾಡಿ ವ್ಯಕ್ತಿತ್ವನಾಶ ಯಾಕ್ರೀ ಮಾಡ್ತಿದೀರಿ?

'ಅಯ್ಯೋ ಮಹರಾಯಿತಿ, ನಾನು ಯಾವ ಕತೆನೂ ಕಟ್ತಿಲ್ಲ, ತೇಜೋವಧೆನೂ ಮಾಡ್ತಿಲ್ಲ. ಅವರೇ ಇದನ್ನೆಲ್ಲಾ ಬಾಯ್ ಬಿಟ್ಟು ಹೇಳಿದ್ದು ಕಣೆ'

'ಏನು ನಮ್ಮಾವ, ಇದನ್ನೆಲ್ಲ ನಿಮಗೆ ಹೇಳಿದ್ರಾ?

'ಹೂನೇ! ಕಂಠಮಟ್ಟ ಕುಡಿದು ಎಲ್ಲಾ ಸತ್ಯಾನು ಬಕ ಬಕ ಕಕ್ಕೊಂಡ್ರು. ನಾನು ತುಂಬಾ ತಪ್ ಮಾಡ್ಬಿಟ್ಟೆ. ಸಾಯೋಕೆ ಮುಂಚೆ ಯಾರ ಹತ್ರನಾದ್ರೂ ಸತ್ಯ ಹೇಳ್ಬೇಕು ಅನಿಸ್ತಿತ್ತು ಕಣೋ..ನಿನ್ ಹತ್ರ ಎಲ್ಲಾ ಹೇಳ್ಬಿಟ್ಟಿದೀನಿ. ಈ ಪ್ರಾಯಶ್ಚಿತ್ತಕ್ಕೆ ನಾನು ಕಾಶಿಯಾತ್ರೆ ಮಾಡ್ಕೊಂಡು ಬರ್ತೀನಿ ಅಂತ ಹೇಳಿ ಗುಟ್ಟಾಗಿ ಫಾರಿನ್ ಟೂರು ಹೊಡ್ಕಂಡು ಬಂದ್ರು'

'ಹೌದೇನ್ರೀ? ನಂಗ್ ಇದೆಲ್ಲಾ ಗೊತ್ತೇ ಇರ್ಲಿಲ್ವಲ್ರೀ? ಹೌದು, ಈ ಮೂರು ಟೈರ್ ಸ್ವಾತಂತ್ರ್ಯ ಅಂತ ಏನೋ ಅಂದ್ರಲ್ಲ, ಹಾಗಂದ್ರೇನು?'

'ಹೆಂಡ್ತಿಯಿಂದ ಬಿಡುಗಡೆ ಪಡೆಯೋದು ಒನ್ ಟೈರ್ ಸ್ವಾತಂತ್ರ್ಯ, ಮಕ್ಕಳಿಂದನೂ ಬಿಡುಗಡೆ ಪಡೆಯೋದು ಟೂಟೈರ್ ಸ್ವಾತಂತ್ರ್ಯ, ರಾಜಕೀಯಕ್ಕೆ ಸೇರಿಏನ್ ಬೇಕಾದರೂ ಮಾತಾಡ್ಕೊಂಡು, ಎಷ್ಟು ಬೇಕಾದ್ರೂ ಕಮಾಯಿಸೋದು ತ್ರೀಟೈರ್ ಸ್ವಾತಂತ್ರ್ಯ. ನಿಮ್ ಮಾವ ಇಂತಹ ಅಪರೂಪದ ಸ್ವಾತಂತ್ರ್ಯ ಹೋರಾಟಗಾರ, ಸ್ವಾತಂತ್ರ್ಯ ಹೋರಾಟದ ಹುರಿಯಾಳು, ಅಲ್ಲಲ್ಲ ಕಳ್ಳಗಾಳು! ದೇಶಕ್ಕೆ ಸ್ವಾತಂತ್ರ್ಯ ಬಂದೋಯ್ತು, ಹಾಳಾದ್ದು ಈ ತರ ಹೋರಾಟಗಾರ ಆಗೋ ಛಾನ್ಸ್ ನಮಗೆ ಸಿಗ್ಲೇ ಇಲ್ಲ, ಸಂಸಾರ, ಮಕ್ಕಳು ಅಂತ ಭವ ಬಂಧನದಲ್ಲಿ ಮುಳುಗಿ ಹಾಳಾಗೋದ್ವಿ' ಪರ್ಮೇಶಿ ಲೊಚಗುಟ್ಟಿದ. ಪದ್ದಮ್ಮನವರು ಮಾತಿಲ್ಲದೆ ಅವಾಕ್ಕಾಗಿ ಕೂತರು!

■

ಆಗಸ್ಟ್ - 1947ರ

# ಕೊರವಂಜಿ ಯಿಂದ

*************************

## ಜಾಹೀರಾತು ಸ್ವಾರಸ್ಯ

*************************

28 ವರ್ಷದ ಪದವೀಧರ, ಬ್ಯಾಂಕ್ ನೌಕರ (ತಿಂಗಳಿಗೆ 150 ರೂ.)ರೊಬ್ಬರಿಗೆ ವಾಸಕ್ಕೆ ಯೋಗ್ಯವಾದ ಮನೆಯೊಂದನ್ನು ಬಾಡಿಗೆಗೆ ಕೊಡಬಲ್ಲ ಒಬ್ಬರ ಕನ್ಯಾ, ಮದುವೆಗಾಗಿ ಬೇಕಾಗಿದೆ. ಮನೆ ಪ್ಲಾನನ್ನು ಕಳಿಸಿ.

***

ಕೂಡಲೇ ಬೇಕಾಗಿದೆ... ಹತ್ತು ವರ್ಷದ ಹುಡುಗ... ಕ್ಯೂ ನಿಲ್ಲಲು ಸಮರ್ಥನಾಗಿರಬೇಕು.... ತಿಂಗಳಿಗೆ ಇಪ್ಪತ್ತು ರೂಪಾಯಿ ಕೊಡಲು ಸಿದ್ಧರಿದ್ದೇವೆ.

***

ಸಿನಿಮ ನಡೆಯುತ್ತಿರುವಾಗಲೇ ಹಿಂದಿಯನ್ನು ಕನ್ನಡಕ್ಕೆ ತರ್ಜುಮೆಮಾಡಿ ಕಿವಿಯಲ್ಲಿ ಹೇಳುವ ಜಾಣರಾದ ರಾಷ್ಟ್ರಭಾಷಾವಿಶಾರದರೊಬ್ಬರು ಬೇಕಾಗಿದೆ. ತಕ್ಷಣವೇ ಬರೆಯಿರಿ.

***

ಪರಮಾಣು ಬಾಂಬಿನ ಸಿಡಿತದಿಂದ ತಪ್ಪಿಸಿಕೊಳ್ಳಲು ಮಂತ್ರ ಕವಚವನ್ನು ಉಪಯೋಗಿಸಿ. ಮುಂದಿನ ಯುದ್ಧದಲ್ಲಿ ನಿಮಗೆ ಇದು ಪ್ರಾಣದಾನಮಾಡುವುದು. ಮುಂದಿನ ಯುದ್ಧದಲ್ಲಿ ನಿಮಗೆ ಇದು ಪ್ರಾಣದಾನಮಾಡುವುದು. ಇಂದೇ ಬರೆಯಿರಿ (ಮಹತೋಮಹಿಮ ಏಜನ್ಸಿ)

***

ಬೆತ್ತವೊಂದಕ್ಕೆ ಎರಡಾಣೆ.... ಶಾಲಾ ಬಾಗಿಲಲ್ಲೇ ತಂದು ಸಪ್ಲೈ ಮಾಡಲಾಗುತ್ತೆ... ಸುತ್ತಳತೆ 2 1/2 ಅಂಗುಲ, ಉದ್ದ 4 1/2 ಅಡಿ. ... ನೂರಕ್ಕೆ 10 ರೂ... ಉಪಾಧ್ಯಾಯರಿಗೆ ಪ್ರತ್ಯೇಕ ರಿಯಾಯತಿ.... ವಿದ್ಯಾಭ್ಯಾಸ ಇಲಾಖೆಯಿಂದ ಅಂಗೀಕೃತವಾದದ್ದು.... (ಚರ್ಮ ಚಿಕಿತ್ಸಾಲಯ)

***

ಇದೀಗ ಸುಸಮಯ. ಸುಲಭ ಬಾಡಿಗೆ .... 1ನೇ ರಸ್ತೆ, 33ನೇ ನಂ. ಮನೆಯ

ಮೋಟಾರ್ ಷೆಡ್ಡು... ನವದಂಪತಿಗಳ ಸಂಸಾರಕ್ಕೆ ತುಂಬ ಯೋಗ್ಯವಾದದ್ದು.. ಮಾಲೀಕರ ಬೇಬಿಯನ್ನಿರಿಸಿದ ಮೇಲೇ, ಉಳಿದ ಜಾಗಕ್ಕೆ 35 ರೂ. ಮಾತ್ರ....

****

ಪ್ರಖ್ಯಾತ 'ಅಹಿಂಸಾ' ದಂತವೈದ್ಯರು ಹಾಗೂ ಸೈಕಲ್ ರಿಪೇರರು! ಗಡಿಯಾರ, ಗ್ರಾಮಫೋನು, ವಗೈರಾಗಳನ್ನೂ ಸರಿಪಡಿಸಲಾಗುವುದು. ಮಿಕ್ಕ ವೈದ್ಯರಲ್ಲಿ ಹೋಗಿ ಬಾಯಿಬಾಯಿ ಬಿಡಬೇಡಿ... ನಮ್ಮಲ್ಲಿಗೆ ಬನ್ನಿ! ಉಚಿತವಾಗಿ ಉದುರಿಸಿ, ರಿಯಾಯಿತಿಯಲ್ಲಿ ಕಟ್ಟಿಸಿಕೊಡುತ್ತೇವೆ.

***

ಬೇಕಾಗಿದೆ. ಆಸ್ಪತ್ರೆ ಯಾವುದಾದರೊಂದರಲ್ಲಿ 4 ಬೆಡ್ಡುಗಳು ಬೇಕಾಗಿದೆ. ಖಾಯಿಲೆ ಏನೂ ಇಲ್ಲದ ಪೆನ್‌ಷನ್‌ದಾರರೊಬ್ಬರಿಗೆ ... ವಾಸಕ್ಕೆ ಸಿಕ್ಕದ ಪ್ರಯುಕ್ತ... ಗಂಡ.. ಒಬ್ಬ ಹೆಂಡತಿ.... ಇಬ್ಬರು ಅತ್ತೆಯರು.

***

■

---

ಲಕ್ಷ್ಮಣ್ ಕೊರವಂಜಿ

ನಲವತ್ತರ ದಶಕದಲ್ಲಿ ಯುವ ಕನ್ನಡಿಗ ಆರ್.ಕೆ. ಲಕ್ಷಣ್ ಕೊರವಂಜಿಗಾಗಿ ರಚಿಸಿ ಕೊಟ್ಟ ವ್ಯಂಗ್ಯಚಿತ್ರಗಳು ಹಲವು.

ಅವುಗಳಲ್ಲಿ ಇದೂ ಒಂದು – ನಿಮಗಾಗಿ.




"ಬಿಲ್ ಕಳಿಸಿಬಿಡಿ ಸ್ವಾಮಿ ಇದಕ್ಕೆಲ್ಲ .............. ಕೊಟ್ಟು ಬಿಡ್ತೀನಿ........"
ಡಾಕ್ಟರ್ : "ಬಿಲ್ಲೇ!... ಬೇಡಿ ಇನ್ನೂ ಸ್ವಲ್ಪ ಶಕ್ತಿ ಬರ್‍ಲಿ ಆಮೇಲೆ ಬಿಲ್ ನೋಡುವಿರಂತೆ....."

## ಆಗಸ್ಟ್ - 1947ರ ಕೊರವಂಜಿ ಯಿಂದ

****************

# ಕುಹಕಿಡಿಗಳು

**********************

ಪಾಕೀಸ್ಥಾನದ ರಾಜ್ಯಾಂಗ ಸಭೆಗೆ 'ಖಾನ್‌ಸೆಂಬ್ಲಿ' ಎಂದು ಹೆಸರಿಡುತ್ತಾರೆಂಬುದು ಸುಳ್ಳಂತೆ–

*  *  *  *

ಅಖಿಲ ಭಾರತ ಧ್ವಜದಲ್ಲಿ ಚರಕಕ್ಕೆ 'ಚಕ್ರ' ಬಿದ್ದಿತಂತೆ.

*  *  *  *

ಬಾಪೂಜಿಯವರು "ನಾನು ಮಹಮ್ಮದೀಯನ ಸ್ನೇಹಿತ' ಎಂದು ಹೇಳಿದ್ದು ದಿಟ ಎಂದು ಈಗ ಹಲವು ಹಿಂದೂಗಳು ನಂಬುತ್ತಿದ್ದಾರಂತೆ –

*  *  *  *

ಕರ್ನಾಟಕ ಪ್ರಾಂತ್ಯವು ನಿರ್ಮಾಣವಾದ–ರೆ– ತ್ರಿವರ್ಣ ಧ್ವಜದ ಮೇಲೆ ಚಕ್ರಕ್ಕೆ ಬದಲಾಗಿ ಗಂಡಭೇರುಂಡ ಹಾಕಿದರೆ; ಧ್ವಜ ಸಮಸ್ಯೆ ಹಿತವಾಗಿ ಮುಗಿದಂತೆಯೇ.

*  *  *  *

ವೈಸರಾಯ್ ಮೌಂಟ್ ಬಾಟನ್ನರು ಭಾರತದಲ್ಲಿ ಮಾಡಿದ ಪುಣ್ಯ ಕೆಲಸಕ್ಕಾಗಿ ಅವರ ದಶದಿನ ದಾಯಾದಿಗೆ ಬ್ರಿಟನ್ನಿನ ಭಾವೀ ರಾಣಿಯ ಪ್ರೇಮಹಸ್ತವು ದೊರಕಿತು ಎಂದು ಜ್ಯೋತಿಷ್ಯಕಾರರು ಅಂದರಂತೆ.

*  *  *  *

ಕೆಲವು ಸಂಸ್ಥಾನಾಧೀಶರು ಕಾನ್‌ಸೆಂಬ್ಲಿಯಲ್ಲಿ

–ಕಮಲಪತ್ರ ನೀರಿನಲ್ಲಿದ್ದಂತೆ – ಇದ್ದಾರಂತೆ.

*  *  *  *

ಊಟಕ್ಕೆ ಮುಂಚೆ ಔಷಧಿ ಕುಡಿಯಬೇಕೋ – ಊಟ ಆದ್ಮೇಲೋ ಎಂದು ರೋಗಿ ಕೇಳಿದನಂತೆ.

– ಈಗಿನ ಕಾಲದ ಊಟ ನೋಡಿದರೆ, ಯಾವಾಗ ಬೇಕಾದರೂ ಔಷಧಿ

ಕುಡಿಯಬಹುದಲ್ಲವೇ?

*    *    *    *

ವಿಶೇಷ ಸಾಹಿತ್ಯೋತ್ಸವದಲ್ಲಿ ವಿಜ್ಞಾನ ಭಾಷಣಗಳಾದರೆ – ಶೇಷ ಸಾಹಿತ್ಯೋತ್ಸವಗಳಲ್ಲಿ ಜ್ಞಾನಭಾಷಣಗಳಾಗುತ್ತವೆಯೇ ಎಂದು ಗಣಿತಕಾರರು ಕೇಳಿದ್ದಾರೆ–

*    *    *    *

ಇಂದಿನಿಂದ ಸರ್ವರಿಗೂ ಸ್ವಾತಂತ್ರ್ಯ (15ರ ಕೂಗು)... ಪಾಪ! ಬ್ಲಾಕ್ ಮಾರ್ಕೆಟ್ ನವರಿಗೆ ಏನೂ ಹೊಸದಾಗಿ ಬಂದ ಹಾಗಾಗಲಿಲ್ಲವಲ್ಲಾ!

*    *    *    *

“ತಾಯಿ! ನಿಮ್ಮ ಯಜಮಾನರಿಗೆ ಸಂಪೂರ್ಣ ವಿಶ್ರಾಂತಿ ಬೇಕು”

“ಅಯ್ಯೋ ಡಾಕ್ಟರೆ! ಅವರು ನನ್ನ ಮಾತು ಕಿವಿಗೆ ಹಾಕಿಕೊಳ್ಳೋದಿಲ್ಲ"

"ಅಷ್ಟೇ ಸಾಕು!..."

■

## "ಅಂತಿಮ ಆಸೆ.......!"     ಎ. ವಿಜಯೇಂದ್ರ ರಾವ್

ಹೊರಗಡೆ ಡಿಸೆಂಬರ್ ಚಳಿ. ಕೋರ್ಟಿನ ಒಳಗೆ ಜಸ್ಟೀಸ್ ಜನಾರ್ದನರು ಗಲ್ಲು ಶಿಕ್ಷೆಗೆ ಗುರಿಯಾಗಿದ್ದ ಕುಮಾರ್ನನ್ನು ನಿನ್ನ ಅಂತಿಮ ಆಸೆ ಏನಾದರೂ ಇದ್ದರೆ ಹೇಳಪ್ಪ ? ಎಂದು ಕೇಳಿದಾಗ, ಕುಮಾರ್ – ಸಾರ್, ನನಗೆ ಒಂದು ಐವತ್ತು ಮಲಗೋಬ ಮಾವಿನ ಹಣ್ಣನ್ನು ತರಿಸಿಕೊಡಿ. ಅದನ್ನು ತಿಂದು ಸಂತೋಷದಿಂದ ಗಲ್ಲು ಏರುತ್ತೀನಿ ಎಂದಾಗ, ಜನಾರ್ದನ್ ಸಿಟ್ಟಾಗಿ – ಈ ಡಿಸೆಂಬರ್ ನಲ್ಲಿ ಎಲ್ಲಿಂದ ಮಾವಿನ ಹಣ್ಣು ತರಬೇಕಯ್ಯಾ? ಅದಕ್ಕೆ ನೀನು ಮಾರ್ಚ್, ಏಪ್ರಿಲ್ ವರೆಗೆ ಕಾಯಬೇಕು ಎಂದಾಗ, ಕುಮಾರ್ – ಆಗ್ಲಿ ಸ್ವಾಮಿ, ನನಗೇನೂ ಸಾಯಲು ಅವಸರವಿಲ್ಲ ಎಂದ.

ಒಂದು ತಿಂಗಳು ಕಳೆಯುವಷ್ಟರಲ್ಲೇ, ಜೈಲಿನಲ್ಲಿನ ಸಹ ಕೈದಿಗಳು ದೂರು ನೀಡಿದಾಗ, ಜಸ್ಟೀಸ್ ಜನಾರ್ದನ್ ಅವನನ್ನು ಕರೆಸಿ – ನೀನು ಇತರರಿಗೆ ಕೊಡುವ ಕಾಟ ಜಾಸ್ತಿಯಾಗಿದೆ, ಎಲ್ಲರೂ ನಿನ್ನ ಮೇಲೆ ಕೋಪಗೊಂಡಿದ್ದಾರೆ, ಆದ್ದರಿಂದ ಮಾವಿನ ಹಣ್ಣಿನ ಬಗ್ಗೆ ಆಸೆ ಕೈಬಿಟ್ಟು, ಬೇರೆ ಏನು ಬೇಕು ಎಂದಾಗ, ಅವನು ಯಾವುದೇ ಸಂಕೋಚವಿಲ್ಲದೆ – ಸಾರ್, ಹಾಗಾದರೆ ಒಂದೆರಡು ಕೆ.ಜಿ. ಚೆರಿ ಹಣ್ಣನ್ನು ತರಿಸಿಕೊಡಿ ಎಂದಾಗ, ಅವರು ಇನ್ನೂ ಹೆಚ್ಚಿಗೆ ಕೋಪಗೊಂಡು – ಏನು ನನ್ನ ಹತ್ತಿರ ತಮಾಷೆ ಮಾಡ್ತಾ ಇದ್ದೀಯಾ? ಸೀಸನ್ನಲ್ಲಿ ಸಿಗದೇ ಇರೋ ಹಣ್ಣನ್ನು ಕೇಳಿ ಕಾಲ ದೂಡೋಣ ಅಂದ್ಕೊಂಡಿದ್ದೀಯಾ ? ಅದೆಲ್ಲಾ ನನ್ನ ಹತ್ತಿರ ನಡೆಯಲ್ಲ...., ಇದೇ ತರಾ ಒಂದು ಕೇಸಿನಲ್ಲಿ, ಅಮೆರಿಕದ ಒಬ್ಬ ಕೈದಿ ಏನು ಕೇಳ್ಕೊಂಡಿದ್ದಾ ಅಂದ್ರೇ, ಅವನು ಸತ್ತ ಮೇಲೆ ಅವನ ಸಮಾಧಿಯನ್ನು ಅಬ್ರಹಾಂ ಲಿಂಕನ್ ರವರ ಸಮಾಧಿ ಪಕ್ಕದಲ್ಲೇ ಮಾಡಿ ಅಂತ ಕೇಳ್ಕೊಂಡಿದ್ದ. ಅವರುಗಳು ಹಾಗೆ ಅವನ ಇಚ್ಛೆಯನ್ನು ಪೂರೈಸಿದರು. ನೀನೂ ಇದ್ದೀಯಾ ಎಂದು ಅವನನ್ನು ಮೂದಲಿಸಿದಾಗ, ಕುಮಾರ್ – ಹಾಗಾದರೆ, ನನಗೇನೂ ಗಾಂಧಿ, ನೆಹರು ಅವರುಗಳ ಪಕ್ಕದಲ್ಲಿ ಸಮಾಧಿ ಆಗಬೇಕು ಅನ್ನೋ ಆಸೆಯೇನಿಲ್ಲಾ. ನನಗಿರೋ ಆಸೆಯೆಲ್ಲಾ ಒಂದೇ....ನನ್ನ ಇಷ್ಟು ವರ್ಷದ ಜೀವನದಲ್ಲಿ ನಿಮಗಿಂತ ಉತ್ತಮರನ್ನು ನೋಡಿಲ್ಲ. ಆದ್ದರಿಂದ, ನನ್ನನ್ನು ನಿಮ್ಮ ಸಮಾಧಿಯ ಪಕ್ಕದಲ್ಲೇ ಸಮಾಧಿ ಮಾಡಬೇಕು ಎಂದು ಹೇಳಿದಾಗ, ಜಸ್ಟೀಸ್ ಜನಾರ್ದನ್ ಮೂರ್ಛೆ ಹೋಗುವುದೊಂದೆ ಬಾಕಿಯಿತ್ತು.......!

ಆಗಸ್ಟ್ - 1947ರ
ಕೊರವಂಜಿ ಯಿಂದ

# ಆಗಸ್ಟ್ ಹದಿನೈದರಂದು

**●ದಾಶರಥಿ ದೀಕ್ಷಿತ್**

"ಹುರ್ರೇ.... ಆಗಸ್ಟ 15 ರಜಾ – ಅಂತಿಂಥಾ ರಜವಲ್ಲ. ಸ್ವಾತಂತ್ರ್ಯ ರಜ! ಮಜ! .... ಈರುಳ್ಳಿ ಹುಳಿ ಸಂಡಿಗೆ ಹಪ್ಪಳ ಗಸಗಸೆ ಪಾಯಸ, ಎಲೆ ತುದಿಗೆ ಸೌತೇಕಾಯಿ ಕೋಸುಂಬ್ರಿ – ಮೊಸರು ಹೆಪ್ಪು? ಇಲ್ಲವೇ ಬೇಡ, ತಿಳಿ ಮಜ್ಜಿಗೆ, ಹುಳಿ ತೊವ್ವೆ, ಹುರ್ರೇ1 ಹುರ್ರೇ!!" ಎಂದುಕೊಳ್ಳುತ್ತಾ ಚಿಂತಾಮಣಿರಾಯರು ಸ್ವಾತಂತ್ರ್ಯ ದಿನಾಚರಣೆಯ ಬಗ್ಗೆ ಮನೆಯಲ್ಲಿ ಮಾಡಬೇಕಾದ ಹಬ್ಬದ ಅಡಿಗೆ ಏರ್ಪಾಟು ಮಾಡಲು ಆಫೀಸು ಬಿಟ್ಟವರು ಒಳ್ಳೆ ಊದುಕಡ್ಡಿ – ವಿಳ್ಳೆದೆಲೆ ರಸಬಾಳೆ ದೇವರ ನೈವಿದ್ಯಕ್ಕೆ ಸುಗಂಧರಾಜಹೂವಿನ ಐದು ಕುಚ್ಚುಗಳು, ಬಾಳೆ ಎಲೆ ಸುರುಳಿ, ಸ್ವಾತಂತ್ರ್ಯ ಬಾವುಟ ಹಾಗೂ ಊಟದ ಸಾಮಗ್ರಿಗಳೊಡಗೂಡಿ ಮನೆಯ ಕಡೆ ಬಂದರು.

ಸಂಬಳ ಹೆಚ್ಚೀತು – ಒಂದುಜೊತೆ ಪಂಚೆ ಸಿಕ್ಕೀತು, ಕಾಷ್ಠ ವ್ಯಸನ ಪರಿಹರಿದೀತು, ಇದ್ದಲು ಮೂಟೆ ದೊರೆತೀತು, ಆಫೀಸರ ದರ್ಪ – ತಮ್ಮ ಹಲ್ಲು ಹಿರಿಯುವಿಕೆ – ಮಾಯವಾದಾವು. ಜುಬ್ಬ ಗಾಂಧಿ ಟೋಪಿಯೊಡನೆ ಆಫೀಸಿಗೆ ಹೋಗಬೇಕೆಂಬ ಆಸೆ ನೆರವೇರೀತು.

ಇಷ್ಟೆಲ್ಲಾ ಸವಿಗನಸುಗಳು ನನಸಾಗುವ ಸಂಭವಿದ್ದರೂ, ಚಿಂತಾಮಣಿರಾಯರು ಚಿಂತಾಕ್ರಾಂತರಾಗಿ ಕಾಲೆಳೆಯುತ್ತಿದ್ದುದು ನೋಡಿದರೆ, ಅವರು ಆಗಸ್ಟ್ ಹದಿನೈದರ ಹಬ್ಬ ಆನಂದದಿಂದ ಅನುಭವಿಸಲಾರರೆಂದು ಅವರನ್ನು ಸೂಕ್ಷ್ಮವಾಗಿ ಪರೀಕ್ಷಿಸಿದವರು ಹೇಳಬಹುದಾಗಿತ್ತು.

ಮನೆ ಮುಂದೆ ಸಾರಿಸಿ ಗುಡಿಸಿ ಕಾರಣೆ ಎಳೆದಿದ್ದರು. ಬಾಗಿಲಿಗೆ ಮಾವಿನ ಚಿಗುರಿನ ತೋರಣ ಶೋಭಾಯಮಾನವಾಗಿ ಕಂಡಿತು. ಕೇವಲ ಕೆಲವೇ ದಿನಗಳ ಕೆಳಗೆ ಮನೆಯ ಮಾಲೀಕರು ದಯೆತೋರಿ ಸುಣ್ಣ ಬಳಿಸಿದ್ದರಿಂದ ಮನೆಯ ಸೌಂದರ್ಯ ಇಮ್ಮಡಿಸಿತ್ತು. ಆದರೂ, ಉಸ್ಸಪ್ಪ ಎಂದು ತಲೆಮೇಲಿನ ಜರಿ ಪೇಟ ಮೇಜಿನ ಮೇಲೆ ಇಟ್ಟು ಪಕ್ಕದ ಕುರ್ಚಿಯಮೇಲೆ ಕುಳಿತರು.

"ನಾಳೆ ಹಬ್ಬದಡಿಗೆ ಸಾಮಾನೆಲ್ಲಾ ತಂದ್ರಾಂದ್ರೇ?" ಎಂಬ ಕೂಗು ಅಡಿಗೆ ಮನೆಯಿಂದಲೇ ಹಾರಿ ಬಂತು. ತಕ್ಷಣವೇ "ಹೂಂ–" ಎಂದು ಉತ್ತರ ಹೋಯಿತು. ನಸುನಗುತ್ತಾ ಕಾಫಿ ಲೋಟಾ ಹಿಡಿದು ಬಂದ ತಮ್ಮ ಅರ್ಧಾಂಗಿಯನ್ನು ಕಣ್ತುಂಬ ನೋಡಿ ಹಿಗ್ಗಿದರು. ನಿಜಸ್ಥಿತಿಗೆ ಬಂದರೆ ರಾಯರು ಮೀನಾಕ್ಷಮ್ಮನವರಿಗೆ ಮಾಲೆ ಹಾಕಿದಂದಿನಿಂದಲೇ ಅವರ ಕೈಗೆ ಮೂಗುದಾರ ಕೊಟ್ಟು ಎತ್ತ ಎಳೆದರೆ ಅತ್ತ ತಿರುಗುವ ಪ್ರಾಣಿಯಾಗಿಬಿಟ್ಟಿದ್ದರು. ಅದೇನು ಅವರು ಪ್ರಾರಬ್ಧವೋ, ಇಲ್ಲ– ಜಾತಕವೇ ಹಾಗೆಯೋ, ಇಲ್ಲ ಅವರ ಸ್ವಭಾವವೇ ಮಿದುವೋ, ಆ ಪರಾತ್ಪರ ಸ್ವರೂಪನೇ ಬಲ್ಲ. ಗಂಡಹೆಂಡಿರು ಬಹು ಅನ್ಯೋನ್ಯ, ಬಹು ಪ್ರೀತಿ! ಆದರೂ ಕೈಹಿಡಿದಾಕೆಯೆದುರಿಗೆ ಚಿಂತಾಮಣಿ ರಾಯರು ಮರಿ ನಾಯಿ. ಪ್ರಸ್ತುತ, ನಾಳಿನ ಹಬ್ಬದ ಅಡಿಗೆಯಲ್ಲಿ ತಾನು ತಂದ ತರಕಾರಿಯಲ್ಲಿ ತನ್ನ ಪ್ರಿಯ ವಸ್ತುಗಳಾದ ಈರುಳ್ಳಿ ಹುಳಿ, ಗಸಗಸೆ ಪಾಯಸಗಳನ್ನು ಮಾಡದೆ ಎಲ್ಲಿ ಅವಳ ಪ್ರೀತಿಯ ಪದಾರ್ಥವಾದ ಈರುಳ್ಳಿ ಮೊಸರು ಬಜ್ಜಿ, ಸೌತೆಕಾಯಿ ಮಜ್ಜಿಗೆ ಹುಳಿ

ಮಾಡಿಬಿಡುವಳೋ ಎಂದು ಪರಿತಪಿಸುತ್ತಿದ್ದರು. ಅರ್ಧಾಂಗಿ ನಸುನಗುತ್ತಾ ಸಂತೋಷದಲ್ಲಿರುವದು ಇದೆ ತಕ್ಕ ಸಮಯವೆಂದು ..... "..... ಲೇ ನಾಳೆ ಏನಡಿಗೆ ಮಾಡ್ತೀಯ....?" ಎಂದು ಕೇಳೇ ಬಿಟ್ಟರು.. ಆ ಚಿಕ್ಕ ಕಣ್ಣುಗಳಲ್ಲಿ ವೈಯಾರ ಬೀರಿ, "..... ಸೌತೆಕಾಯಿ ಮಜ್ಜಿಗೆ ಹುಳಿ... ಈರುಳ್ಳಿ ಮೊಸರು ಬಜ್ಜಿ ..... ಹಾಲ್ಬೀರು ..... ಚಿತ್ರಾನ್ನ ..... ಹೆಸರು ಬೇಳೆ ಕೋಸುಂಬ್ರಿ" ಎಂದು ಹೇಳಿದಳು.

ಮನೆಯಲ್ಲಿ ತಮಗೆ ಇಲ್ಲದ ಸ್ವಾತಂತ್ರ್ಯ ದೇಶಕ್ಕೆ ಬಂದರೆಷ್ಟು ಹೋದರೆಷ್ಟು? "ದೇವರೇ – ಇಂಥಾ ಸ್ವಾತಂತ್ರ್ಯ ದಿನದಲ್ಲಿ ಇಡೀ ದೇಶವೇ ಆನಂದದಿಂದ ಉಂಡು ತೇಗಿ ಮೆರೆಯುತ್ತಿದೆ.... ನನಗೆ ಈರುಳ್ಳಿ ಹುಳಿ ಇಲ್ಲವಾಯಿತೇ" ಎಂದು ರಾಯರು ಮಮ್ಮಲ ಮರುಗಿದರು. ಮುಂದಿನ ಜನ್ಮದಲ್ಲಾದರೂ ಹೆಂಡತಿಯನ್ನು ಹೆದರಿಸುವ ಶಕ್ತಿ ಕೊಡಬೇಕೆಂದು ಆಕಾಶವನ್ನು ಬೇಡಿದರು.

ಬಾಗಿಲು ತಟ್ಟಿದ ಶಬ್ಧವಾಯಿತು. ತೆಗೆದರು. ಮೀನಾಕ್ಷಮ್ಮನವರು ಹೊಸ ಧರ್ಮಾವರದ ಸೀರೆಯುಟ್ಟು ಕುಚ್ಚು ಸುಗಂಧರಾಜ ಹೂವು ಮುಡಿದು ಶೃಂಗಾರವಾಗಿ ನಿಂತಿದ್ದರು. ರಾಯರು ಚಿಂತಾಕ್ರಾಂತರಾಗಿದ್ದುದು ಆಕೆಗೆ ಅರ್ಥವಾಗಲಿಲ್ಲ.

" ಇದೇನೊಂದ್ರೆ, ನಾಳೆ ಸ್ವಾತಂತ್ರ್ಯದಿನ ... ನಗನಗತಾ ಇರೋದು ಬಿಟ್ಟು ಇದೇನೊಂದ್ರೆ?" ಎಂದು ಒದರಿದಳು. ಆದರೆ ಆತನ ಚಿಂತೆಗೆ ಕಾರಣ ಈಕೆಗೆ ಹೇಗೆ ಗೊತ್ತು.....? ಆತನಾದರೂ ಹೇಳಬಹುದು, ಆದರೆ ಧೈರ್ಯ ಯಾರ ಮನೆಯಿಂದ ಕದ್ದು ತರುವುದು? ಆತನಿಗೆ ತಡೆಯಲಾಗದೆ .... ಗದ್ಗದಸ್ವರದಿಂದ ನಾಳೆ.... ಏನಡಿಗೆ..." ಎಂದು ಮತ್ತೆ ಕೇಳಿದ. ಆಕೆಗೆ ಈತನ ದುಃಖದ ಮೂಲ ತಿಳಿಯಿತೋ, ಇಲ್ಲ ಅವಳ ಮನಸ್ಸೇ ಬದಲಾಇಸಿತೋ.... ಇಲ್ಲಾ ಆತನ ಅದೃಷ್ಟ ಅಂದಿನಿಂದ ಖುಲಾಹಿಸಿತೋ... ಇಲ್ಲಾ ಸ್ವಾತಂತ್ರ್ಯದ ಪ್ರಭಾವವೋ ಅಂತೂ "ಹೋಗಲಿ ಬಿಡಿ... ನಾಳೆ, ಈರುಳ್ಳಿ ಹುಳಿ.... ಹಪ್ಪಳ ಸಂಡಿಗೆ ಗಸಗಸೆ" ಎಂದು ಹೇಳಿದ್ದು ಅವರಿಗೆ ಸ್ಪಷ್ಟವಾಗಿ ಕೇಳಿಸಿತು.

"ಹುರ್ರ್ರೇ....ಹುರ್ರ್ರೇ...." ಎಂದು ಮನದಲ್ಲೇ ಕೂಗಿ ಮತ್ತೊಮ್ಮೆ ಕೇಳಿ.. ತಾನು ಈರುಳ್ಳಿ ಹುಳಿ ಎಂದು ಕೇಳಿದ್ದು ನಿಜವೆಂದು ಧೃಡಪಡಿಸಿಕೊಂಡರು. ನಾಳೆ ಮದುವೆ ಸೂಟು ಹಾಕಿಕೊಳ್ಳುವಂತೆ ಅಮ್ಮನವರ ಆಜ್ಞೆಯಾಯಿತು. ಈರುಳ್ಳಿ ಹುಮ್ಮಸ್ಸಿನಲ್ಲಿ ತಕ್ಷಣ ರಾಯರು ಹಾಕ್ಕೊಂಡೇ ಬಿಟ್ಟರು.

"ನೋಡೀಂದ್ರೆ.... ನಾವು ನಾಳಿನಿಂದ ಸ್ವತಂತ್ರರಾಗ್ತೀವಿ. ಅದರ ನೆನಪಿಗಾಗಿ ಒಂದು ಒಳ್ಳೆ ಫೋಟೊ ತೆಗೆಸಿಕೊಳ್ಳೋಣಾಂದ್ರೆ" ಎಂಬ ಆಜ್ಞೆ.

"ಆಗಲಿ ಮೀನೂ, ಹಾಗೇ ಆಗಲಿ – ಹೇಗೆ ತೆಗೆಸೋಣ...." ಎಂದು ಚಿಂತಾಮಣಿರಾಯರೆಂದರು.

"ಸದಾ ಈ ಸುದಿನ ಜ್ಞಾಪ್ಕ ಬರ್ತಿರ್ಬೇಕು ನೋಡಿ... ನಾನು ಕೂತ್ಕೊಂಡಿರಬೇಕು; ನೀವು ನನ್ನ ಪಕ್ಕದಲ್ಲಿ ತ್ರಿವರ್ಣ ಬಾವುಟ ಹಿಡಿದು ನಿಂತಿರಬೇಕು; ಹಾಗೆ ತೆಗೆಸೋಣ" ಎಂದಳು ಮೀನಾಕ್ಷಮ್ಮ.

ಈ ಮಾತು ಕೇಳಿ ಚಿಂತಾಮಣಿರಾಯರಿಗೆ ಬಹು ವ್ಯಥೆಯಾಯಿತು. ಸ್ವಾತಂತ್ರ್ಯ ದಿನದಲ್ಲೂ ತಾವು ಗುಲಾಮನಂತೆ ಹಿಂದೆ ನಿಂತೇ ಇರಬೇಕೆ ಎನಿಸಿತು. ದುಃಖ ಮರುಕಳಿಸಿತು. ಆದರೆ ಈಗ ಏನಾದರೂ ಮಾತಾಡಿದರೆ ಈರುಳ್ಳಿ ಹುಳಿಗೆ ಎಲ್ಲಿ ಸೊನ್ನೆ ಬಿದ್ದುಬಿಡುತ್ತೋ ಎಂಬ ಭಯ!

"ಫೋಟೊದೊಳಗೂ ನಾನು ಕೂತ್ಕೊಬಾರದೇನೇ" ಎಂದರು. ಮೀನಾಕ್ಷಮ್ಮನವರ ಮನ ಕರಗಿತು. ಇಬ್ಬರೂ ಕೈಯಲ್ಲಿ ಕೈಹಾಕಿಕೊಂಡು ಸ್ಟುಡಿಯೋಕ್ಕೆ ಹೊರಟರು. ಶ್ರೀ ರಾಮರಕ್ಷೆ – ■

# ಎಲ್ಲಿಗೆ?

**●ಗೋರೂರು ರಾಮಸ್ವಾಮಯ್ಯಂಗಾರ್**

ನಾನೂ ಭಟ್ಟನೂ "ಕೋಪೀನ ಸ್ನೇಹಿತರೇ" ಆದರೂ ಈಚೆಗೆ ನಾನು ಬರೆಯುವ ವ್ಯಾಪಾರವನ್ನು ಪ್ರಾರಂಭಿಸಿದಮೇಲೆ ಭಟ್ಟ ನನ್ನನ್ನು ನಮ್ಮೂರಿನಲ್ಲಿ ಸಹ ಗಟ್ಟಿಯಾಗಿ 'ಗೊರೂರು ರಾಮಸ್ವಾಮಯ್ಯಂಗಾರ್' ಎಂದೇ ಕರೆಯುತ್ತಾನೆ. "ಮಹಾರಾಜರ ವಂಧಿಮಾಗಧರಂತೆ ಇಷ್ಟು ಉದ್ದವಾದ ಹೆಸರಿನ ಹೊಗಳಿಗೆ ಯಾಕೆ? ಸುಮ್ಮನೆ ಹಿಂದಲಂತೆ ರಾಮ ಎಂದು ಕರೆ' ಎಂದು ಭಟ್ಟನಿಗೆ ನಾನು ಹೇಳಿದುದು ಪ್ರಯೋಜನವಾಗಲಿಲ್ಲ. ಭಟ್ಟನು "ನಿನ್ನದಾದರೂ ನೀನಲ್ಲದೆ ಬೇರೆಯವರೇ ಉಪಯೋಗಿಸುವ ನಿನ್ನ ಪದಾರ್ಥ ಯಾವುದು ಗೊತ್ತೇ? ಅದೇ ನಿನ್ನ ಹೆಸರು; ಉಪಯೋಗಿಸಿದಷ್ಟೂ ಹೆಚ್ಚು ಹೆಚ್ಚುತ್ತಲೇ ಇರುತ್ತದೆ. ಇದನ್ನು ಕುರಿತೇ ಉಪನಿಷತ್ತಿನಲ್ಲಿ 'ಪೂರ್ಣಮದಃ ಪೂರ್ಣಮಿದಂ ಪೂರ್ಣಾತ್ ಪೂರ್ಣ ಮುದುಚ್ಯತೇ. ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾವಿಶೆಷ್ಯತೆ – ಪೂರ್ಣದಿಂದ ಪೂರ್ಣವನ್ನು ಕಳೆದರೆ ಪೂರ್ಣವೇ ಉಳಿಯುತ್ತದೆ – ಎಂದಿದ್ದಾರೆ" ಎಂದ. ನಾನು 'ಹೌದು ಪೂರ್ಣಮದಃ – ನೀನು ಪೂರ್ಣ ಮತ್ತನಾಗಿರುವುದು ನಿಜ' ಎಂದೆ.

ಭಟ್ಟನು ಹೀಗೆ ಎಲ್ಲೆಲ್ಲಿಯೂ ನನ್ನನ್ನು ನನ್ನ ಪೂರ್ಣ ಹೆಸರಿನಿಂದ ಗಟ್ಟಿಯಾಗಿ ಕೂಗುವುದರಿಂದ ಒಂದೊಂದು ಪ್ರಯೋಜನವೂ ಆಗಿದೆ. ಬಸ್ಸಿನಲ್ಲಿ ಭರ್ತಿಯಾಗಿದ್ದರೂ ಭಟ್ಟ ನನ್ನ ಹೆಸರನ್ನು ಗಟ್ಟಿಯಾಗಿ ಕರೆದಾಗ ಒಂದೊಂದು ಸಲ ಜಾಗ ಸಿಕ್ಕಿರುವುದುಂಟು. ರೈಲು ಗಾಡಿಯಲ್ಲಿ ಭಟ್ಟ ನನ್ನ ಹೆಸರನ್ನು ಉಚ್ಚರಿಸಿದಾಗ, ಗ್ರಂಥಕರ್ತೃರ ಬಡತನದ – ಭಂಡತನದ ಅನುಭವವುಳ್ಳ ಅಚ್ಚಿನಮನೆಯ ಮಾಲೀಕರ ಹೊರತು ಉಳಿದ ಕೆಲವರು ಗೌರವದಿಂದ ನನ್ನ ಕಡೆ ನೋಡಿದುದುಂಟು. ಭಟ್ಟ ಮಾತ್ರ 'ನಿಮಗೇನು ಸ್ವಾಮಿ. ನಿಮ್ಮ ಹೆಸರೇ ಮಂತ್ರ. ನಿಮ್ಮ ಹೆಸರನ್ನು ಉಚ್ಚರಿಸಿದ ಕೂಡಲೇ ಹಾಕಿದ ಬಾಗಿಲು ತೆರೆಯುತ್ತದೆ. ಬಿದ್ದ ಘರದೆ ಏಳುತ್ತದೆ. ಹೊಡೆಯುವುದಕ್ಕೆ ಎದ್ದ ಕೈ ಸಲಾಮು ಮಾಡುತ್ತದೆ" ಎನ್ನತ್ತಾನೆ. ನನಗೂ ಒಂದೊಂದು ಸಲ ಭಟ್ಟನ ಮಾತು ನಿಜವಿದ್ದರೂ ಇರಬಹುದೇನೋ ಎನ್ನಿಸುತ್ತದೆ. ಆಗ ನನ್ನ ತಲೆಯಮೇಲಿನ ಜವಾಬ್ದಾರಿಯಿಂದ ನನಗೆ ಭಯವಾಗಿ ನಾನು ಎಚ್ಚರಿಕೆಯಿಂದ ನಡೆದುಕೊಳ್ಳುತ್ತೇನೆ.

ಆ ದಿವಸ ನಾನು ಹಾಸನ ಸೇಶನ್ನಿನಿಂದ ಮೈಸೂರಿಗೆ ಹೊರಟಾಗ ಭಟ್ಟನೂ ರೈಲ್ವೆ ಸ್ಟೇಶನ್ನಿಗೆ ನನ್ನನ್ನು ಕಳುಹಿಸಲು ಬಂದಿದ್ದ. ನನ್ನ ಜತೆಯಲ್ಲಿರುವಾಗ ಭಟ್ಟ, ಸಾಧಾರಣವಾಗಿ ಗಟ್ಟಿಯಾಗಿಯೇ ಕೂಗಿ ಮಾತನಾಡುತ್ತಿರುತ್ತಾನೆ. ಜನರ ದೃಷ್ಟಿ ನಮ್ಮ ಕಡೆಗೆ ಬೀಳಲಿ ಎಂದಿರಬಹುದು. ಹಾಸನದ ಸ್ಟೇಶನ್ನಿನಲ್ಲಿ ಟಿಕೆಟ್ ತೆಗೆದುಕೊಳ್ಳಲು ಕ್ಯೂನಲ್ಲಿ ಬಹಳ ಜನ ನಿಂತಿದ್ದರು. ನಾನೂ ಗುಂಪಿನ ಹಿಂದೆ ಅರವತ್ತನೆಯವನೋ ಎಪ್ಪತ್ತನೆಯವನೋ ಆಗಿ ನಿಂತಿದ್ದೆ. ಜನ ನಿಧಾನವಾಗಿ ಮುಂದೆ ಸರಿಯುತ್ತಿದ್ದರು.

ನಿಂತು ನಿಂತು ನನಗೆ ಬೇಸರಿಕೆ ಆಯಿತು. ನಾನು ಭಟ್ಟನಿಗೆ "ಇನ್ನೂ ಒಂದು ಗಂಟೇ ಬೇಕು. ಟಿಕೆಟ್ ಸಿಕ್ಕಲು" ಎಂದೆ. ಭಟ್ಟನು "ನಿಮಗ್ಯಾಕೆ ಸ್ವಾಮಿ ಈ ಕ್ಯೂನಲ್ಲಿ ಫಜೀತಿ? ನಿಮ್ಮ ಹೆಸರು ಹೇಳಿದರೆ ಆ ಕಡೆಯಿಂದಲೇ ಹೋಗಿ ತೆಗೆದುಕೊಳ್ಳಬಹುದು" ಎಂದ. ನಾನು "ಆ ಕಡೆ ಪ್ರವೇಶವಿಲ್ಲ ಎಂದು ಬರೆದಿದೆ" ಎಂದೆ. ಭಟ್ಟನು 'ಅದೆಲ್ಲಾ ನಮಗೆ" ಎಂದು ನಕ್ಕ.

ಆ ಘಳಿಗೆಯಲ್ಲಿ ನನಗೆ "ಇದ್ದರೂ ಇರಬಹುದು ನನ್ನ ಹೆಸರಿಗೆ ಸ್ವಲ್ಪ ಮಹಿಮೆ" ಎನ್ನಿಸಿತು. ನಮ್ಮ ದೇಹದಲ್ಲಿ ಕಲಿ ಪ್ರವೇಶಿಸಬೇಕಾದರೆ ನಾವು ಅಶುದ್ಧರಾಗಿರುವ ಕಾಲದಲ್ಲಿ ಪ್ರವೇಶಿಸುತ್ತಾನಂತೆ. ಅಹಂಕಾರವೇ ಅಶುದ್ಧಿ. ಈ ಗಳಿಗೆಯಲ್ಲಿ ಕಲಿ ನನ್ನಲ್ಲಿ ಪ್ರವೇಶಿಸಿತು.

ನನ್ನ ಹಿಂದೆ ನಿಂತಿದ್ದ ಪ್ರಯಾಣಿಕರೊಬ್ಬರು "ಸ್ವಾಮಿ ನೀವು ಎಲ್ಲಿಗೆ?" ಎಂದರು. ಯಾರಾದರೂ ನೀವು ಎಲ್ಲಿಗೆ ಎಂದು ಕೇಳಿದರೆ ಅಪಶಕುನವೆಂದು ನಮ್ಮ ಪೂರ್ವೀಕರು ಹೇಳುತ್ತಿದ್ದರು. ನಮ್ಮ ಊರು ಸಾಹುಕಾರರು 'ಎಲ್ಲಿಗೆ' ಎಂದು ಯಾರಾದರೂ ಕೇಳಿದರೆ ಹೇಳುತ್ತಿರಲಿಲ್ಲ. ಹಾಸನದ ಕಡೆ ಹೊರಟಿದ್ದರೆ 'ನರಸೀಪುರಕ್ಕೆ' ಎನ್ನುತ್ತಿದ್ದರು. "ಯಾವ ಹುತ್ತದಲ್ಲಿ ಯಾವ ಹಾವು ಇದೆಯೋ, ನಮ್ಮ ಎಚ್ಚರಿಕೆ ನಮ್ಮ ಕೈಯಲ್ಲಿರಬೇಕು' ಎನ್ನುತ್ತಿದ್ದರು. ಆದರೆ ಆಧುನಿಕರಾದ ನಾವು ಇರುವುದನ್ನು ಇರುವಂತೆ ಹೇಳಿಬಿಡುತ್ತೇವೆ. ಯಾರಾದರೂ 'ನೀವು ಎಲ್ಲಿಗೆ ಹೊರಟಿರಿ' ಎಂದ ಕೂಡಲೆ ಪೆಚ್ಚರಾಗಿ ಸತ್ಯ ಹೇಳಿಬಿಡಬೇಡಿ. 'ಸತ್ಯಕ್ಕೆ ಬೆತ್ತಲೆ' ಎಂಬ ಗಾದೆ ನಿಮಗೆ ಜ್ಞಾಪಕವಿರಲಿ. ಅವಧರಿಸಿ.

ನನ್ನ ಹಿಂದೆ ನಿಂತಿದ್ದವರು ಮತ್ತೆ "ಸ್ವಾಮಿ? ನೀವು ಎಲ್ಲಿಗೆ?" ಎಂದರು. "ಮೈಸೂರಿಗೆ" ಎಂದೆ. ಕೂಡಲೇ ಅವರ ಮುಖದಲ್ಲಿ ನಗವೂ ನನ್ನನ್ನು ಕುರಿತ ಪ್ರಸನ್ನ ಮುಖಭಾವವೂ ಉಂಟಾಯಿತು. ನಾನು ಏನೊಂದನ್ನೂ ಯೋಚಿಸುವುದಕ್ಕೆ ಮುಂಚೆಯೇ ಅವರು ನನ್ನ ಎರಡು ಬೆರಳುಗಳ ಸಂದಿನಲ್ಲಿ ನಾನು ಹಿಡಿದಿದ್ದ ಐದು ರೂಪಾಯ ನೋಟನ್ನು ಸರಕ್ಕನೆ ತೆಗೆದುಕೊಂಡು ಬಿಟ್ಟರು. "ಟಿಕೇಟ್ ತರುತ್ತೇನೆ. ನನಗೂ ಮೈಸೂರಿಗೆ" ಎಂದರು. ಭಟ್ಟ ನನಗೆ "ಬನ್ನಿ ಸ್ವಾಮಿ ದೀಪ ಎಲ್ಲಿದ್ದರೂ ಪ್ರಕಾಶವೆ' ಎಂದು ಹೇಳಿ ಅಲ್ಲೇ ಇದ್ದ ಬೆಂಚಿನ ಮೇಲೆ ನನ್ನ ಮಗ್ಗುಲಲ್ಲಿ ಕುಳಿತನು.

ಕ್ಯೂ ಕ್ರಮವನ್ನು ಕಂಡುಹಿಡಿದ ಮಹರಾಯ ಬಲು ಬುದ್ಧಿವಂತ. ಇಲ್ಲದಿದ್ದರೆ ನುಗ್ಗಾಟ ತಿಕ್ಕಾಟದಲ್ಲಿ ಜನಕ್ಕೆ ನಿತ್ಯಾ ಎಷ್ಟು 'ಜಖಂ' ಆಗುತ್ತಿತ್ತೋ! ಆದರೆ ಈ ಕ್ಯೂವನ್ನು ಕಂಡುಹಿಡಿದವನು, ಒಳಗಿರುವವನು ಸರಸರನೆ ಟಿಕೆಟ್ ಕೊಡಬೇಕು ಎಂಬುದನ್ನು ಮಾತ್ರ ಹೇಳಲಿಲ್ಲ. ಒಂದು ಪಕ್ಷದವರ – ಅಂದರೆ ಜನರ ನಡತೆಯಲ್ಲಿ ಆಗಬೇಕಾದ ಬದಲಾವಣೆಯನ್ನು ಹೇಳಿದನೇ ಹೊರತು ಮತ್ತೊಂದು ಪಕ್ಷದವರ ಅಂದರೆ ಟಿಕೆಟ್ ಕೊಡುವವರ ಪಕ್ಷದಲ್ಲಿ ಆಗಬೇಕಾದ ಬದಲಾವಣೆ ಹೇಳಲಿಲ್ಲ. ಅಂತು ಅರ್ಧಗಂಟೆಯ ಹೊತ್ತಿನಲ್ಲಿ ನನ್ನ ರೂಪಾಯಿಗಳನ್ನೂ ತೆಗೆದುಕೊಂಡು, ಟಿಕೆಟ್ಟಿಗಾಗಿ ಹೋಗಿದ್ದವರು ಬಂದರು. ಟಿಕೆಟ್ಟನ್ನೂ ಚಿಲ್ಲರೆಯನ್ನೂ ಜೋಬಿಗೆ ಹಾಕಿಕೊಂಡು "ಬಂದೆ" ಎಂದು ಹೇಳಿ ಹೊರಟುಹೋದರು. ನಾನು "ನನ್ನ ಟಿಕೆಟ್ ಚಿಲ್ಲರೆ ನನ್ನ ಕೈಲಿ ಕೊಟ್ಟು ಹೋಗಬಹುದಾಗಿತ್ತು" ಎಂದೆ. ಭಟ್ಟನು 'ನಿಮಗೆ ಯಾಕೆ ಯೋಚನೆ? ಕುಡಿದ ನೀರು ಅಲ್ಲಾಡದಂತೆ ನಿಮ್ಮನ್ನು ಮೈಸೂರಿಗೆ ಕರೆದು ಹೋಗಿ ಬಿಡುತ್ತಾನೆ.' ಎಂದ.

ಇನ್ನೇನು ರೈಲು ಬರುವ ಹೊತ್ತಾಯಿತು. ನನ್ನ ಟಿಕೆಟ್ ತೆಗೆದುಕೊಂಡಿದ್ದವರು ಲಗ್ಗೇಜ್ ತಕ್ಕಡಿಯ ಮೇಲೆ ಎರಡು ಗಂಟುಗಳನ್ನಿಟ್ಟು ತೂಕಮಾಡಿಸುತ್ತಿದ್ದರು. ತೂಕವಾದ ನಂತರ ರೈಲ್ವೆ ಆಳು ಗಂಟುಗಳನ್ನು ತಕ್ಕಡಿಯಿಂದ ಕೆಳಕ್ಕೆ ತಳ್ಳಿದ. ಭಟ್ಟ 'ಹಾಗಾದಮೇಲೆ ಹೋಗಿ ಬನ್ನಿ' ಎಂದು ಹೇಳಿ ಎದ್ದ. ನನ್ನ ಟಿಕೆಟ್ ನನ್ನ ಸ್ನೇಹಿತರ ಕೈಯಲ್ಲಿಯೇ ಇತ್ತು. ಬಾಗಿಲಿನಲ್ಲಿ ಟಿಕೆಟ್ ಪರೀಕ್ಷಿಸುತ್ತಾ ನಿಂತಿದ್ದ ಗುಮಾಸ್ತರು "ಆ ಎರಡು ಗಂಟು ಯಾರವು?" ಎಂದರು ನನ್ನ ಸ್ನೇಹಿತರು ತಮ್ಮ ಜೇಬಿನಿಂದ ಎರಡು ಮೈಸೂರು ಟಿಕೆಟ್‌ಗಳನ್ನೂ ಅವೆರಡಕ್ಕೂ ಸಂಬಂಧಿಸಿದಂತಿದ್ದ ಎರಡು ಪಾಸ್‌ಗಳನ್ನು ತೋರಿಸಿದರು. ಟಿಕೆಟ್ ಕಲೆಕ್ಟರು 'ಆ ಟಿಕೀಟು ಯಾರದು?" ಎಂದು ಕೇಳಿದ. ನನ್ನ ಮಿತ್ರರು "ಇವರೇ, ನಮ್ಮವರೇ' ಎಂದರು. ಹಾಗಾದರೆ ಅವರ ಟಿಕೆಟ್ ಅವರ ಕೈಯಲ್ಲಿ ಕೊಡಿ" ಎಂದ. ಅನಂತರ ತಪ್ಪಿತಸ್ಥ ಸಿಕ್ಕಿದಾಗ ರೈಲ್ವೆಯವರೂ ಪೋಲೀಸಿನವರೂ ಅವಲಂಬಿಸುವ ದುರಾಸೆಯ ಮುಖಭಾವದಿಂದ "ಅವರ ಟಿಕೇಟಿನಲ್ಲಿ ನಿಮ್ಮ ಲಗೇಜನ್ನು ಸಾಗಿಸುತ್ತೀರೋ? ಅಂದ. ನನಗೆ "ಒಳ್ಳೆಯ ಪೀಕಲಾಟಕ್ಕೆ ಬಂತಲ್ಲ" ಎಂಬ ಭಯವಾಯಿತು. ಏನು ಜವಾಬ್ ಕೊಡಲಿ ಎಂದು ನಾನು ಯೋಚಿಸುತ್ತಿರುವಾಗ ನಮ್ಮ ಸ್ನೇಹಿತರು "ಇಲ್ಲ ಸಾರ್, ಸಾಮಾನೂ ಅವರದೇ" ಎಂದರು. ಟಿಕೆಟ್ ಕಲೆಕ್ಟರರು "ಹಾಗಾದರೆ ಅವರ ಸಾಮಾನು ಅವರು ತೆಗೆದುಕೊಂಡು ಹೋಗಲಿ. ಅವರ ಕೈಲಿ ಕೊಡಿ" ಎಂದ. ನನಗೆ ನನ್ನ 'ಸ್ನೇಹಿತ'ರ ಮೇಲೆ ಅಸಾಧ್ಯ ಕೋಪವುಂಟಾಯಿತು. ಅವರು ಮಾತ್ರ ಸ್ವಲ್ಪ ವಿನಯದ ಮುಖಭಾವವನ್ನು ಮಾಡಿಕೊಂಡು "ಸಾರ್ ಒಂದು ಗಳಿಗೆ ತೆಗೆದುಕೊಳ್ಳಿ" ಎಂದರು. ಒಂದು ಗಂಟನ್ನು ನನ್ನ ಹೆಗಲಿನಮೇಲೆ ಹೊರಿಸಿಯೇ ಬಿಟ್ಟರು. ಟಿಕೆಟ್ ಕಲೆಕ್ಟರರಿಗೂ ಸ್ವಲ್ಪ "ಕಾಫಿ ಖರ್ಚು" ದೊರೆತಿದ್ದಿರಬೇಕು.

ನಾನು ಸಾಧಾರಣವಾಗಿ ಪ್ರಯಾಣ ಕಾಲದಲ್ಲಿ ಯಾವ ಗಂಟನ್ನು ಹೆಚ್ಚಾಗಿ ತೆಗೆದುಕೊಂಡು ಹೋಗುವುದಿಲ್ಲ. "ಹಗುರವಾಗಿ ಪ್ರಯಾಣ ಮಾಡುವುದು" ನನ್ನ ಸ್ವಭಾವ. ಒಂದು ಕೈಚೀಲದಲ್ಲಿ ಒಂದು ಪಂಚೆ, ದುಪ್ಪಟಿ. ಇವೇ 'ನನ್ನ ಮಸ್ಟ್ ಕಿಟ್' ಯಾಕೆಂದರೆ ಹೋಲ್ಡ್‌ಆಲ್‌ನಲ್ಲಿ ಒಂದು ಗಾಡಿ ಹಿಡಿಯುವಷ್ಟು ಸಾಮಾನನ್ನು ಹಾಕಿಕೊಂಡು ಊರಿನಿಂದ ಊರಿಗೆ ಹೊರಟರೆ ರೈಲು ಚಾರ್ಜಿಗಿಂತ ಜಟಕಾ ಕೂಲಿಗಳ ಬಾಡಿಗೆ ಅಧಿಕವಾಗುತ್ತದೆ. ಆಂಜನೇಯ ಬೆಟ್ಟವನ್ನು ಹೊತ್ತಂತೆ, ತಮಗಿಂತ ನಾಲ್ಕರಷ್ಟು ಭಾರವಾದ ಹಾಸಿಗೆ ಹೊತ್ತುಕೊಂಡು ಏದುತ್ತಾ ರೈಲು ಕಿಟಕಿಯಲ್ಲಿ ಆ ಹಾಸಿಗೆ ತೂರಿಸುವವರನ್ನು ನೋಡಿ ನನಗೆ ಕನಿಕರ ಉಂಟಾಗಿದೆ. ಒಂದೇ ಕೈನಲ್ಲಿ ಹಗುರವಾಗಿ ನನ್ನ ಗಂಟನ್ನು ಹಿಡಿದುಕೊಂಡು ಸಿಪಾಯಿಯ ಹಾಗೆ ಸರ್ರಗೆ – ರೈಲಿಗೆ–ರೈಲಿನಿಂದ ಇಳಿದು–ಹೋಗುವುದು ನನ್ನ ಪದ್ಧತಿ. ಭಾರದ ಭಯಕ್ಕೆ ಒಂದು ಟವಲನ್ನು ಸಹ ಹೆಚ್ಚಾಗಿ ತೆಗೆದುಕೊಳ್ಳದ ನಾನು ಏದುಸಿರು ಬಿಡುತ್ತಾ ನನ್ನ ಮಿತ್ರರ ಗಂಟನ್ನು ಹೊತ್ತುಕೊಂಡೆ, ಹಿಂದಿರುಗಿ ನೋಡಿದಾಗ ಭಟ್ಟ ಇನ್ನು ಅಲ್ಲಿಯೇ ನಿಂತಿದ್ದ. ನನ್ನ ಮಹಿಮೆಯನ್ನು ಕೊಂಡಾಡುವ ಅವನಿಗೆ ಸಹ 'ಅಷ್ಟಲ್ಲದೆ ಇವರಿಗೆ ಅವರು ಸುಮ್ಮನೆ ಟಿಕೆಟ್ ತಂದುಕೊಡುತ್ತಾರೆಯೇ' ಎಂದು ತೋರಿರಬೇಕು. ನನಗೆ ಅವನ ಮುಖದಲ್ಲಿ ಕನಿಕರಕ್ಕಿಂತ ಚೇಷ್ಟೆಯೇ ಹೆಚ್ಚಾಗಿ ತೋರಿತು.

ನನ್ನ ಸ್ನೇಹಿತರು ಗಾಡಿಯೊಳಕ್ಕೆ ಹೋಗಿ ಮೊದಲು ತಮ್ಮ ಗಂಟನ್ನು ಮೇಲೆ ಇಟ್ಟು, ಕಿಟಕಿಯಿಂದ ನನ್ನದನ್ನು ತೆಗೆದುಕೊಂಡ ನನ್ನ ತಲೆಯ ಮೇಲಿದ್ದ ಆ

ಉದ್ದವಾದ ಗಂಟನ್ನು ಕಿಟಕಿ ಮೂಲಕ ಎಳೆದುಕೊಳ್ಳುವಾಗ ಕಿಟಕಿಯ ಬಳಿ ಕುಳಿತಿದ್ದವರೊಬ್ಬರಿಗೆ ಅದು ತಗಲಿತು. ಅವರು ನನ್ನನ್ನೇ ನುಂಗುವಂತೆ ನೋಡುತ್ತಾ "ಗುಡ್ಸ್ ಗಾಡಿಗೆ ಯಾಕೆ ಹಾಕಬಾರದು? ಎಲ್ಲಿ ನೋಡಿದರೂ ಈ 'ಬ್ಲಾಕ್ ಮಾರ್ಕೆಟ್' ನವರ ಕಾಟ" ಎಂದರು ನನಗೆ ಮತ್ತೆ ನನ್ನ 'ಮಿತ್ರರ' ಮೇಲೆಯೇ ಕೋಪ ಉಂಟಾಯಿತು. ಆದರೆ ಅವರು ಪ್ರಸನ್ನರಾಗಿ ನನ್ನ ಚಿಲ್ಲರೆ ನನಗೆ ಕೊಟ್ಟು 'ನೋಡಿ ಸರ್ ನಿಮ್ಮ ಟಿಕೆಟ್‌ನಲ್ಲಿ ಮಾಡಿಸಿದ್ದರಿಂದ ನನಗೆ ಹದಿಮೂರಾಣೆ ಉಳಿಯಿತು, ಲಗೇಜ್ ಚಾರ್ಜು ಬಹಳ ದುಬಾರಿ ಸರ್. ಏನೋ ನೀವು ಪರಿಚಿತರಲ್ಲದಿದ್ದರೂ ದಯವಿಟ್ಟುದರಿಂದ ಸರಿಯಾಯ್ತು. ಇಲ್ಲದಿದ್ದರೆ ಇನ್ನೂ ಒಂದು ರೂಪಾಯಿ ಲಗೇಜ್ ಕಕ್ಕ ಬೇಕಾಗಿತ್ತು. ಸರಿಯಾಗಿ ವಿಶಾಲವಾಗಿ ಕೂತ್ಕೊಳ್ಳಿ ಸರ್' ಅಂದರು. "ಇನ್ನು ಮೈಸೂರಿಗೆ ಹೋಗುವವರೆಗೆ ಇವರ ಹತ್ತಿರ ಮಾತು ಬೇಡ" ಎಂದು ನಾನು ಕಣ್ಣುಮುಚ್ಚಿಕೊಂಡು ಕುಳಿತೆ. ಪ್ರಯಾಣಿಕರಲ್ಲಿ ಒಬ್ಬಿಬ್ಬರು "ಆ ಗಂಟಿನಲ್ಲಿರುವುದೇನು?" ಎಂದರು. ನಾನು ಪ್ರತ್ಯುತ್ತರ ಕೊಡದೆ ಸುಮ್ಮನೆಯೇ ಕುಳಿತಿದ್ದೆ.

ರಾತ್ರಿ ಎಂಟುವರೆ ಗಂಟೆಗೆ ರೈಲು ಕೃಷ್ಣರಾಜನಗರ ಸ್ಟೇಷನ್ನಿಗೆ ಬಂದಿತು. ಮೈಸೂರು ಗಡಿಗೆ ಬಂದ ಕೂಡಲೇ 'ಬ್ಲಾಕ್ ಮಾರ್ಕೆಟ್'ನವರ ಎದೆ ನಡುಗುತ್ತೆ ಎಂದು ಜನ ಹೇಳುತ್ತಾರೆ. ಕೃಷ್ಣರಾಜನಗರದಲ್ಲಿ ನಮ್ಮ ಗಾಡಿಯೊಳಕ್ಕೆ ಒಬ್ಬ ಪೋಲೀಸಿನವನು ಬಂದ. ಮೇಲೆ ಇದ್ದ ಗಂಟುಗಳನ್ನೆಲ್ಲಾ ನೋಡಿದ. ನಮ್ಮ ಸ್ನೇಹಿತರು ಇಟ್ಟಿದ್ದ ಗಂಟನ್ನು ನೋಡಿ 'ಇದು ಯಾರದು?' ಎಂದ. ಅವರು 'ನನ್ನದು' ಎಂದರು. ಅನಂತರ ನಮ್ಮ ಸ್ನೇಹಿತರು ಇಡಿಸಿದ್ದ ನನ್ನ ಗಂಟನ್ನು ನೋಡಿ 'ಇದು ಯಾರದು?' ಎಂದ. ನಾನು ಕಣ್ಣುಮುಚ್ಚಿಕೊಂಡು ಸುಮ್ಮನೆಯೇ ಕುಳಿತಿದ್ದೆ. ನಮ್ಮ ಸ್ನೇಹಿತರು ಒಂದೆರಡು ಸಲ ನನ್ನನ್ನು ತಿವಿದರು. ನಾನು 'ಗಂಟು ನನ್ನದು' ಎಂದೆ. ಆತ 'ಅದರಲ್ಲಿರುವುದೇನು? ಎಂದ. ನನಗೆ ಕೋಪ ಬಂತು. "ಗಂಟು ನನ್ನದಲ್ಲ; ಬೇಕಾದ್ದು ಮಾಡಿಕೊಳ್ಳಿ' ಎಂದು ಹೇಳಿಬಿಡಬೇಕೆಂದು ಹೊರಟೆ. ಈ 'ಕಿರುಕುಳವೆಲ್ಲಾ ನನಗೆ ಯಾಕೆ? ಅವರ ಪಾಡು' ಎಂದು ನಾನು ಬಾಯಿ ತೆಗೆಯುವುದರಲ್ಲಿ ನನ್ನ ಸ್ನೇಹಿತರು 'ಏನೂ ಇಲ್ಲ ಸಾರ್ ಸಂಸಾರದ ಉಪಯೋಗಕ್ಕೆ ಬಟ್ಟೆ" ಎಂದರು. ಪೋಲೀಸಿನವನು ಅವರ ಕಡೆ ದುರದುರನೆ ನೋಡುತ್ತಾ 'ನಿಮಗೇನು ಸುಮ್ಮನಿರಿ. ಅವರು ಹೇಳುತ್ತಾರೆ" ಎಂದ. ಅನಂತರ ಸ್ವಲ್ಪ ಜೋರಾಗಿಯೇ ನನ್ನನ್ನು 'ಅದರಲ್ಲಿರುವುದೇನು?' ಎಂದು ಗದರಿಸಿದ. ನಾನು ಜವಾಬುಕೊಡುವುದಕ್ಕೆ ಮುಂಚಿತವಾಗಿ "ನೀವು ಇಳೀರಿ. ನನಗೆ ಅನುಮಾನವಾಗಿದೆ. ಪೋಲೀಸ್ ಸ್ಟೇಷನ್ನಿಗೆ ಹೋಗಬೇಕು' ಎಂದ. ಗಂಟು ನನ್ನದಲ್ಲ ಎಂಬುದರ ಹೊರತು ಉಳಿದ ಅನೇಕ ವಾದಗಳನ್ನು ಮಾಡಿದೆ. ಏನು ಪ್ರಯೋಜನವಾಗಲಿಲ್ಲ. ಪೋಲೀಸಿನವನು ನನ್ನ ಟಿಕೆಟ್ಟನ್ನೂ ಗಂಟನ್ನೂ ತೆಗೆದುಕೊಂಡ. ನನ್ನ ಸ್ನೇಹಿತರು 'ಬಟ್ಟೆ ಸ್ವಂತ ಉಪಯೋಗಕ್ಕೆ' ಎಂದು ಹೇಳಿ ಸಾರ್. ಬೆಳಗಿನ ರೈಲಿನಲ್ಲಿ ಬಂದು ಬಿಡಿ. ನಿಮ್ಮನ್ನೇ ಕಾಯ್ದುಕೊಂಡು ನಂಜರಾಜ ಬಹದ್ದೂರ್ ಛತ್ರದಲ್ಲಿರುತ್ತೇನೆ" ಎಂದ. ನನಗೆ ಅವನನ್ನು ಕೊಲ್ಲುವಷ್ಟು ಕೋಪ ಬಂದಿದ್ದುದರಿಂದ ನಾನು ಏನು ಮಾತನಾಡಲಿಲ್ಲ. ರೈಲು ಹೊರಟೇ ಹೋಯಿತು.

ಆ ರಾತ್ರಿ ನಾನು ಪೋಲಿಸ್ ಸ್ಟೇಷನ್ನಿನಲ್ಲಿ ಸೊಳ್ಳೆಗಳ ಕೈಯಲ್ಲಿ ಮೈ ಅಗಿಸಿಕೊಂಡೆ. ಪೋಲಿಸ್ ಇನಿಸ್ಪೆಕ್ಟರು ಮರುದಿನ ಬೆಳಿಗ್ಗೆ ಖೂನಿ ಮೊಕದ್ದಮೆಯ ತನಿಕೆಗೆ ಬೇರೆ ಊರಿಗೆ ಹೋದುದರಿಂದ ರಾತ್ರಿಯವರೆಗೆ ಬರಲಿಲ್ಲ. ಉಳಿದ ಪೋಲೀಸಿನವರು

ನನ್ನ ವಂಶ ಕುಲ ಗೋತ್ರ ಪೂರ್ವಾಪರಗಳನ್ನೆಲ್ಲಾ ಕೇಳಿ ತಿಳಿದುಕೊಂಡರು. ಬಟ್ಟೆಯ ಗಂಟನ್ನು ಬಿಚ್ಚಿದಾಗ ಅದರಲ್ಲಿ ಬ್ಲಾಕ್‌ಮಾರ್ಕೆಟ್ಟಿನ ಪದಾರ್ಥಗಳಾವುವೂ ಇರಲಿಲ್ಲ. ಆ ರಾತ್ರಿ ಪೋಲೀಸ್ ಇನ್‌ಸ್ಪೆಕ್ಟರು ಬಂದರು. ನನಗೆ ಒಂದು ದಿನದಿಂದ ಆದ ಕಷ್ಟಕ್ಕೆ ಮರುಗಿದರು. ನನ್ನನ್ನು ಯಾಕೆ ರೈಲಿನಿಂದ ಇಳಿಸಿದರು ಎಂಬುದು ಅವರಿಗೂ ಗೊತ್ತಾಗಲಿಲ್ಲ. ಪೋಲೀಸ್ ಕಾನ್‌ಸ್ಟೇಬಲ್ 'ಇವರ ನಡತೆ ಸಂಶಯಾಸ್ಪದವಾಗಿತ್ತು" ಎಂದ. ಹಾಸನ ಸ್ಟೇಷನ್‌ನಲ್ಲಿ ನಾನು ಗಂಟು ನನ್ನದಲ್ಲ ಎಂದು ಹೇಳದಿದ್ದುದರಿಂದ ಹಿಡಿದು ನನ್ನ ನಡತೆ ಸಂಶಯಾತ್ಮಕ ಎಂಬುದು ನನಗೇ ತೋರಿತು. ಯಾವದೋ ರೂಪದಲ್ಲಿ ಮಾಡಿದ ತಪ್ಪಿಗೆ ಯಾವ ರೂಪದಲ್ಲಿಯೋ ಶಿಕ್ಷೆಯಂತೂ ಆಗುತ್ತೆ ಎಂದುಕೊಂಡೆ.

ಮರುದಿನ ರಾತ್ರಿ ರೈಲು ಹತ್ತಿ ಮೈಸೂರು ಕಡೆಗೆ, ಗಂಟಿನೊಂದಿಗೆ ಹೋಗುತ್ತಿರುವಾಗ ಸಾಗರಕಟ್ಟೆ ಸೇತುವೆಯ ಕೆಳಕ್ಕೆ ಆ ಗಂಟನ್ನು ಎಸೆದುಬಿಬೇಕೆಂಬ ಆಸೆಯನ್ನು ಅದುಮುವುದು ಬಹಳ ಕಷ್ಟವಾಯಿತು. ಗಾಡಿಯಲ್ಲಿ ನಾನು ಒಬ್ಬನೇ ಇದ್ದಿದ್ದರೆ ಹಾಗೆಯೇ ಮಾಡುತ್ತಿದ್ದೆ. ಇತರ ಪ್ರಯಾಣಿಕರ ಭಯದಿಂದ ನನ್ನ ಆಸೆಯನ್ನು ಇಂಗಿಸಿಕೊಂಡೆ. ಮೈಸೂರು ಸ್ಟೇಷನ್ ನಲ್ಲಿ ಇಳಿದ ನಂತರ, ಭಾರದ ಭಯಕ್ಕೆ ಒಂದು ಪಂಚೆಯನ್ನು ಸಹ ಪ್ರಯಾಣಕಾಲದಲ್ಲಿ ಹೆಚ್ಚಾಗಿ ತೆಗೆದುಕೊಳ್ಳದ ನಾನು ಒಂದು ಜಟಕಾದಲ್ಲಿ ನಂಜರಾಜ ಬಹದ್ದೂರ್ ಛತ್ರಕ್ಕೆ ಹೋದೆ. ಅಲ್ಲಿ ನನ್ನ 'ಸ್ನೇಹಿತರು' ನನ್ನನ್ನೇ ಕಾಯುತ್ತಾ ಕುಳಿತಿದ್ದರು. ನನ್ನನ್ನು ನೋಡಿದ ಕೂಡಲೆ "ಏನು ಸಾರ್, ಬೆಳಗಿನ ಬಸ್‌ನಲ್ಲಿ ಹುಣಸೂರಿಗೆ ಹೋಗಬೇಕಾಗಿತ್ತು. ನೀವು ಬರಲಿಲ್ಲ. ಒಂದು ದಿನ ಅನ್ಯಾಯವಾಗಿ ನಿಂತುಬಿಟ್ಟೆ." ಎಂದರು. ಆಗ ಏನಾದರೂ ಸಾಗರ ಕಟ್ಟೆ ಎದುರಾಗಿ ಸಿಕ್ಕದ್ದರೆ ನಾನು ಖಂಡಿತವಾಗಿ ಗಂಟನ್ನು ಅದರೊಳಕ್ಕೆ ಎಸೆದು ಬಿಡುತ್ತಿದ್ದೆ. ನಾನು ಆ 'ಸ್ನೇಹಿತ'ರೊಂದಿಗೆ ಮಾತನಾಡಲಿಲ್ಲ. ಮಾತನ್ನು ಪ್ರಾರಂಭಿಸಿದರೆ ಮಾತು ಹಿಡಿತದಲ್ಲಿರುವುದಿಲ್ಲವೆಂದು ನನಗೆ ಗೊತ್ತು. ಈ ಪಿಶಾಚಿ ತನಗೆ ಒಂದು ದಿನ ಸಾವಕಾಶವಾದುದನ್ನು ಯೋಚಿಸುತ್ತಿದ್ದಾನೆಯೇ ಹೊರತು ನನಗೂ ಒಂದು ದಿನ ಸಾವಕಾಶವಾಗಿ ನನ್ನ ಕೆಲಸಗಳೆಲ್ಲಾ ಕೆಟ್ಟದ್ದು ಇವನ ಗಮನಕ್ಕೆ ಬರಲಿಲ್ಲವಲ್ಲಾ ಎಂದುಕೊಂಡೆ. ನಾನು ಗಂಟನ್ನು ಅವನ ಮುಂದೆ ಎಸೆದು ಹೊರಟಕೂಡಲೇ ಆತ 'ಮುಂದೆ ನೀವು ಎಲ್ಲಿಗೆ" ಎಂದ. ಹಿಂದೆ ಅವನು ಎಲ್ಲಿಗೆ ಎಂದಾಗ ಅವನ ಪ್ರಶ್ನೆಗೆ ಪ್ರತ್ಯುತ್ತರವನ್ನು ಕೊಡುವ ಸೌಜನ್ಯವನ್ನು ತೋರಿಸಿದುದರಿಂದಲೇ ನನಗೆ ಈ ಗತಿಯುಂಟಾಗಿತ್ತು. ನಾನು 'ಎಲ್ಲಿಗಾದರೆ ನಿಮಗೇನು? ಯಮಪುರಿಗೆ' ಎಂದು ಹೇಳಿ ಗಳಿಗೇನೂ ಆ ಜಾಗದಲ್ಲಿ ನಿಲ್ಲದೆ ಓಡಿದೆ.

ನೀವು ಹೊರಟಿರುವಾಗ ಯಾರಾದರೂ ಎಲ್ಲಿಗೆ ಎಂದರೆ, ಜೋಕೆ, ಜವಾಬು ಕೊಡಬೇಡಿ. ಈ ಪ್ರಶ್ನೆ ಕೇಳುವ ಈ ಪ್ರಾಣಿಯ ಉದ್ದೇಶವೇನು ಎಂದು ಚಿಂತಿಸಿ.

■

# ಸ್ವಾತಂತ್ರದ ಹೋರಾಟದಲ್ಲಿ – ಅಜ್ಜನ ಹಿರಾಯಿಕ್ಸ್

●ಇ.ಆರ್. ರಾಮಚಂದ್ರನ್

'ಅಜ್ಜಿ! 75ನೆಯ ಸ್ವಾತಂತ್ರದ ವರ್ಷ ಈ ಆಗಸ್ಟ್ 15ಕ್ಕೆ ಬರ್‍ತಿದೆ. 1947ರ ಮುಂಚೆ ನಡೆದಿದ್ದ ಎಲ್ಲವೂ ನಿನಗೆ ಜ್ಞಾಪಕವಿದೆಯಾ ? ಈ ಮದ್ಯೆ ನಿನಗೆ ಡಿಮೆಂಷಿಯ ಬರಬಹುದು ಅಂತ ಡಾಕ್ಟರ್ ಬೇರೆ ಹೆದರಿಸಿದ್ನಲ್ಲಾ...?'

'ನನಗೆ ಯಾಕೆ ಡಿಮಿನಿಷ ಬರುತ್ತೋ? ನಿನ್ನೆ ಮೊನ್ನೆ ಡಾಕ್ಟರಿ ಮಾಡಿದ ಆ ಹುಡುಗನಿಗೆ ಬರಬಹುದು. ನನ್ನ ಎದುರಿಗೇ 5 ನಿಮಿಶದಲ್ಲಿ ಸತ್ತೇಸ್ಕೋಪು, ಮೊಣ ಕಾಲಿಗೆ ಹೊಡೆಯುವ ಮರದ ಸುತ್ತಿಗೆ ಎಲ್ಲಿ ಇಟ್ಟೇದಿನೆಂದು ಬಹಳ ಹುಡುಕಾಡಿದ ಪುಣ್ಯಾತ್ಮ! ಈಗಲೇ ನೀನು ಹೀಗಾದರೆ ಮದುವೆಯಾದ್ಮೇಲೆ ನಿನ್ನ ಕಥೆ ಮುಗಿದು ಹೋಗುತ್ತೆ ಎಂದು ನಗೆಯಾಡ್ದಾಗ, ನನ್ನ ಮದುವೇ ಆಗೋ ಹುಡುಗಿ ಕೂಡ ಅದನ್ನೇ ಹೇಳ್ತಾಳೇಂತ ಇನ್ನೂ ನಾಚಿಕೊಂಡ ಹುಡುಗ!'

'ಹ್ಹ ಹ್ಹ.....ಆಗಿನ ಆಂದೋಳನ ನೆನೆಸಿಕೊಂಡ್ರೆ ನಿನಗೆ ಏನೇನು ಜ್ಞಾಪಕ್ಕೆ ಬರುತ್ತೆ ಅಜ್ಜಿ'.

'ನಿನ್ನ ಅಜ್ಜ ಇರೋ ಸ್ಕೂಲ್ ಮೇಷ್ಟ್ರ ಕೆಲಸ ಬಿಟ್ಟು ದೇಶದ ಸ್ವಾತಂತ್ರಕ್ಕೆ ಹೋರಾಡ್ತಿನೀಂತ ನ್ಯಾಷನಲ್ ಹೈಸ್ಕೂಲ್ ಮೈದಾನಕ್ಕೆ ಹೋಗಿ ಚಳುವಳಿ ಮಾಡಿ ಚೆನ್ನಾಗಿ ಏಟು ತಿಂದು ಮುಲುಗುಟ್ತಾ ಮನೆಗ್ ಬಂದು ಬಿದ್ಗೊಂಡ್ರು. ನಮ್ಮನೆ ಹತ್ರ ಇದ್ದ ಪೊಲಿಸ್ ಸಿದ್ದಪ್ಪನೇ ಇವ್ರಿಗೆ ಕೋಲಿಂದ ತಿವ್ದು, ಹೊಡೆದ್ನಂತೆ. ಆಮೇಲೆ, ಹೊಡೆದ್ಬುಟ್ಟೆ.. ಏನೂ ಅನ್ಕೋ ಬೇಡಿ ಅಂತ ಹೇಳಿ ಇವರ್‍ನ ಸೈಕಲ್ ಮೇಲೆ ಕರ್‍ಕೊಂಡು ಬಿಟ್ಟು ಹೋದ ಪುಣ್ಯಾತ್ಮ!'

'ಅಯ್ಯೋ!'

'ಮೂರು ದಿವಸ ಅವರಿಗೆ ಮೈಕೈ ಎಲ್ಲಾ ಬಾಸುಂಡೆ... ಬೋಂಡ ತರಹ ಊದಿತ್ತು! ಕಾಯಂಗ್ಡಿ ಪಾಪಣ್ಣನ ಅಪ್ಪನ ಹತ್ತಿರ ಹೋಗಿ ಹರಳೆಣ್ಣೆ ತಂದು ಅದನ್ನು ಹಚ್ಚಿ ಮೈಗೆ ಬಿಸಿ ನೀರು ಶಾಖ ಕೊಟ್ಟೆ. ನೋವ್ಗೋ, ಬಿಸಿಗೋ ಗೊತ್ತಿಲ್ಲ... ಸೂರು ಕಿತ್ತೋಹಾಗೆ ಕಿರಿಚೋವ್ರು! ನಿಮ್ಮಪ್ಪ, ಚಿಕ್ಕಪ್ಪ ಎಲ್ಲಾ ಇನ್ನೂ ಚಿಕ್ಕೋವ್ರು. ಅಜ್ಜ ಕೂಗೋದನ್ನ ನೋಡಿ ಅವುಗಳೂ ಹೆದರಿ ಅಳೋವ್ರು...'

'ಅಜ್ಜ ಅಷ್ಟೆಲ್ಲಾ ಮಾಡೀದಾರಾ ದೇಶಕ್ಕೆ?'

'ಮೈ ಕೈ ನೋವು ಊತ ಇಳಿಯೋದಕ್ಕೆ ಒಂದು ವಾರ ಆಗೋದು. ಆಮೇಲೆ ಮತ್ತೆ ಶುರು. ಚಿಕ್ಕ ಲಾಲ್‌ಬಾಗ್ ಹತ್ರ ಯಾವುದೋ ಸ್ಕೂಲ್ ಹತ್ರ 'ಕ್ವಿಟ್ ಇಂಡಿಯ' ಮೂವ್ಮೆಂಟಿನ ಹರತಾಳ್ ಅಂತ ಹೋದ್ರು. ಅಲ್ಲಿಂದ ಅಜ್ಜ ಬರಲಿಲ್ಲ...... ಮದ್ಯರಾತ್ರಿ ಯಾರೋ ಅವರ್‍ನ ಒಂದು ಜೀಪ್ ನಲ್ಲಿ ತಂದು ಮನೆ ಎದುರಿಗೆ ಹಾಕಿ ಹೋದ್ರು.. ಪೊಲಿಸ್ ಲಾಠಿ ಚಾರ್ಜ್‌ನಲ್ಲಿ ಅಜ್ಜನ ಒಂದೆರೆಡು ಬೆನ್ನು ಎಲುಬು ಮುರಿದಿದ್ರು! ಕಾಯಂಗ್ಡಿ ಪಾಪಣ್ಣ ಇನ್ನೂ ಚಿಕ್ಕೋವ್ನು. ಆದ್ರೂ ಚೆನ್ನಾಗಿ ಮೂಳೆ ವಿದ್ಯೆ ಕಲ್ತಿದ್ದ. ಅಜ್ಜಂಗೆ ಬೋರ್‍ಲು ಮಲಗಿಸಿ ಚೆನ್ನಾಗಿ ಎಣ್ಣೆ ಹಚ್ಚಿ ಅವರ ಬೆನ್ನು ಮೂಳೇ ಮೇಲೆ ನಿಂತ್ಕೊಂಡು ತಕತಕ ಡ್ಯಾನ್ಸ್ ಮಾಡೋವ್ನು! ಯಾವ ಆಪರೇಷನ್ ಏನೂ ಇಲ್ಲ..

ಪಾಪಣ್ಣ ಬಗ್ಗಿದ್ದ ಮೂಳೆನ ಎಲ್ಲಾ ಸರಿ ಮಾಡ್ದ. ಮೂರು ತಿಂಗಳಲ್ಲಿ ಅಜ್ಜ ಮತ್ತೆ ರೆಡಿ ಆದ್ರು'.

'ಅಜ್ಜ ಬರೀ ಏಟು ತಿನ್ನೋದ್ರ ಜೊತೆಗೆ ಬೇರೆ ಏನಾದ್ರೂ ಮಾಡಿದ್ರಾ ಫ್ರೀಡಂ ಮೂವ್ಮೆಂಟ್ನಲ್ಲಿ?'

'ರಾತ್ರಿ ಪ್ರಭಾತ್ ಫೇರಿ ಹಾಡುಗಳನ್ನು ಉರು ಹೊಡೆಯೋವ್ರು..... ಹಿಂದಿ ಹಾಡುಗಳು.. 'ಕದಂ ಬಡಾಯೆಗಾ', ' ಭಾರತ್ ಕೆ ನೌ ಜಾವಾನ್' ಇನ್ನೂ ಯೇನೇನೊ ಹಾಡುಗಳು...ಒಂದ್ಯೆದಾರು ಹುಡುಗ್ರು ಜೊತೆಗೆ.... ಯಾರಿಗೂ ಸರಿಯಾಗಿ ಹಾಡಕ್ಕೆ ಬರ್ತಿರ್ಲಿಲ್ಲ.. 'ನಿಮ್ಮ ಗ್ರೂಪಿನ್ದು ಹಾಡು ಕೇಳಿಯೇ ಇಂಗ್ಲಿಷ್ನವರು ಹೆದರಿ ಓಡಿ ಹೋಗ್ತಾರೆ' ಅಂತ ಹೇಳ್ತಿದ್ದೆ ನಾನು ಅಜ್ಜನಿಗೆ.. ಹಾಗೇ ಆಯ್ತು.. 1947ರಲ್ಲಿ ಹೇಳ್ದೇ ಕೇಳ್ದೆ ಹೊರೊಟು ಹೋದ್ರು...'

'ಅಜ್ಜ ಇಷ್ಟೆಲ್ಲಾ ಮಾಡಿದಾರೆ ಅಂತ ನನ್ಗೆ ಗೊತ್ತಿರ್ಲಿಲ್ಲಾ ಅಜ್ಜಿ.'

'ಇನ್ನೊಂದು ಸರ್ತಿ 'ವಿದೇಶಿ ಸಾಮನುಗಳನ್ನು ಸುಟ್ಟು ಭಸ್ಮ ಮಾಡಿ ' ಎಂದು ಗಾಂಧಿಜಿ ಕರೆ ಕೊಟ್ಟಿದ್ದರು.. ಆವತ್ತಿನ ದಿನ ಅಜ್ಜ ಬೆಳಿಗ್ಗೆಯಿಂದ ಪತ್ತೇನೆ ಇರ್ಲಿಲ್ಲ..ಅವರಪ್ಪನೂ ಎರೆಡು ಮೂರು ಸರ್ತಿ ಇವನು ಎಲ್ಲಿ ಹಾಳಗಿ ಹೋಗಿದ್ದಾನೆ ಅಂತ ವಿಚಾರಿಸುತ್ತಲೇ ಇದ್ದರು. ಕೋಪದಿಂದ ಒಂದೊಂದು ಘಂಟೆ ಆದಾಗ್ಲೂ ಅವರ ಮುಖದ ಕಲರ್ ಬದಲಾಯಿಸುತ್ತಲೇ ಇತ್ತು. ಕೊನೆಗೆ ಕಿತ್ತಳೆ ಹಣ್ಣಿನ ಬಣ್ಣಕ್ಕೆ ತಿರುಗಿದಾಗ, 'ನಾನೇ ಹೋಗಿ ನೋಡ್ತೀನಿ ಹೊರಗಡೆ' ಎಂದು ಕೈಲೆ ಅವರ ಸಣ್ಣ ವಾಕಿಂಗ್ ಬೆತ್ತ ಹಿಡಕೊಂಡು ಹೊರಟರು. ನಮಗೆಲ್ಲಾ ಇದು ಅನರ್ಥಕ್ಕೆ ಸಂಕೇತ ಅಂತ ಗೊತ್ತು... ಅಜ್ಜನಿಗೆ ಕಾಯುತ್ತಾ ಇದ್ದೆವು. ಕೊನೆಗೆ ಅಜ್ಜನ ಕಿವಿಯನ್ನು ಹಿಡಿದುಕೊಂಡೇ ಬಂದ ಅಪ್ಪ, ಬೆತ್ತದಿಂದ ನಮ್ಮೆದುರಿಗೆ ಒಂದೆರೆಡು ಏಟು ಕೊಟ್ಟರು. ಅಜ್ಜನ ಕುಯ್ಯೋ ಮರ್ರೋ ಶುರುವಾಯಿತು. 'ನಿನ್ನ ಮಗ ಏನು ಮಾಡಲು ಹೊರಟಿದ್ದ ಕೇಳು' ಎಂದು ಅಜ್ಜನ ಕಿವಿ ತಿರುಚುತ್ತಾ ಅತ್ತೆಯ ಎದುರಿಗೆ ಕಿರುಚಿದರು. ಅತ್ತೆ 'ಏನು ಮಾಡಿದೆಯೋ ನನ್ನ ರಾಜ' ಎಂದರು. ಅಜ್ಜ ಕಿವಿ ಮುಟ್ಕೋಡ್ಕೊಳ್ತಾ ಇದ್ರು, ಬಾಯಿ ತೆಗೆಯಲಿಲ್ಲ. 'ನಾನೇ ಹೇಳ್ತಿನಿ ಕೇಳು.... ನನಗೆ ಆಫೀಸಿನಿಂದ ಬಂದ ಉಡುಗೊರೆ – ಷೀಫರ್ ಪೆನ್ನು ವಿದೇಶಿ ಸಾಮಾನು ಅಂತ ಗಾಂಧೀಜಿ ಕರೆದ 'ವಿದೇಶಿ ಸಾಮಾನನ್ನು ಸುಡಿ' ಕಾರ್ಯಕ್ರಮದಲ್ಲಿ ಅದನ್ನು ಬೆಂಕಿ ಯಲ್ಲಿ ಹಾಕೋದಕ್ಕೆ ತೊಗೊಂಡು ಹೋಗಿದ್ದ ನಿನ್ನ ರಾಜ! ನಾನು ಹೋಗೋದು ಐದು ನಿಮಿಶ ತಡವಾಗಿದ್ದರೆ ಅದು ಸುಟ್ಟು ಭಸ್ಮವಾಗುತ್ತಿತ್ತು' ಎಂದರು.

ಅದು ನಿಜ. ಅವರ ಕೆಲಸಕ್ಕೆ ಮೆಚ್ಚಿ ಬಿಟಿಷ್ ಅಧಿಕಾರಿಯೊಬ್ಬ ಅವರಿಗೆ ಅದನ್ನು ಆಫೀಸಿನ ಎಲ್ಲರ ಮುಂದೆ ಅವರನ್ನು ಹೊಗಳಿ ಅದನ್ನು ಅವರ ಶರ್ಟಿನ ಜೇಬಿಗೆ ಸಿಕ್ಕಿಸಿದ್ದ. ಆಜ್ಜ ಅದನ್ನು ಅಗ್ನಿಕುಂಡದಲ್ಲಿ ಹಾಕುವುದಕ್ಕೆ ತೊಗೊಂಡು ಹೋಗಿದ್ದರು!

ಅಜ್ಜಂದು ಕಾಂಡಗಳು ಹೀಗೆ ಎಷ್ಟೋ. ಪೋಲಿಸಿನವರಿಂದ ಏಟು ತಿಂದು ಮನೆಗೆ ಬಂದು ಅವರಪ್ಪನಿಂದ ಬೈಸಿಕೊಡಿದ್ದು ಉಂಟು.

ಇನ್ನೊಂದು ಸಲ ಅಜ್ಜ ಭಾರತದಲ್ಲಿ ಮನೆಹಾಳ ವಿದೇಶಿ ಲಿಕರ್ಗಳ ವಿರುದ್ಧ

ಕಂಟ್ರೋಲ್‌ಮೆಂಟಿನಲ್ಲಿ ಅಂಗಡಿಯ ಮುಂದೆ ಕೂತು ಹರತಾಳ್ ಮಾಡಿದರು. ಅಜ್ಜನಿಗೆ ದೇಸೀ ವಿದೇಶಿ ಯಾವುದೂ ಪರಿಚಯವಿರಲಿಲ್ಲ. ಅದರ ಗಂಧವೂ ಇರಲಿಲ್ಲ. ಆದನ್ನ ಸ್ವಾತಂತ್ರದ ಸಂಗ್ರಾಮದ ಜೊತೆಗೆ ಹಾಕಿಕೊಂಡಿದ್ದರು. ಎಲ್ಲರ ಜೊತೆ ಹೋಗಿ ಸಾರಾಯಿಯ ಅಂಗಡಿಯ ಮುಂದೆ ಕೂತು ಅದರ ವಿರುದ್ಧ ಕೂಗು ಹಾಕಿದರು. ಆಜ್ಜ ಆ ರಾತ್ರಿ ಮನೆಗೆ ಬರಲಿಲ್ಲ... ನಾವೆಲ್ಲಾ ಹೆದರಿ ಜಾಗರಣೆ ಮಾಡ್ತಿದ್ವು. ಅವರನ್ನೆಲ್ಲಾ ಅರೆಸ್ಟ್ ಮಾಡಿ ಜೈಲಿಗೆ ಹಾಕಿದ್ದಾರೇಂತ ಪೊಲಿಸ್ ಸಿದ್ದಪ್ಪನೇ ಮನೆಗೆ ಬಂದು ಹೇಳಿ ಹೋದ.

ಅಜ್ಜನ ಅಪ್ಪ ಮನೆಯಲ್ಲಿ ಬೆತ್ತ ಹಿಡಿದು ಅಜ್ಜನಿಗೆ ಕಾಯುತ್ತಾ ಶಥಪಥ ತಿರುಗಾಡ್ತಾ ಇದ್ರು.

ಆವತ್ತು ರಾತ್ರಿ ಹನ್ನೆರೆಡು ಘಂಟೆಗೆ ಅವರನ್ನೆಲ್ಲಾ ಜೈಲಿನಿಂದ ಬಿಟ್ಟರು. ಆಜ್ಜ ಮನೆಗೆ ಬಂದಾಗ ರಾತ್ರಿ 1 ಘಂಟೆಯಾಗಿತ್ತು. ಅವರಪ್ಪನ ಕೈಲಿ ಬೆತ್ತವಿತ್ತು. ಇವತ್ತು ಇವರಿಗೆ ಚೆನ್ನಾಗಿ ಪೂಜೆಯಾಗುತ್ತೆ ಅಂತ ನಾನು ಹೆದರಿದ್ದೆ.

ಅಜ್ಜ ಮನೆಗೆ ಬಂದಾಗ ಕೈಲಿದ್ದ ಕೋಲನ್ನು ಬಿಸಾಕಿ ಅವರು ಅಜ್ಜನನ್ನು ತಬ್ಬಿಕೊಂಡರು. ಭಲೇ ಭೇಷ್ ಎಂದು ತಲೆಸವರಿದರು. ಅವರ ಕಣ್ಣಲ್ಲಿ ನೀರಿತ್ತು.

ಅಂದು ರಾತ್ರಿ ನಮಗೆ ಸ್ವಾತಂತ್ರ ಸಿಕ್ಕಿತು. ದೇಶ ಬೇಡಿ ಕಳಚಿಕೊಂಡು ತಲೆಯೆತ್ತಿ ನಿಂತ ದಿವಸ.

■

---

# ಹರಕೆ

**ವಿ.ವಿಜಯೇಂದ್ರ ರಾವ್**

ಬೆಂಗಳೂರಿಂದ ತಿರುಪತಿಗೆ ಹೋಗುವ ಬೆಳಗಿನ ಬಸ್ಸಿನಲ್ಲಿ ಅವತ್ತು ಜಾಸ್ತಿ ರಷ್ ಇರಲಿಲ್ಲ. ಸುಮಾರು ಸೀಟುಗಳು ಖಾಲಿಯಾಗಿಯೇ ಇತ್ತು. ಮೆಜೆಸ್ಟಿಕ್ ನಲ್ಲಿ ಬಸ್ ಹತ್ತಿದ ಒಬ್ಬ ಮಹಾಶಯ ಸೀಟ್ ಖಾಲಿಯಿದ್ದರೂ ಕುಳಿತುಕೊಳ್ಳದೇ ಬಸ್ಸಿನಲ್ಲಿ ಓಡಾಡುತ್ತಾನೇ ಇದ್ದನು.ಕಂಡಕ್ಟರ್ – ಸಾರ್, ಎಷ್ಟೊಂದು ಜಾಗ ಖಾಲಿ ಇದೆಯಲ್ಲಾ, ಎಲ್ಲಾದರೂ ಹೋಗಿ ಕುಳಿತುಕೊಳ್ಳಿ ಎಂದು ವಿನಂತಿಸಿದರೂ, ಗದರಿ ಹೇಳಿದರೂ, ಅವನು ಮಾತ್ರ ಎಡಬಿಡದೆ ಬಸ್ಸೊಳಗೆ ಹಿಂದೆ ಮುಂದೆ ನಡೆದಾಡುತ್ತಲೇ ಇದ್ದನು.

ಬಸ್ಸು ಕೃಷ್ಣಗಿರಿಯಲ್ಲಿ ಚಹಾಗಾಗಿ ನಿಂತಾಗಲೂ, ಅವನು ಇಳಿಯದೇ ತಿರುಗಾಡುತ್ತಾಲೇ ಇದ್ದನು. ಆಮೇಲೆ ಮೂರು ತಾಸುಗಳ ನಂತರ ಅದು ವೆಲ್ಲೂರಿನಲ್ಲಿ ಊಟಕ್ಕಾಗಿ ನಿಲ್ಲಿಸಿದಾಗ, ಕಂಡಕ್ಟರ್ ಅವನಿಗೆ – ಸಾರ್, ನೀವು ಕೂರದಿದ್ದರೂ ಪರವಾಗಿಲ್ಲ, ಊಟನಾದರೂ ಮಾಡಿಕೊಂಡು ಬನ್ನಿ ಎಂದು ವಿನಂತಿಸಿದಾಗಲೂ, ಅವನು – ಇಲ್ಲಪ್ಪಾ, ನಾನು ಎಲ್ಲೂ ಹೋಗಲ್ಲ ಮತ್ತು ಇಳಿಯಲ್ಲ, ನೀವುಗಳು ಬೇಗ ಹೋಗಿ ಊಟ ಮಾಡಿ ಬನ್ನಿ ಎಂದು ಆಗ್ರಹಿಸಿದನು.ಕಂಡಕ್ಟರ್ – ಇದೇನಪ್ಪಾ, ಇಂಥಹ ವಿಚಿತ್ರ ಮನುಷ್ಯ ಗಂಟು ಬಿದ್ದನಲ್ಲಾ ಅಂದ್ಕೊಂಡು, ಊಟಕ್ಕೆ ಇಳಿದು ಹೋದನು.ಮತ್ತೆ ಬಂದಾಗಲೂ ಆ ಮನುಷ್ಯ ಎಡಬಿಡದೆ ನಿಂತ ಬಸ್ಸಿನಲ್ಲೂ ನಡೆದಾಡುತ್ತಾ ಇದ್ದನು.

ಕೊನೆಗೆ ಸಂಜೆ ಆರರ ಹೊತ್ತಿಗೆ ಬಸ್ ತಿರುಪತಿಗೆ ಬಂದು ತಲುಪಿತು.ಆ ಮನುಷ್ಯನ ಮುಖದಲ್ಲಿ ಏನೋ ಸಂತಸ.ಎಲ್ಲರೂ ಇಳಿದ ಮೇಲೆ ಅವನು ಇಳಿದನು.ಅವನ ಹಿಂದೆಯೇ ಕಂಡಕ್ಟರ್ ಹೋಗಿ – ಈಗಲಾದರೂ ಹೇಳಪ್ಪಾ ನೀನು ಯಾಕೆ ಅಷ್ಟೊಂದು ಜಾಗ ಖಾಲಿಯಿದ್ದರೂ ಕುಳಿತುಕೊಳ್ಳದೇ ಒಂದೇ ಸಮನೆ ನಡೆದಾಡುತ್ತಿದ್ದೆ..? ಎಂದು ಕೇಳಿದಾಗ, ಆ ಮಹಾನುಭಾವ – ಏನಿಲ್ಲಪ್ಪಾ, ನಾನೊಂದು ಹರಕೆ ಹೊತ್ತಿದ್ದೆ, ತಿರುಪತಿಗೆ ನಿರಾಹಾರದಿಂದ ನಡೆದುಕೊಂಡೇ ಬರ್ತೀನಿ ಅಂತ, ಅದಕ್ಕೆ ಕುಳಿತುಕೊಳ್ಳದೇ ನಡೆದಾಡುತ್ತಿದ್ದೆ ಎಂದಾಗ, ಕಂಡಕ್ಟರ್ – ಪ್ರಪಂಚದಲ್ಲಿ ಎಂಥೆಂಥಾ ಜನರೆಲ್ಲಾ ಇರ್ತಾರಪ್ಪಾ ಎಂದು ಆಶ್ಚರ್ಯಕರವಾಗಿ ಅವನು "ಗೋವಿಂದ... ಗೋವಿಂದ" ಅನ್ನುತ್ತಾ ಹೋಗುವುದನ್ನೇ ನೋಡುತ್ತಾ ನಿಂತ....!

# ಜೈ ಜವಾನ್ ... ಜೈ ಕಸಾನ್ !

**● ಗಣೇಶ ಹೆಗ್ಗಡೆ**

ಆಷಾಢ ಮಾಸದ ವಾರದಂಚಿನ ಅಂದಿನ 'ಕಾಮನ್ ರೂಂ' ಸಭೆಗೆ, ಗೌರವಾನ್ವಿತರೂ, ಹಿರಿಯ ದೇಶಭಕ್ತರೂ ಹಾಗೂ ನಮ್ಮ ಸಂಘದ ಅಜೀವ ಅಧ್ಯಕ್ಷರೂ ಆದ ಡಾ. ತೋಲಾಂಡರಾಯರು ನಮಗಿಂತಲೂ ಮುಂಚೆಯೆ ಬಂದು ಆಸೀನರಾಗಿದ್ದುದು ನಮ್ಮಂಥಹ ತರುಣರಿಗೆ ಸಂಕೋಚದ ವಿಷಯವಾಗಿತ್ತು. ಕೊಠಡಿಯ ಗೋಡೆಯ ಮೇಲೆ ತೂಗು ಹಾಕಿದ್ದ ಮಾಜಿ ಪ್ರಧಾನಿ ದಿ. ಲಾಲ್ ಬಹದ್ದೂರು ಶಾಸ್ತ್ರಿಯವರ ಭಾವಚಿತ್ರಕ್ಕೆ ಎದ್ದು ನಿಂತು ನಮಿಸುತ್ತಾ,

'ಷೆಲ್ ವಿ ಸ್ಟಾರ್ಟ್' ಎಂದು ನಮ್ಮೆಲ್ಲರ ಮುಖವನ್ನೊಮ್ಮೆ ನೋಡಿದರು ಡಾ. ತೋಲಾಂಡರಾಯರು.

'ಯೆಸ್ ಸರ್' ಎಂದೆವು ಒಕ್ಕೊರಲಿನಿಂದ.

ಫ್ರೆಂಡ್ಸ್, ಬರುವ ಆಗಸ್ಟ್ ಹದಿನೈದಕ್ಕೆ ನಮ್ಮ ಕಾಮನ್ ರೂಮು ಅಸೋಸಿಯೇಷನ್ನಿಗೆ ಇಪ್ಪತ್ತೈದು ವಸಂತಗಳು ತುಂಬುತ್ತಿರುವುದು ಒಂದು ಹೆಮ್ಮೆಯ ವಿಷಯ. ಅಂತೆಯೆ, ದೇಶ ಅಂದು ಎಪ್ಪತ್ತೈದನೇ ಸ್ವಾತಂತ್ರ್ಯ ಮಹೋತ್ಸವನ್ನೂ ಆಚರಿಸುತ್ತಿರುವುದು ಎಲ್ಲಾ ಭಾರತೀಯರಿಗೂ ಒಂದು ಹರ್ಷದ ಸಂದರ್ಭ. ಆದರೆ ನನಗೆ ಇತ್ತೀಚಿನ ದಿನಗಳಿಂದ ಒಂದು ಜಿಜ್ಞಾಸೆ ಕಾಡುತ್ತಿದೆ. ನಾವು ನಿಜವಾಗಿಯೂ ದೇಶ ಪ್ರೇಮಿಗಳೆ? ಒಂದು ದಿನ ಮಾತ್ರ ನಾವು ಸ್ವಾತಂತ್ರ್ಯೋತ್ಸವವನ್ನು ಆಚರಿಸಿ, ನಂತರ ಬಾವುಟ ಮಡಚಿಟ್ಟು, ಆ ಪವಿತ್ರ ಬಾವುಟದ ಹಿಂದೆ ಅಡಗಿರುವ ಧ್ಯೇಯ, ತ್ಯಾಗ, ಬಲಿದಾನಗಳನ್ನು ಮರೆತು ಹೋಗುವುದು ಎಂಥಹ ವಿಪರ್ಯಾಸ.

ಇಂದಿನ ಗಲಭೆ, ಧರ್ಮಯುದ್ಧದ ಗೊಂದಲ ಎಲ್ಲೆಲ್ಲೂ ಅಶಾಂತಿ, ಭಯದ ವಾತಾವರಣ... ಇವೆಲ್ಲವನ್ನೂ ಅವಲೋಕಿಸಿದಾಗ, ಮನುಕುಲದ ಚಿಂತನೆ ಈಗ ಎತ್ತ ಸಾಗಿದೆ? ಈ ಪವಿತ್ರ ದೇಶ ಎತ್ತವಾಲಿದೆ? 'ಕ್ವಿಟ್ ಇಂಡಿಯಾ' ಚಳುವಳಿಯಲ್ಲಿ ಭಾಗವಹಿಸಿ ಜೈಲು ಸೇರಿ ಸೆರೆವಾಸ ಅನುಭವಿಸಿದ ಆ ದೇಶ ಭಕ್ತರೆಲ್ಲಿ? ಕಿಟ್ (ಬ್ಯಾಗ್) ಇಂಡಿಯಾ ಎಂಬ ಭ್ರಷ್ಟಾಚಾರದ ಚಳುವಳಿಯಲ್ಲಿ ಧುಮುಕಿ ಸೆರೆವಾಸ ಅನುಭವಿಸುತ್ತಿರುವ ಇಂದಿನ ದೇಶ ಭುಕ್ತರೆಲ್ಲಿ? ಮನೆಯೊಳಗೆ ಕಸ ತುಂಬಿಕೊಂಡರೆ ಅಥವಾ ಮನಸಿನೊಳಗೆ ಕಸ ತುಂಬಿಕೊಂಡರೆ ನಾವು ಗುಡಿಸಿ, ತೆಗೆದು ಬಿಸಾಕಬಲ್ಲೆವು. ಆದರೆ ನಮ್ಮ ಮನಸಿನೊಳಗೇ ಕಸ ತುಂಬಿಕೊಂಡರೆ?

– ಈ ಪ್ರಶ್ನೆಯನ್ನು ಸಭೆಯ ಮುಂದಿಟ್ಟು ಲಾಲ್ ಬಹುದ್ದೂರು ಶಾಸ್ತ್ರಿಯವರ ಭಾವಚಿತ್ರದತ್ತ ಒಮ್ಮೆ ದಿಟ್ಟಿಸಿ, ಯಾರಿಗೂ ಕಾಣಬಾರದೆಂಬ ನಿಟ್ಟಿನಿಂದ ಕಣ್ಣಂಚಿನ ಹನಿಯನ್ನು ಶಲ್ಯದಿಂದ ವರೆಸಿಕೊಂಡರು ಡಾ. ತೋಲಾಂಡರಾಯರು. ನಾವೆಲ್ಲಾ ದಿಗ್ಮೂಢರಾಗಿ ಕುಳಿತಿದ್ದೆವು. ಮತ್ತೆ ಮೌನ ಮುರಿದ ಅವರು,

'ನೀವೆಲ್ಲಾ ಎದೆ ಮುಟ್ಟಿಕೊಂಡು ಹೇಳಿ. ಇಂಥಹ ಚಿಂತನೆ, ಗೊಂದಲಗಳನ್ನೆಲ್ಲಾ ಇಟ್ಟುಕೊಂಡು ನಾವು ಮುಂದಿನ ಸ್ವಾತಂತ್ರ್ಯೋತ್ಸವವನ್ನು ಸಾಂಪ್ರದಾಯಿಕವಾಗಿ ಆಚರಿಸುವುದು ಎಷ್ಟರಮಟ್ಟಿಗೆ ಸಮಂಜಸ? ಆದ್ದರಿಂದ ನಾವು ಈ ಸರ್ತಿ ಕೊಂಚ

ವಿಭಿನ್ನವಾಗಿ ಈ ಸ್ವಾತಂತ್ರ್ಯೋತ್ಸವವನ್ನು ಆಚರಿಸೋಣವೆಂದು ತೀರ್ಮಾನಿಸಿದ್ದೇನೆ. ಇದಕ್ಕೆ ನಿಮ್ಮೆಲ್ಲರ ಸಹಕಾರ, ಒಪ್ಪಿಗೆ ನನಗೆ ಅತ್ಯಗತ್ಯ' ಎಂದು ಭಾವೋಚಿತ್ತರಾಗಿ ನುಡಿದ ಡಾ. ತೋಲಂಡರಾಯರು ನಮ್ಮತ್ತ ದೃಷ್ಟಿ ಹಾಯಿಸಿದರು. ತಡಮಾಡದೆ ನಾವೆಲ್ಲಾ...

'ವಿ ಆರ್ ಆಲ್‌ವೇಸ್ ವಿತ್ ಯು ಸರ್' ಎಂದೆವು

'ಥ್ಯಾಂಕ್ಸ್. ಫ್ರಂ ದಿಸ್ ಡೆ ಆನ್‌ವರ್ಡ್ಸ್ ದೆರ್ ವಿಲ್‌ಬಿ ನೊ ಫಂಕ್ಷನ್, ನೋ ಚೀಫ್‌ಗೆಸ್ಟ್, ನೊ ಹಾನರಿಂಗ್ ನೋ ಸ್ವೀಟ್ಸ್....ಎಟ್ಸೆಟ್ರಾ....ಎಟ್ಸೆಟ್ರಾ... ಇನ್‌ಸ್ಟೆಡ್, ನಾವೆಲ್ಲಾ ಆಗಸ್ಟ್ ಹದಿನೈದರಂದು ನಮ್ಮ ನಮ್ಮ ಮನೆಯ ಕಾಂಪೌಂಡಿನಲ್ಲೇ ಧ್ವಜಾರೋಹಣ ಮಾಡಿ, ಬೆಳಗ್ಗೆ ಒಂಭತ್ತು ಘಂಟೆಗೆ ತಪ್ಪದೆ ಇಲ್ಲಿ ಹಾಜರಾಗೋಣ. ಇದು ವಿಶೇಷ ಸಂದರ್ಭವಾಗಿರುವುದರಿಂದ ನಿಮ್ಮ ನಿಮ್ಮ ಪತ್ನಿಯರೂ ನಿಮ್ಮ ಜತೆಗೆ ಬರುವುದು ಶೋಭೆ. ಎಲ್ಲರೂ ಮನೆಯಿಂದ ಒಂದೊಂದು ಬಕೆಟ್, ಎರಡೆರಡು ಪೊರಕೆ ತರುವುದು ಕಡ್ಡಾಯ. ಕೈಗೆ ಗ್ಲೌಸ್, ತಲೆಗೆ ಟೊಪ್ಪಿಗೆ ಮತ್ತು ಕಾಲಿಗೆ ಕ್ಯಾನ್‌ವಾಸು ಷೂ ಧರಿಸುವುದು ನಿಮ್ಮ ವಿವೇಚನೆಗೆ ಬಿಟ್ಟಿದ್ದು.

"ಸ್ಸಾರಿ ಟು ಇಂಟರೆಪ್ಟ್" ಎಂದು ಎದ್ದು ನಿಂತೆ ನಾನು

'ಯೆಸ್ ಟೆಲ್ ಮಿ' ಎಂದು ಹುಬ್ಬೇರಿಸಿದರು ಡಾ. ತೋಲಂಡರಾಯರು

'ಸರ್ ನಮಗೆಲ್ಲಾ ಪೊರಕೆ ತರುವುದಕ್ಕೆ ಹೇಳಿದ್ದು ನೋಡಿದರೆ, ನಮ್ಮನ್ನೆಲ್ಲಾ ಸಾರಾಸಗಟಾಗಿ 'ಆಮ್ ಆದ್ಮಿ ಪಕ್ಷಕ್ಕೆ....'

'ನಾನ್ಸೆನ್ಸ್' ಎಂದರು ಡಾ. ತೋಲಾಂಡರಾಯರು. ರೇಗಿ, ನಂತರ ಮುಂದುವರೆದು,

"ಈ ಸರ್ತಿಯ ಸ್ವಾತಂತ್ರ್ಯೋತ್ಸವದ ಕಾರ್ಯಕ್ರಮದ ಬಗ್ಗೆ ನಿಮಗಿನ್ನೂ ಕುತೂಹಲವಲ್ಲವೆ?

ನಾವು ನಮ್ಮ ಸಿಟಿಯ ಯಾವುದಾದರೊಂದು ವಾರ್ಡನ್ನು ಆಯ್ದು ಕೊಳ್ಳೋಣ. ಈ ವರ್ಷ ಬೀದಿ ಕಸವನ್ನು ಗುಡಿಸೋಣ. ಮುಂದಿನ ವರ್ಷ ಮನೆಯ ಕಸ, ಅದರ ಮುಂದಿನ ವರ್ಷ ನಮ್ಮೆಲ್ಲರ ಮನಸ್ಸಿನ ಕಸವನ್ನು ಗುಡಿಸಿ ಸ್ವಚ್ಛ ಮಾಡುತ್ತಾ... ಇಡೀ ಮನುಕುಲದ ಪರಿವರ್ತನೆಗೆ ನಾಂದಿ ಹಾಡೋಣ'

ಮತ್ತೆ ಅಳುಕಿನಿಂದ ಎದ್ದು ನಿಂತು ನಾನು

ಸರ್, ವಿಧಾನಸೌಧದ ಒಳಗೂ ಹೊರಗೂ ಇರುವ ಕಸವನ್ನು ಸ್ವಚ್ಛ ಮಾಡುವ ಎದೆಗಾರಿಕೆ ಯಾರಿಗಿದೆ?' ಎಂದು ಕೇಳಿದೆ.

"ಐದು ವರ್ಷಕ್ಕೊಮ್ಮೆ ಪ್ರಜೆಗಳಿಗಿದೆ..." ಮೈ ಬಾಯ್"! ಎನ್ನುತ್ತಾ ಸಭೆ ಬರಖಾಸ್ತು ಎಂದು ಎದ್ದರು ಡಾ. ತೋಲಾಂಡರಾಯರು. ನಾವೂ ಖುಷಿಯಿಂದ ಎದ್ದೆವು.

* * *

ಮಾರನೆಯ ದಿನ ಪತ್ರಿಕೆಗಳಲ್ಲಿ ಡಾ. ತೋಲಾಂಡರಾಯರ ಸುದ್ದಿಗೋಷ್ಠಿಯ

ಸವಿವರಗಳು ಅಂದರೆ ಈ ಸರ್ತಿಯ ನಮ್ಮ ಸಂಘ ಹಮ್ಮಿಕೊಂಡಿರುವ ಸ್ವಾತಂತ್ರ್ಯೋತ್ಸವದ ಆಚರಣೆಯ ಇಂಚಿಂಚೂ ವಿವರಗಳು ಪ್ರಕಟವಾಗಿದ್ದನ್ನು ಕಂಡು ನಾನು ಮತ್ತು ಮಡದಿ ಪದ್ದಿ ಓದಿ ಪುಳಕಿತಗೊಂಡೆವು. 'ಗ್ರೇಟ್ ಮ್ಯಾನ್ ಹೈ ಥಿಂಕಿಂಗ್' ಎಂದ ಪದ್ದಿ "ರ್ರೀ ನಾಳೆಯಿಂದ ಸರಿಯಾಗಿ ಪೊರಕೆ ಹಿಡಿಯುವುದನ್ನು ಅಭ್ಯಾಸ ಮಾಡಿಕೊಳ್ಳಿ. ಮದುವೆಯಾದಾಗಿನಿಂದ ನೀವು ಪೊರಕೆಯನ್ನೇ ಹಿಡಿದಿಲ್ಲ" ಎಂದು ಎಚ್ಚರಿಸಿದಳು. ಮೌನಂ ಮಾನ ಕಾಪಾಡಂ ಎಂದು ಗುನುಗಿಕೊಂಡು ಸುಮ್ಮನಾದೆ. ಈ ಘಟನೆಗಳೆಲ್ಲಾ ಕಳೆದು ಒಂದು ವಾರವೂ ಆಗಿರಲಿಲ್ಲವೆನ್ನಿ. ಇದ್ದಕ್ಕಿದ್ದಂತೆ ಮೊನ್ನೆ ಮುಂಝಾನೆ ನನ್ನ ಫೋನನ್ನು ಸಂಪರ್ಕಿಸಿದ ಡಾ. ತೋಲಾಂಡರಾಯರು ಆತಂಕದ ದನಿಯಲ್ಲಿ ಮಾತನಾಡುತ್ತಿರುವ ಹಾಗೆ ಭಾಸವಾಯ್ತು.

'ಎನಿ ಪ್ರಾಬ್ಲಂ ಸರ್? ಎಂದೆ ಆತಂಕಗೊಂಡು.

'ಕಂಡಾಪಟ್ಟೆ ಮೈ ಬಾಯ್. ಸರಿಯಾಗಿ ಕೇಳಿಸ್ಕೋ ಈಗ್ತಾನೆ ನಮ್ಮ ಸಿಟಿಯ ಪೌರ ಕಾರ್ಮಿಕ ಸಂಘದ ಅಧ್ಯಕ್ಷರಿಂದ ಕರೆಬಂದಿತ್ತು. ನಮ್ಮ ಸ್ವಾತಂತ್ರೋತ್ಸವದ ಈ ವಿಶಿಷ್ಠ ಕಾರ್ಯಕ್ರಮ ಅವರ ಸಂಘದ ಎಲ್ಲಾ ಸದಸ್ಯರಿಗೂ ಮೆಚ್ಚುಗೆಯಾಯ್ತಂತೆ. ನಮ್ಮ ಕಾರ್ಯಕ್ರಮದ ಈ ವಿಚಾರ ಧಾರೆ ಹಾಗು ಮನುಕುಲದ ಪರಿವರ್ತನೆ ಹಾಗೂ ಶಾಂತಿಗಾಗಿ ನಾವು ಹಮ್ಮಿಕೊಂಡಿರುವ ಕೆಲಸಕ್ಕೆ ಅವರೆಲ್ಲಾ ಅಭಾರಿಯಾಗಿದ್ದಾರಂತೆ.

'ಎಂಥಹ ಗುಡ್ ನ್ಯೂಸ್ ಸರ್'

'ಅಯ್ಯೋ ಪ್ರಾರಬ್ಧವೇ...ಇನ್ನೂ ನಾನು ಸಬ್ಜೆಕ್ಟಿಗೇ ಬಂದಿಲ್ಲ. ಪೌರ ಕಾರ್ಮಿಕರು, ತಮ್ಮ ವೇತನ ಪರಿಷ್ಕರಣೆ, ಕಾಯಂ ನೌಕರಿ, ಇನ್ನಿತರ ಬೇಡಿಕೆಗಳನ್ನು ಘನ ಸರ್ಕಾರದ ಮುಂದಿಟ್ಟು ಇಡೀ ಆಗಸ್ಟ್ ತಿಂಗಳು ಕೆಲಸಕ್ಕೆ ಗೈರು ಹಾಜರಿಯಾಗುತ್ತಾರಂತೆ. ಆದ್ದರಿಂದ ನಾವು ಈ ಸ್ವಚ್ಛತಾ ಕಾರ್ಯಕ್ರಮವನ್ನು ಕೇವಲ ಒಂದು ದಿನಕ್ಕೆ ಮಾತ್ರ ಸೀಮಿತ ಗೊಳಿಸದೆ ದಿನಕ್ಕೊಂದು ವಾರ್ಡಿನಂತೆ ಇಡೀ ಆಗಸ್ಟ್ ತಿಂಗಳು ಆಚರಿಸಬೇಕಂತೆ. ಯಾವ ಕಾರಣಕ್ಕೂ ಒಂದು ತಿಂಗಳ ಈ ಕಾರ್ಯಕ್ರಮದಿಂದ ನಾವು ಹಿಂದೆ ಸರಿಯಬಾರದಂತೆ. ಹಾಗೇನಾದರೂ ಮಾತು ತಪ್ಪಿದರೆ...ಊರಿನಲ್ಲಿರೊ ಕಸವೆನ್ನೆಲ್ಲಾ ನಮ್ಮ ಸಂಘದ ಕಛೇರಿಯ ಮುಂದೆ....

"ಛೇ.. ಛೆ.. ಎಂಥಹ ಪ್ರಮಾದವಾಯ್ತು? ಸರ್, ಬೇರೇನು ದಾರೀನೆ ಇಲ್ವೆ?"

'ಇಲ್ಲ ಮೈ ಬಾಯ್, ವಿ ಆರ್ ಲಿಟರಲಿ ಹೆಲ್ಪ ಲೆಸ್. ಐ ಥಿಂಕ್ ವಿ ಹ್ಯಾವ್ ಬೀನ್ ಕಾಟ್ ಇನ್ ಅವರ್ ಓನ್ ವೆಬ್! ಜೈ ಜವಾನ್...ಜೈ ಕಸಾನ್ ಎನ್ನುತ್ತಾ ಫೋನ್ ಕೆಳಗಿಟ್ಟರು. ಡಾ. ತೋಲಂಡರಾಯರು. ಆ ಕ್ಷಣದಲ್ಲಿ ದಿ. ಶಾಸ್ತ್ರೀಜಿಯವರ ಭಾವಚಿತ್ರ ನಮ್ಮನ್ನು ನೋಡಿ ನಕ್ಕಂತೆ ಭಾಸವಾಗಿ, ನಾನು ಮತ್ತು ಪದ್ದಿ ದಿಕ್ಕು ತೋಚದೆ ತಲೆಯ ಮೇಲೆ ಕೈ ಹೊತ್ತು ಕುಳಿತುಕೊಂಡೆವು. ■

---

## ಕವಿಗಳು

**ಎಸ್. ಎನ್. ಗಣನಾಥ, ಮೈಸೂರು**

ಕೆಲವರಿಗೆ ಕವಿತೆಗಳ ಬರೆಯುವ ಹುಚ್ಚು
ಈಗೀಗ ಆ ಮಂದಿ ಬಹಳವೇ ಹೆಚ್ಚು
FBಯಲಿ ಸಿಗಬಹುದು ನಾಲ್ಕೈದು ಮೆಚ್ಚು
ಹಾಗಾದ್ರೆ ಉಳಿಯುವುದು ಬರವಣಿಗೆ ಟಚ್ಚು

# ಸ್ವಾತಂತ್ರ ಚಳುವಳಿಯಲ್ಲಿ ಜೈಲಿನ ಸ್ವಾರಸ್ಯಗಳು

**ಸಂಗ್ರಹ : ●ಸುಕೇಶವ**

**( ಸಂಗ್ರಹ : ಡಾ. ಎಚ್ಚೆನ್ ಅವರ ಹೋರಾಟದ ಹಾದಿ ಗ್ರಂಥದಿಂದ ಸ್ವಾತಂತ್ರ ಹೋರಾಟದ ದಿನಗಳು )**

## ಮುಖಕ್ಷೌರದ ಮಹದಾನಂದ

ಪೂನಾದ ಯರವಾಡ ಜೈಲಿನಲ್ಲಿ ನಮಗೆ ಮುಖಕ್ಷೌರ ಮಾಡಿಸಿಕೊಳ್ಳಲು ಜೈಲಿನ ಒಬ್ಬ ನಾಯಿಂದನ ಮುಂದೆ ಕುಳಿತೆ ಅವನು ಕೊಟ್ಟ ಮಸುಕುಮಸಕಾದ ಕನ್ನಡಿಯ ಸಹಾಯದಿಂದ ನನ್ನ ಮುಖ ಹೇಗಿರಬಹುದೆಂದು ಊಹಿಸಿಕೊಂಡೆ. ಗಿಂಡಿಯಲ್ಲಿ ನೀರಿತ್ತು. ಸುಮ್ಮನೆ ಕೂತಿದ್ದೆ. ಕ್ಯಾ ದೇಖತಾ ಹೈ ಪಾನಿ ಲಗಾಲೆ (ಏನು ನೋಡ್ತಾ ಇದೀಯ, ನೀರು ಹಚ್ಚಿಕೋ) ಎಂಬ ಆತನ ಆಜ್ಞೆಯನ್ನು ಕಾಲಿಸಿ ನನ್ನ ಗಡ್ಡವನ್ನು ನಾನೇ ನೆನೆಸಬೇಕಾಯಿತು. ಸೋಪ್ ಕಹಾ ಹೈ (ಸಾಬೂನು ಎಲ್ಲಿದೆ) ಎಂದೆ. ಅದಕ್ಕೆ ಅವನು ಯೇ ತೇರಾ ಬಾಪ್ ಕಾ ಘರ್ ನಹೀ ಹೈ (ಇದು ನಿಮ್ಮಪ್ಪನ ಮನೆ ಅಲ್ಲ) ಅಂದ. ಆಮೇಲೆ ಯಾವ ರೀತಿ ಆಯುಷ್ಕರ್ಮ ಆಯಿತು ಎಂಬುದನ್ನು ನೀವೇ ಊಹಿಸಿಕೊಳ್ಳಬಹುದು. ಮೊಂಡು ಕತ್ತಿ. ಪರಪರ ಕೆರೆಯಲು ಮೊದಲು ಮಾಡಿದ. ಆ ಕರ್ಮ ಮುಗಿಯುವ ಹೊತ್ತಿಗೆ ನನ್ನ ಮುಖದ ಮೇಲಿದ್ದ ಮುಕ್ಕಾಲು ಪಾಲು ಕೂದಲೆಲ್ಲಾ ಹೋಗಿದ್ದವು. ಅವುಗಳಲ್ಲಿ ಕೆಲವು ಬೇರು ಸಹಿತ ಹೋಗಿದ್ದವು. ಅಲ್ಲಲ್ಲಿ ಕೆಲವು ಕೆಂಪು ಪಟ್ಟೆಗಳು ಕಾಣಿಸಿಕೊಂಡವು. ಜೈಲಿನಲ್ಲಿ ಇದೇ ನನ್ನ ಕೊನೆಯ ಕರ್ಮ ಎಂದು ನಿರ್ಧರಿಸಿದೆ.

***

## ಸ್ವಾತಂತ್ರ ಯೋಧರ ಪಿಂಚಣಿ

ಕ್ವಿಟ್ ಇಂಡಿಯಾ ಚಳುವಳಿಗಿಂತ ಹಿಂದೆ ನಡೆದ ಒಂದು ಸತ್ಯಾಗ್ರಹದಲ್ಲಿ ಭಾಗವಹಿಸಿದ್ದ ಒಬ್ಬ ಸ್ವಾತಂತ್ರ ಯೋಧರು ಆಮೇಲೆ ನಾಲ್ಕಾರು ಮನೆ, ಆಸ್ತಿ ಮತ್ತು ಸಮಾಜದಲ್ಲಿ ಸ್ಥಾನವನ್ನು ಪಡೆದರು. ಅವರು ನನಗೆ ಹಲವು ದಶಕಗಳಿಂದ ತಿಳಿದವರು. ಅವರು ನನ್ನೊಂದಿಗೆ ಒಂದು ದಿನ ಪ್ರಾಸಂಗಿಕವಾಗಿ ಮಾತಾಡುತ್ತಾ ನೀವು ಸ್ವಾತಂತ್ರಯೋಧರ ಮಾಸಾಶನವನ್ನು ತೆಗೆದುಕೊಳ್ಳುತ್ತಿದ್ದೀರ ಎಂದು ಕೇಳಿದರು. ಇಲ್ಲ ಎಂದೆ. ಅದಕ್ಕೆ ಅವರು ನಾನು ತೆಗೆದುಕೊಳ್ಳುತ್ತಿದ್ದೇನೆ ನೀವೂ ತೆಗೆದುಕೊಳ್ಳಿ ಅಂದರು. ಅದಕ್ಕೆ ನಾನು ನನಗೆ ಊಟಕ್ಕೆ ಆಗುವಷ್ಟು ಹಣವಿದೆ ಅಲ್ಲದೆ ನಾವೆಲ್ಲ ಅಂದು ಸ್ವಾತಂತ್ರ ಚಳುವಳಿಯಲ್ಲಿ ಭಾಗವಹಿಸಿದ್ದು ಕರ್ತವ್ಯ ಪಾಲನೆಗಾಗಿ. ಅದಕ್ಕೆ ಪ್ರತಿಫಲವಾಗಿ ಇಂದು ಮಾಸಾಶನವನ್ನೋ ಅಥವಾ ಇನ್ನಾವುದೇ ಸೌಲಭ್ಯವನ್ನೋ ಪಡೆಯುವುದಕ್ಕಾಗಿ ಅಲ್ಲ. ಜೈಲಿಗೆ ಹೋದದ್ದು ಒಂದು ಲೇವಾದೇವಿ ಆಗಬಾರದು. ಸ್ವಾತಂತ್ರಯೋಧರ ಮಾಸಾಶನ ವ್ಯವಸ್ಥೆ ತುಂಬಾ ಬಡವರಿಗಾಗಿ ಮಾಡಿದ್ದು ಅಂದೆ. ಅವರಿಗೆ ಮುಖದ ಮೇಲೆ ಹೊಡೆದ ಹಾಗಾಯಿತು. ಮುಖ ಪೆಚ್ಚಾಯಿತು. ಇಂಥಾ

ನಿದರ್ಶನಗಳಿಗೇನೂ ಕೊರತೆಯಿಲ್ಲ. ಜೈಲಿಗೆ ಹೋದದ್ದನ್ನು ಹೋಗದೇ ಇದ್ದುದನ್ನು ಸಾಕಷ್ಟು ಜನ ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ. ಎಲ್ಲಿಯವರೆಗೆ ಸೇವೆಗೆ ಕರ್ತವ್ಯ ಪ್ರಜ್ಞೆಗೆ ಮೌಲ್ಯಕ್ಕೆ ಗಾಂಧೀಜಿಯ ಮೂಲ ತತ್ತ್ವಗಳಿಗೆ ನಾವು ಆದ್ಯತೆ ಕೊಡುವುದಿಲ್ಲವೋ ಅಲ್ಲಿಯ ತನಕ ನಮ್ಮ ದೇಶಕ್ಕೆ ಉಳಿಗಾಲವಿಲ್ಲ.

***

## ಯರವಾಡ ಜೈಲಿನ ದಿನಚರಿ

ನಮ್ಮ ಉಡುಪು ಜೈಲು ಖೈದಿಗಳು ಹಾಕಿಕೊಳ್ಳುವಂತಹ ಒಂದು ನಿಕ್ಕರ್ ಮತ್ತು ಅರ್ಧ ತೋಳಿನ ಷರಟು. ತಲೆಗೆ ಒಂದು ವಿಧವಾದ ಗುಂಡನೆಯ ಟೋಪಿ ಇಂತಹ ಒಂದು ಜೊತೆ ಸಮವಸ್ತ್ರ/. ಜೊತೆಗೆ ಖೈದಿಯ ನಂಬರು. ಈ ನಂಬರಿನಿಂದಲೇ ನಮ್ಮನ್ನು ಗುರುತಿಸುತ್ತಿದ್ದುದು. ಊಟ ಮಾಡುವುದಕ್ಕೆ ಕಬ್ಬಿಣದ ಜರಡಿಯಂತಿರುವ ( ಅಂದರೆ ಅದರಲ್ಲಿ ರಂಧ್ರಗಳಿರಲಿಲ್ಲ ) ಒಂದು ತಟ್ಟೆ. ಅಳೆಯುವ ಪಾವಿನಂತಿರುವ ಒಂದು ಕಬ್ಬಿಣದ ಲೋಟ. ಆ ಲೋಟವನ್ನು ನೀರು ಕುಡಿಯುವುದರಿಂದ ಹಿಡಿದು ಸ್ನಾನ ವಗೈರೆ ಎಲ್ಲ ಕೆಲಸಗಳಿಗೂ ಉಪಯೋಗ ಮಾಡಬೇಕಾಗಿದ್ದಿತು. ಊಟದ ತಟ್ಟೆಯ ಕಿಲುಬು ತೆಗೆಯುವುದೇ ನಿತ್ಯದ ಒಂದು ಕೆಲಸವಾಗಿದ್ದಿತು. ಊಟವಂತೂ ಹೇಳತೀರದು. ಸಾಮಾನ್ಯವಾಗಿ ಸಾಕಷ್ಟು ಕಲ್ಲುಗಳಿಂದ ಕೂಡಿದ ಜೋಳದ ( ಕೆಲವು ಸಲ ಮುಗ್ಗಿದ ) ಭಾಕ್ರಿ ( ರೊಟ್ಟಿ ) ಹಚ್ಚಿಗಿರುವ ಎಲ್ಲಾ ವಿಧವಾದ ಎಲೆಗಳನ್ನು ಹಾಕಿ ಅರ್ಧಂಬರ್ಧ ಬೇಯಿಸಿದ ಒಂದು ವಿಧವಾದ ಹುಳಿ. ಬೆಳಗಿನ ಉಪಾಹಾರಕ್ಕೆ ಒಂದು ಪಾವಿನಷ್ಟು ಗಂಜಿ. ಅಂಥಾ ಗಂಜಿಯನ್ನು ನಾವು ಎಂದೂ ಕುಡಿದಿರಲಿಲ್ಲ.

ಪ್ರತಿ ಭಾನುವಾರ ವಿಶೇಷ ಊಟ ಎಂದರೆ ಜೋಳದ ರೊಟ್ಟಿಗೆ ಬದಲಾಗಿ ಒಂದು ಗೋಧಿ ಚಪಾತಿ, ಒಂದು ಬೆಲ್ಲದುಂಡೆ ಮತ್ತು ಚಿಕ್ಕ ಉದ್ಧರಣೆಯಲ್ಲಿ ಹಿಡಿಸುವಷ್ಟು ಕಡಲೆಕಾಯಿ ಎಣ್ಣೆ. ರಾಜಕೀಯ ಖೈದಿಗಳಲ್ಲಿ ಮೂರು ದರ್ಜೆಗಳಿದ್ದವು. ನೆಹರು ಅಂತಹ ಉನ್ನತ ನಾಯಕರಿಗೆ ಎ ಕ್ಲಾಸು. ಮಧ್ಯಮ ವರ್ಗದ ನಾಯಕರಿಗೆ ಬಿ ಕ್ಲಾಸು. ನಮ್ಮಂತಹವರಿಗೆ ಸಿ ಕ್ಲಾಸು. ಸೌಲಭ್ಯಗಳು ಖೈದಿಗಳ ಅಂತಸ್ತಿನ ಮೇಲೆ ಅವಲಂಬಿತವಾಗುತ್ತವೆ. ಕಠಿಣ ಶಿಕ್ಷೆಯನ್ನು ಅನುಭವಿಸುವ ಸಿ ಕ್ಲಾಸ್ ಖೈದಿಗಳು ದಿನಕ್ಕೆ 8 ಗಂಟೆ ಬಡಗಿ ಕೆಲಸ, ಹೊಲಿಯುವ ಕೆಲಸ ಅಥವಾ ಅವರು ಕೊಟ್ಟ ಇನ್ನಾವುದಾದರೂ ಕೆಲಸ ಮಾಡಬೇಕಾಗಿತ್ತು. ನಾನು ಹೊಲಿಗೆ ಕೆಲಸ ಮಾಡುತ್ತಿದ್ದೆ. ನಿತ್ಯ ಬೆಳಗ್ಗೆ ಗಾಂಧಿ ಆಶ್ರಮದ ಪ್ರಾರ್ಥನೆ. ವಾರಕ್ಕೆ ಆರು ದಿನ ಕೆಲಸ. ಬಿಡುವಿನ ವೇಳೆಯಲ್ಲಿ ಪುಸ್ತಕಗಳನ್ನು ಓದುತ್ತಿದ್ದೆವು. ಅಲ್ಲಿ ನಾನು ಸಾಕಷ್ಟು ಹಿಂದಿ ಪುಸ್ತಕಗಳನ್ನು ಓದಿದ್ದೆ. ಹೀಗೆ ನಮ್ಮ ಶಿಕ್ಷೆ ಅವಧಿ ಮುಗಿದ ಮೇಲೆ ನಮ್ಮ ಬಿಡುಗಡೆಯಾದಾಗ ವಾಪಸ್ ಬೆಂಗಳೂರಿಗೆ ಬಂದು ನಮ್ಮ ವಿದ್ಯಾರ್ಥಿನಿಲಯ ಸೇರಿಕೊಂಡೆವು. ■

● ದಂನಆ

■ ರಾಜನಂತೆ ನಡೆಯಿರಿ ಅಥವಾ ಯಾರು ರಾಜನಾದರೆ ನನಗೇನು ಎಂಬ ಠೀವಿಯಲ್ಲಿ ನಡೆಯಿರಿ.

■ ಥಿಂಕಿಂಗ್ ಈಸ್ ಡಿಫಿಕಲ್ಟ್. ದಟ್ಸ್ ವೈ ಮೋಸ್ಟ್ ಪೀಪಲ್ ಜಡ್ಜ್.

■ ಇತರರನ್ನು ದೂಷಿಸುವವನು ತನ್ನ ಬದುಕಿನ ಪಯಣದಲ್ಲಿ ಬಹುದೂರ ಸಾಗಬೇಕಿದೆ. ತನ್ನನ್ನೇ ದೂಷಿಸಿಕೊಳ್ಳುವವನು ಅರ್ಧ ದೂರ ಸಾಗಿ ಬಂದಿದ್ದಾನೆ. ಯಾರನ್ನೂ ದೂಷಿಸದವನು ಗುರಿ ಮುಟ್ಟಿದ್ದಾನೆ.

■ ಜಡ್ಜ್ ಮಿ ಬೈ ದಿ ಪೀಪಲ್ ಐ ಅವಾಯ್ಡ್.

■ ಕಾಲನ್ನು ರಕ್ಷಿಸಲು ಇಡೀ ನೆಲಕ್ಕೆ ಕಾರ್ಪೆಟ್ ಹಾಕುವದಕ್ಕಿಂತ ಪಾದರಕ್ಷೆ ಧರಿಸುವುದು ಸುಲಭೋಪಾಯ.

■ ಇಫ್ ಯು ಡೋಂಟ್ ಫೈಂಡ್ ಟೈಂ ಫಾರ್ ಟುಡೇಸ್ ಫಿಟ್‌ನೆಸ್ ಯು ಆರ್ ಸೇವಿಂಗ್ ಟೈಂ ಫಾರ್ ಟುಮಾರೋಸ್ ಸಿಕ್‌ನೆಸ್.

■ ನಿಮ್ಮ ಮನಸ್ಸಿಗೆ ಘಾಸಿಯಾದಾಗ ಗಮನಿಸಿ. ಬದುಕು ನಿಮಗೆ ಏನನ್ನೋ ಕಲಿಸಲು ಪ್ರಯತ್ನಿಸುತ್ತಿದೆ.

■ ಎಲ್ಲ ಬಿರುಗಾಳಿಗಳೂ ನಮ್ಮ ಬದುಕಿಗೆ ತಡೆ ಒಡ್ಡುವುದಿಲ್ಲ. ಕೆಲವು ಹಾದಿಯನ್ನು ಸುಗಮಗೊಳಿಸುತ್ತವೆ.

■ ಹಾಫ್ ಆಫ್ ಅವರ್ ಸಾರೋಸ್ ವಿ ಅರ್ನ್ ಬೈ ಎಕ್ಸಪೆಕ್ಟಿಂಗ್ ಗುಡ್ ಥಿಂಗ್ಸ್ ಫ್ರಂ ರಾಂಗ್ ಪೀಪಲ್ ಅಂಡ್ ದಿ ಅದರ್ ಹಾಫ್ ಬೈ ಡಿಟೆಕ್ಟಿಂಗ್ ರಾಂಗ್ ಥಿಂಗ್ಸ್ ಇನ್ ಗುಡ್ ಪೀಪಲ್.

■ ಗಳಿಸಿರುವ ಒಳ್ಳೆಯ ಹೆಸರನ್ನು ಕಾಪಾಡಿಕೊಳ್ಳಬೇಕು. ಏಕೆಂದರೆ ನಾವು ಹೋದ ಮೇಲೂ ಅದು ಉಳಿದಿರುತ್ತದೆ.

■ ಎಲ್ಲ ಮುಚ್ಚಿದ ಕಣ್ಣುಗಳು ನಿದ್ರಿಸುವದಿಲ್ಲ. ಎಲ್ಲ ತೆರದ ಕಣ್ಣುಗಳೂ ನೋಡುವದಿಲ್ಲ.

■ ಯು ಕೆನ್ ಮೇಕ್ ಮಿಸ್ಟೇಕ್ಸ್ ಬಟ್ ಯು ಆರ್ ನಾಟ್ ಎ ಫೈಲ್ಯೂರ್ ಅಂಟಿಲ್ ಯು ಸ್ಟಾರ್ಟ್ ಬ್ಲೇಮಿಂಗ್ ಅದರ್ಸ್ ಫಾರ್ ದೋಸ್ ಮಿಸ್ಟೇಕ್ಸ್.

■ ನೀವು ಯಾರನ್ನಾದರೂ ಸಂಪೂರ್ಣವಾಗಿ ನಂಬಿದರೆ ನಿಮಗೆ ಇವೆರಡರಲ್ಲಿ ಒಂದು ಸಿಗುತ್ತದೆ: ಎ ಪರ್ಸನ್ ಫಾರ್ ಲೈಫ್ ಆರ್ ಎ ಲೆಸನ್ ಫಾರ್ ಲೈಫ್.

■ ಅತ್ಯುತ್ತಮ ಡಿಗ್ರೀ: ಬಿ calm.

■

# ಕ್ಯಾಪ್ಟನ್ ನರ್ಗೀಸ ಮತ್ತು ಮೋನಿಕಾರ ರುಬಾಯ್ಯಾತು

**●ಸಂಜಯ ಹಾವನೂರ**

**(ಓದುವ ಮುನ್ನ ಶ್ರೀ ಶ್ರೀನಿವಾಸ ವೈದ್ಯರು ಕನ್ನಡದ ಶ್ರೇಷ್ಠ ಪ್ರಬಂಧಕಾರರಲ್ಲಿ ಜೇಷ್ಠರು. ಅವರ "ಮನಸುಖರಾಯನ ಮನಸ್ಸು" ಸಂಕಲನವನ್ನು ಓದದವರೇ ಪಾಪಿಗಳು. ನಮ್ಮ ಬಳಗದವರೊಬ್ಬರು ತಾವು ಮತ್ತೆ ಮತ್ತೆ ಓದಿದ್ದು ಮಾತ್ರವಲ್ಲ ಅದರ ಐವತ್ತು ಪ್ರತಿಗಳನ್ನು ಕೊಂಡು ಇತರರಿಗೆ ಹಂಚಿ ಪುಣ್ಯ ಕಟ್ಟಿಕೊಂಡಿದ್ದಾರೆ. ಅನುಕರಣೆಯೇ ಆದರದ ಅತ್ಯುನ್ನತ ನಿದರ್ಶನವೆಂಬ ಸೂಕ್ತಿಯನ್ನು ಪಾಲಿಸಿ, ಶ್ರೀ ವೈದ್ಯರ 'ಪುಸ್ತಕದ ಹುಳ'ದ ಧಾಟಿಯಲ್ಲಿ ನನ್ನ ಲಹರಿಯನ್ನು ಹರಿಬಿಟ್ಟಿದ್ದೇನೆ. ಒಂದು ವ್ಯತ್ಯಾಸವೆಂದರೆ ಇಲ್ಲಿ ಹೇಳಿರುವ ಪುಸ್ತಕ ಮತ್ತು ಅದರ ಕೈ ಬರಹ ನಿಜಕ್ಕೂ ನಮ್ಮ ಮನೆಯಲ್ಲಿದೆ. ಮಿಕ್ಕಿದ್ದು ನನ್ನ ಅಧಿಕಪ್ರಸಂಗ)**

***

ನಮ್ಮ ಪುಸ್ತಕ ಸಂಗ್ರಹದಲ್ಲಿ ಉಮರ್ ಖಯ್ಯಾಮನ ರುಬಾಯ್ಯಾತದ ಒಂದು ಹಳೆಯ ಪ್ರತಿ ಇದೆ. ನೂರು ವರ್ಷಕ್ಕೂ ಹಿಂದೆ ಬೈಂಡು ಮಾಡಿದ ಅಪೂರ್ವ ಕೃತಿ. ಈಗಲೂ ಮಾಸದ ಮುದ್ರಣ. ಆದರೆ ಉಮರನ ಒಸಗೆಗಳಿಗಿಂತ ನನ್ನನ್ನು ಆಕರ್ಷಿಸುವುದು ಅದರ ಮೊದಲನೇ ಪುಟದಲ್ಲಿನ ಕೈಬರಹ –

To Capt, Nargis

A token of remembrance of the happy moments we spent together this day a year before.

(Sd-) Monica DeSouza, 17 August 1919

ಈ ಮೋನಿಕಾ ಮತ್ತ ಆ ಕ್ಯಾಪ್ಟನ್ ಯಾರು ಇರಬಹುದು ಅಂತ ನಾನು ಎಷ್ಟೋ ವರ್ಷ ತಲಿ ಕೆಡಿಸಿಕೊಂಡೀನಿ ಅಥವಾ ಮಂಗಳೂರ ಮಂದಿ ಹೇಳುವಂತೆ ಮಂಡೆ ಬಿಸಿ ಮಾಡಿಕೊಂಡದ್ದುಂಟು. 1918ರಲ್ಲಿ ಜಗತ್ತಿನಲ್ಲಿ ಅನೇಕಾನೇಕ ಘಟನೆಗಳು ನಡೆದಿದ್ದವು. ಮೊದಲನೆಯ ಮಹಾಯುದ್ಧದಲ್ಲಿ ದೇಶಗಳ ಬಡಿದಾಟ, ಸ್ಪಾನಿಶ್ ಫ್ಲೂದ ಹಾವಳಿ, ಇವೆಲ್ಲದರ ಬಗ್ಗೆ ಇತಿಹಾಸಕಾರರು ಸಾವಿರಾರು ಪುಸ್ತಕಗಳನ್ನು ಬರೆದು ಹಾಕಿದ್ದಾರೆ. ಆದರೆ ಅದೇ ವರ್ಷದ ಆಗಸ್ಟ 17ರಂದು ಮೋನಿಕಾ ಡಿಸೌಜಾ ಮತ್ತು ಕ್ಯಾಪ್ಟನ್ ನರ್ಗೀಸರು ಏನು ಮಾಡಿದರು ಅನ್ನುವದರ ಬಗ್ಗೆ ಮಾತ್ರ ಅದೇಕೋ ದಿವ್ಯ ನಿರ್ಲಕ್ಷ. ನಿರ್ವಾಹವಿಲ್ಲದೇ ಅದರ ತಪಶೀಲು ನನ್ನಂಥವನ ಕೊರಳಿಗೆ ಬಿದ್ದಿದೆ.

ಯಾರಿರಬಹುದು ಈ ಮೋನಿಕಾ? ಅವಳ ಬರವಣಿಗೆಯನ್ನು ನೋಡಿದಾಗಲೆಲ್ಲ ಹಲವು ಹದಿಗಲ್ಪನೆಗಳು ಹೊಳೆಯತೊಡಗುತ್ತವೆ. ಸುರುಳಿ ಸುರುಳಿಯಾಗಿ ಸುತ್ತಿದ ಶಿಷ್ಟ ಅಕ್ಷರಮಾಲೆಯ ಕ್ಯಾಲಿಗ್ರಾಫಿ. ಅಂದರ ಛಲೋ ಕಲತಾಕಿ, ಕುಲೀನ ಮನಿತನದ ಕನ್ಯಾ ಕಾಣತಾಳ. ಆ ಕ್ಯಾಪ್ಟನ್ ನರಗೀಶನೂ ಅಕೀಗೆ ತಕ್ಕ ಸುಂದರ ಸುಕುಮಾರನೇ ಇರಬೇಕು. 1900ರ ಕಾಲದಾಗ ಬ್ರಿಟಿಶರ ಸೈನ್ಯದಾಗ ಕ್ಯಾಪ್ಟನ್ ಆಗೋದು ಅಂದರ ಸಾಮಾನ್ಯ ಅಲ್ಲ. ಆವಾಗಿನ ಯುಗದಾಗ ವಿಮಾನ ದಳ ಇದ್ದಿಲ್ಲ ನೌಕಾಪಡೆಯೊಳಗ ಇದ್ದಾನು. 1918ರ ಆಗಸ್ಟ ಅಂದರ ಮೊದಲನೇ ಮಹಾಯದ್ದದ ಪೀಕು, ಆದರೂ ನಡುವ ಪುರಸೊತ್ತು ಮಾಡಿಕೊಂಡು ಮುಂಬಯಿಗೆ ಬಂದು ಮೋನಿಕಾನ ಜೋಡಿ ಹಾಯಾಗಿ ಒಂದು ದಿನಾ ಕಳದಾನ. "ಯುದ್ಧ ಇನ್ನೇನು ಮುಗಿಯಿತು ಪ್ರಿಯೆ. ಕೆಲವೇ ತಿಂಗಳಲ್ಲಿ ನಾನು ರಾಜ ನೀನು ರಾಣಿ ಆಗಿ ನಮ್ಮದೇ ಅರಮನೆಯಲ್ಲಿರಬಹುದು"

ಎಂದು ರಮಿಸಿ ಹೊಗಿದ್ದಾನೆ. ಅದರ ಸವಿ ನೆನಪು ಇರೋದು ಸಹಜ. ಮುಂದಿನದು ದುರಂತ ಆಗಿರಬೇಕು. ಅವನ ಹಡಗಿನ ಮ್ಯಾಲೆ ಜರ್ಮನ್ನರು ದಾಳಿ ಮಾಡಿದಾಗ ಕ್ಯಾಪ್ಟನ್ ವೀರಗತಿಕೋ ಪ್ರಾಪ್ತ ಹುವೆ ಅಂತ ಸುದ್ದಿ ಬಂದು ಪಾಪ ಮೋನಿಕಾ, ಇಷ್ಟು ವರ್ಷ ಅವನೇ ನನ್ನ ಪತಿ ಅಂತ ಕಾದವಳು ವಾರಗಟ್ಟಲೇ ಕಣ್ಣೀರಿನಾಗ ಕೈ ತೊಳದಾಳ. ಜೀವನದಾಗ ವೈರಾಗ್ಯ ಮೂಡಿ ನನ್ನ ನರಗೀಶ ಇಲ್ಲದಿದ್ದರ ಯಾವ ನರೇಶನೂ ಬ್ಯಾಡ ಚಿರಕುಮಾರಿಯಾಗಿ ದೀನ ದಲಿತರ ಸೇವಾದಾಗ ಆಯಷ್ಯ ಕಳೀತೇನಿ ಅಂತ ಪ್ರತಿಜ್ಞಾ ಮಾಡಿ ಬಾಂದ್ರಾದಾಗ ಚರ್ಚ ಆಫ ಅವರ ಲೇಡಿ ಆಫ ಮೌಂಟ ಕಾರ್ಮೆಲ ಸೇರಿಕೊಂಡಿರತಾಳ.

ಕುಶಾಗ್ರಮತಿಗಳಾದ ವಾಚಕರಿಗೆ ಮುಂದಿನದು ಈಗಾಗಲೇ ಹೊಳದಿರಬೇಕು. ಕ್ಯಾಪ್ಟನ್ ಸತ್ತಿರಂಗಿಲ್ಲ. ನೌಕಾಘಾತದಾಗ ಘಾಯಗೊಂಡಿರತಾನ. ಆರು ತಿಂಗಳು ಚೇತರಿಸಿಕೊಂಡು ಮತ್ತ ಮುಂಬಯಿಗ ಬರತಾನ. ಲಂಡನ್ನಿನ ಮಿಲಿಟರಿ ಹಾಸ್ಪಿಟಲ್ಲದಾಗ ಬ್ರಿಟಿಶ್ ನರ್ಸು ಕೊಟ್ಟ ರುಬಾಯ್ಯಾತ ಸಂಗ್ರಹ ಓದಿಕೋತ ಮೋನಿಕಾನ ನೆನಪಿನ್ಯಾಗ ದಿನಾ ರಾತ್ರಿ ಕಳದಾನ. ಅದರಾಗೂ ಬೂಗೆನ ಹೂವಿನ ಮರದ ಕೆಳಗ, ಮಧುಪಾತ್ರೆಯ ಜೊತೆಗೆ ರಮ್ಯ ಕವನಗಳ ಪುಸ್ತಕ, ಬದಿಯಲ್ಲಿ ನೀನು ಹಾಡುತ್ತಿದ್ದರೆ ಬೆಂಗಾಡೂ ನನಗೆ ಸ್ವರ್ಗ ಎಂಬ ರುಬಾಯಿ ಅವಳನ್ನು ಗಮನದಲ್ಲಿ ಇಟ್ಟುಕೊಂಡೇ ಬರದಿರಬೇಕು ಅಂತ ಕಲ್ಪನಾ ಮಾಡ್ಯಾನ. ತಮ್ಮ ಹಿಂದಿನ ಭೆಟ್ಟಿಯ ವರ್ಷಾಂತಿಕದ ದಿನ ತನ್ನ ಪ್ರಿಯತಮೆಯನ್ನು ಸರಪ್ರಾಯಿಜ ಮಾಡಲೆಂದು ಬಂದವನನ್ನು ವಿಧಿ ಬಾಂದ್ರಾದ ಚರ್ಚಿಗೆ ಎಳೆದುಕೊಂಡು ಹೋಗಿ ಚಕಿತಗೊಳಿಸಿದೆ. ಕರುಣಾಳು ಕುರುಬನ ಸೇವಾಕ್ಕ ತನ್ನ ತನುಮನಗಳನ್ನು ಅರ್ಪಿಸುವ ದೀಕ್ಷಾ ತಗೊಂಡಿರುವ ಮೋನಿಕಾ ಹಿಂದೆ ಸರಿಯುವದಿಲ್ಲ. ದೈವದ ದುರ್ವಿಲಾಸವನ್ನು ಹಳಿದು ಅಳುತ್ತಲೇ ರುಬಾಯ್ಯಾತದ ಪುಸ್ತಕಕ್ಕೆ ಸಹಿ ಹಾಕಿ ಕಳಿಸಿದ್ದಾಳೆ.

ಈ ಕಥಾನಕವನ್ನು ಸುಖಾಂತಗೊಳಿಸಿದ್ದರೆ ನಿಮ್ಮಪ್ಪನ ಗಂಟೇನು ಹೋಗುತ್ತಿತ್ತು ಎಂದು ನೀವು ಕೇಳಬಹುದು. ಪ್ರೇಮಕಹಾನಿಗಳ ಅಪೀಲು ಇರುವದು ದುರಂತದಲ್ಲಿಯೇ. ಬೇಕಿದ್ದರೆ ಶೇಕ್ಸಪಿಯರನನ್ನೇ ಕೇಳಿರಿ. ತನ್ನ ಕ್ಯಾಪ್ಟನ್ನನನ್ನು ಮದುವೆಯಾಗಿ ಅರ್ಧ ಕ್ರಿಕೆಟ್ ಟೀಮಿಗೆ ಆಗುವಷ್ಟು ಮಕ್ಕಳನ್ನು ಹಡೆದಿದ್ದರೆ ಮೋನಿಕಾ ನಮ್ಮ ಪುಸ್ತಕಕ್ಕ ಸಹಿಯಾದರೂ ಎಲ್ಲಿ ಮಾಡತಿದ್ದಳು?


ಅಂತ್ಯ ಏನಾದರಾಗಲಿ ನೂರು ವರ್ಷಗಳ ಹಿಂದೆ 1918ರ ಆಗಸ್ಟ ತಿಂಗಳಲ್ಲಿ ಮೋನಿಕಾ ಡಿಸೌಜಾ ಎಂಬ ಮುಗ್ಧ ಕಿಶೋರಿ, ಒಂದು ವರ್ಷದ ನಂತರವೂ ನೆನಪಿಡುವ ಕ್ಷಣಗಳನ್ನು ಒಂದು ದಿನ ಕಳೆದಿದ್ದಾಳೆ ಎಂಬ ರಮ್ಯ ಕಲ್ಪನೆಯಲ್ಲಿದ್ದವಗ ಇತ್ತೀಚೆಗೆ ಸಿಡಿಲು ಬಡಿದಂಥ ಆಘಾತ! ಪುಸ್ತಕವನ್ನು ಅರ್ಪಿಸಿಕೊಂಡ ಕ್ಯಾಪ್ಟನ್ ಸಹಾ ಇನ್ನೊಬ್ಬ ಕನ್ಯೆಯೆಂದು ಯಾವನೋ ಸಂಶೋಧನಾ ಮಾಡ್ಯಾನ ಅಂತ ಗೊತ್ತಾತು. ಶುದ್ಧ ಅಧಿಕಪ್ರಸಂಗ. ಈ ಅವ್ವೇಕಿ ಮುಂಡೇಗಂಡಗ ಯಾಕ ಬೇಕಿತ್ತು ಉಸಾಬರಿ ಅಂತ ಹೇಳತೀರದ ಸಂತಾಪವಾದರೂ ಕುತೂಹಲ ತಡಿದೇ ಪೂರ್ತಿ ಓದಿದೆ. 1910–20 ಅಂದರ ಮುಂಬಯಿ ಗುಜರಾತಗಳಲ್ಲಿ ಗಾಂಧೀಜಿಯವರ ಘಾಳಿ ಜೋರಾಗಿ ಬೀಸತಿದ್ದ ದಶಕಗಳು. ಮುಂಬಯಿಯಲ್ಲಿ ಎಷ್ಟೋ ಮಹಿಳೆಯರು ಪ್ರಭಾವಿತರಾಗಿ ಚಳುವಳಿಗೆ ಧುಮುಕಿದ್ದರು. ಹಿಂದು ಮುಸ್ಲಿಮರಂತೂ ಸರಿಯೆ. ಪಾರಸಿ, ದಾವೂದಿ ಬೊಹರಾ ಕೋಮಿನ ಶ್ರೀಮಂತ, ಸುಶಿಕ್ಷಿತ ತರುಣಿಯರೂ ಸೇರಿದ್ದರು. ಅವರಲ್ಲಿ ಹೆಸರಾದವರು ದಾದಾಭಾಯಿ ನವರೋಜಿಯವರ ನಾಲ್ವರು ಮೊಮ್ಮಕ್ಕಳು ಪೆರಿನ್, ನರ್ಗೀಸ್, ಗೋಶಿಬೆನ್ ಮತ್ತು ಕುರ್ಶೆದ್. ರಾಷ್ಟ್ರೀಯ ಸ್ತ್ರೀ

ಸಭಾ ಎಂಬ ಸಂಘಟನೆಯನ್ನು ಕಟ್ಟಿಕೊಂಡು ವಿದೇಶೀ ವಸ್ತುಗಳನ್ನು ಮಾರುವ ಅಂಗಡಿಗಳನ್ನು ಪಿಕೆಟಿಂಗ್ ಮಾಡಿ ಬಂಧನಕ್ಕೆ ಒಳಗಾಗಿದ್ದ ಧೀರೆಯರು. ಮೊದಲ ಮೂವರು ತಮ್ಮ ಕೋಮಿನಲ್ಲಿಯೇ ಮೂವರು ಸೋದರ ಸಂಬಂಧಿಗಳನ್ನು, ಉತ್ತರ ಕರ್ನಾಟಕದ ಭಾಷೆಯಲ್ಲಿ ಹೇಳುವದಾದರೆ ಕಕ್ಕಕ್ಕನ ಮಕ್ಕಳು, ಮದುವೆಯಾಗಿದ್ದಕ್ಕೆ ಎಲ್ಲರಿಗೂ ಒಂದೇ ಕ್ಯಾಪ್ಟನ್ ಎಂಬ ಅಡ್ಡ ಹೆಸರು ಬಿದ್ದಿತ್ತು. 1954ರಲ್ಲಿ ಪದ್ಮಶ್ರೀ ಪುರಸ್ಕಾರಗಳ ಘೋಷಣೆಯಾದ ಮೊದಲ ವರ್ಷವೇ ಸ್ವಾತಂತ್ರ ಚಳವಳಿಯಲ್ಲಿ ಭಾಗವಹಿಸಿದ್ದಕ್ಕೆ ಪೆರಿನ್ ಕ್ಯಾಪ್ಟನ್ನಳಿಗೆ ಆ ಗೌರವ ಸಿಕ್ಕಿದೆ. ನಮ್ಮವಳು ನರ್ಗೀಸಳ ಜೀವನ ಅಷ್ಟು ಸುಗಮವಾಗಿರಲಿಲ್ಲ. ಅವಳ ಗಂಡ ದೊರಾಬ್ಜಿ ಕ್ಯಾಪ್ಟನ್ ಚಿಕ್ಕ ವಯಸ್ಸಿನಲ್ಲಿ ತೀರಿಕೊಂಡ ಮೇಲೆ ಅನಾರೋಗ್ಯ ಕಾಡಿ ಅಂಗವಿಕಲಳೂ ಆಗಿದ್ದಳು. ಗಾಂಧೀಜಿಯವರೊಡನೆ ಎಲ್ಲರದ್ದೂ ಖಾಸ ಪರಿಚಯ, ಪತ್ರ ವ್ಯವಹಾರ ಇತ್ತು ಮಾತ್ರವಲ್ಲ ಯರವಾಡಾ ಜೈಲಿನಲ್ಲಿ ಆರು ವರ್ಷ ಇದ್ದಾಗ ತಮ್ಮನ್ನು ಭೆಟ್ಟಿಯಾಗಲಿಕ್ಕೆ ಬರುವವರ ಯಾದಿಯಲ್ಲಿ ನರ್ಗೀಸಳೂ ಇರಬೇಕೆಂದು ಗಾಂಧೀಜಿಯವರೇ ಸರಕಾರಕ್ಕೆ ಅರ್ಜಿ ಸಲ್ಲಿಸಿದ್ದರು. ಅಂತೂ ಒಂದಲ್ಲ ಒಂದು ಅರ್ಥದಾಗ ನಮ್ಮ ನರ್ಗೀಸಳು ಕ್ಯಾಪ್ಟನ್ನಳೇ.

ಮತ್ತ ಮೋನಿಕಾ? ಈ ಕ್ಯಾಪ್ಟನ್ನಳ ಯಾವ ಟೀಮಿನ್ಯಾಗ ಇದ್ದಳು? ವರ್ಷಗಟ್ಟಲೇ ನೆನಪಿಡುವಂಥಾ ದಿನ ಯಾವದು ಕಳದಾಳ. ಇದೊಂದು ಹೊಸಾ ಕಗ್ಗಂಟು ಹಾಕಿತಲ್ಲ? ಡಿಸೌಜಾ ಅಂದರ ಖಟ್ಟಾ ಕ್ಯಾಥೊಲಿಕ್ ಕ್ರಿಶ್ಚಿಯನ್ ಪೈಕಿ ಕಾಣತಾಳ. ಗೋವಾದಾಗ ದಾಬೋ ಲಿಮ್, ತಾಳೋ ಲಿಮ್, ಅಥವಾ ಬಿಚ್ಚೋ ಲಿಮ್ ಥರದ ಹೆಸರಿರೋ ಊರ ಕಡೆಯಾಕಿ ಇರಬೇಕು. ಅಪ್ಪ ಅವ್ವ ಜುಲುಮಿ ಮಾಡಿ ಆರ್ಥಡಾಕ್ಸ ಕಾನ್ವೆಂಟಿಗೆ ಸೇರಿಸಿರತಾರ. 1918ರ ಆಗಸ್ಟದಾಗ ಯಾವದೋ ಸೇವಾ ಕಾರ್ಯಕ್ರಮ ಅಂತ ಮುಂಬಯಿಗೆ ಬಂದವಳು ನರ್ಗೀಸ ಕ್ಯಾಪ್ಟನ್ನಳ ಭಾಷಣಾ ಕೇಳಿ ಅಗದಿ ಪ್ರಭಾವಿತಳಾಗಿ ಅವಳನ್ನು ಭೆಟ್ಟಿಯಾಗಿರಬೇಕು. ಇಬ್ಬರೂ ಆದರ್ಶವಾದೀ ವನಿತೆಯರು. ಸ್ವರಾಜ್ಯ ಸತ್ಯಾಗ್ರಹ ಸ್ತ್ರೀ ಸ್ವಾತಂತ್ರ್ಯ ಅಂತ ತಾಸುಗಟ್ಟಲೇ ಪಟ್ಟಾಂಗ ಹಾಕ್ಯಾರ. ಆದರ ಅವತ್ತಿನ ಕಾರ್ಯಕ್ರಮ ಅಲ್ಲಿಗೇ ಮುಗದಿಲ್ಲ. ಹೊಸಾ ಗೆಳತಿ ಮೋನಿಕಾನ್ನ ಮಧ್ಯಾಹ್ನ ಫಾರಸೀ ಹಾಟೆಲ್ಲಿಗೆ ಕರಕೊಂಡು ಹೋಗಿ ಧನ್ಸಕ್, ಪತ್ರಾಚಿ ಮಚ್ಚಿ ಫಲೂದಾ ಕೊಡಿಸಿರಬೇಕು. ಅಥವಾ ಸಂಜೀನ್ಯಾಗ ಇಬ್ಬರೂ ಚೌಪಾಟಿ ಬೀಚಿನ್ಯಾಗ ಮೊಣಕಾಲ ತನಕ ಬರೋ ಟೈಟ ಪ್ಯಾಂಟ ಹಾಕಿಕೊಂಡು ನೀರಿನ್ಯಾಗ ಓಡಿ ತೀಖಾ ಭೇಲ ಪಾನಿಪುರಿ ತಿಂದಿರಬೇಕು. ನರ್ಗೀಸ್ ಎಷ್ಟಂದರೂ ಮುಂದುವರಿದ ಧಿಟ್ಟ ಮಹಿಳೆ. ರಾತ್ರಿ ಒಂಭತ್ತು ಘಂಟೆದ ನಂತರ ತಗಿಯೋ ಗಿರಗಾಂವ ಭೈಯ್ಯಾನ ಅಂಗಡಿಯೊಳಗ ಸ್ಪೆಶಲ್ ಸಮೋಸಾ ರುಚಿ ನೋಡಿ ಮಲಾಯಿದಾರ ಲಸ್ಸಿ ಕುಡದ ಹೋಗಬೇಕು ಅಂತ ಜುಲುಮಿ ಮಾಡಿ ಕರಕೊಂಡು ಹೋಗ್ಯಾಳ. ಸೊದರಿಯರು ಮಾತೆಯರನ್ನ ತಯಾರು ಮಾಡುವ ಕಾನ್ವೆಂಟಿನ ಖಡಕ್ ಶಿಸ್ತಿನ್ಯಾಗ, ಸಂಜೀ ಆರರ ನಂತರ ಮನೀ ಹೊರಗ ಕಾಲು ಹಾಕಲಿಕ್ಕೆ ಧೈರ್ಯ ಇಲ್ಲದ ಬೆಳದಿದ್ದ ಮೋನಿಕಾಗ ಅದೊಂದು ಎಂದೂ ಮರೆಯಲಾರದ ಅನುಭವ ಆಗಿದ್ದು ಆಶ್ಚರ್ಯ ಅಲ್ಲ. ಊರಿಗೆ ಹೋದ ಮ್ಯಾಲ ತಿಂಗಳು ತಿಂಗಳೂ ಎರಡಾಣೆ ನಾಲ್ಕಾಣೆ ಅಂತ ಉಳಿಸಿ ಪಣಜಿಗೆ ಬಂದಾಗ ಪ್ರಸಿದ್ಧ ಫರ್ನಾಂಡಿಸ ಆಂಡ ಸನ್ಸ್ ಪುಸ್ತಕದ ಅಂಗಡ್ಯಾಗ 2 ರೂ 6 ಆಣೆಗೆ ಕೊಂಡು ಸಹಿ ಮಾಡಿ ನೆನಪಿಗೆ ಅಂತ ಕಳಿಸಿ ಕೊಟ್ಟಾಳ.

ಆದರೆ ಮೋನಿಕಾ ಡಿಸೌಜಾ ನರ್ಗೀಸಳಿಗೆ ಕೊಟ್ಟ ಈ ಪುಸ್ತಕ ನಮ್ಮ ಮನೆಗೆ ಹ್ಯಾಗೆ ಬಂತು? ಅದಕ್ಕೂ ಒಂದು ರೋಮಾಂಚಕಾರಿ ಹಿನ್ನೆಲೆ ಇರಲೇಬೇಕು!

■




# ಸ್ವಾತಂತ್ರ್ಯದ ಅಮೃತ ಮಹೋತ್ಸವ ೨೦೨೨

